ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 18 ಗುರುವಾರ 2024

ಮೈಸೂರು ಮಿತ್ರ 45

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 3 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com
₹4

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ

ರೈತರ ಸಾಲ ಮನ್ನಾ; ಗೃಹಲಕ್ಷ್ಮಿಗೆ ವರ್ಷಕ್ಕೆ 1.24 ಲಕ್ಷ ಗ್ಯಾರಂಟಿ

● ಮಂಡ್ಯದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಘೋಷಣೆ ● ಅಂಗನವಾಡಿ, ಆಶಾ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳ; ಗುತ್ತಿಗೆ ಪದ್ಧತಿ ರದ್ದು; ಕಾಯಂ ಉದ್ಯೋಗ

ಮಂಡ್ಯ, ಏ.17(ಮೋಹನ್‌ರಾಜ್)– ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ದೇಶದ ಎಲ್ಲಾ ರೈತರ ಸಾಲ ಮನ್ನಾ ಮಾಡುತ್ತೇವೆ. ಕರ್ನಾಟಕದಲ್ಲಿ ಗೃಹಲಕ್ಷ್ಮಿ ಯೋಜನೆಯಡಿ ಹಾಲಿ ನೀಡುತ್ತಿರುವ ವಾರ್ಷಿಕ 24 ಸಾವಿರ ರೂ. ಜೊತೆ ಕೇಂದ್ರದಿಂದ 1 ಲಕ್ಷ ರೂ. ಸೇರಿಸಿ ರಾಜ್ಯದ ಮಹಿಳೆಯರಿಗೆ ಒಟ್ಟು 1.24 ಲಕ್ಷ ರೂ. ನೀಡಲಾಗುವುದು ಎಂದು ಎಐಸಿಸಿ ನಾಯಕ ರಾಹುಲ್ ಗಾಂಧಿ ಭರವಸೆ ನೀಡಿದರು.

ಬುಧವಾರ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಪ್ರಜಾಧ್ವನಿ–2 ಸಮಾವೇಶದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಪರ ಪ್ರಚಾರ ನಡೆಸಿದ ಅವರು, ನಾವು ಅಧಿಕಾರಕ್ಕೆ ಬಂದರೆ ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರ ಗೌರವ ಧನ ಹೆಚ್ಚಳ ಮಾಡುತ್ತೇವೆ. ಸರ್ಕಾರಿ ಹಾಗೂ ಅರೆಸರ್ಕಾರಿ ನೌಕರರ ಗುತ್ತಿಗೆ ಪದ್ಧತಿಯನ್ನು ರದ್ದುಗೊಳಿಸಿ, ಕಾಯಂ ಉದ್ಯೋಗ ಕಲ್ಪಿಸುತ್ತೇವೆ. ಉದ್ಯೋಗ ಭದ್ರತಾ ಯೋಜನೆಯನ್ನು ಜಾರಿ ಮಾಡುತ್ತೇವೆ ಎಂದರು. ಎನ್‌ಡಿಎ ಸರ್ಕಾರ ಕೇವಲ 25 ಜನ ಶ್ರೀಮಂತರು ಹಾಗೂ ಉದ್ಯಮಿಗಳ ಏಳಿಗೆಗಾಗಿ ಹಗಲಿರುಳು ಶ್ರಮಿಸುತ್ತಿದೆ. ಆದರೆ ಕಾಂಗ್ರೆಸ್ ಪಕ್ಷ ಬಡವರು, ರೈತರು ಹಾಗೂ ಕಾರ್ಮಿಕರ ಏಳಿಗೆಗೆ ಹಾಗೂ ಅವರ ಅಭಿವೃದ್ಧಿಗೆ ಶ್ರಮಿಸುತ್ತಿದೆ ಎಂದರು. ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ರಚನೆಗೂ ಮುನ್ನ ಐದು ಗ್ಯಾರಂಟಿಗಳನ್ನು ನೀಡಿದ್ದೆವು. ಸರ್ಕಾರ ಬಂದಾಗಿನಿಂದ ಈ ಗ್ಯಾರಂಟಿ ಯೋಜನೆಗಳನ್ನು ಅನುಷ್ಠಾನಗೊಳಿಸಿ, ಕೊಟ್ಟ ಮಾತು ಉಳಿಸಿಕೊಂಡಿದ್ದೇವೆ. ಕೇಂದ್ರ ದಲ್ಲೂ ಕಾಂಗ್ರೆಸ್ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದರೆ ಇನ್ನಷ್ಟು ಗ್ಯಾರಂಟಿ ಯೋಜನೆಗಳು ದೇಶದ ಜನರ ಮನೆ ಬಾಗಿಲಿಗೆ ತಲುಪಲಿದೆ. ಬಿಜೆಪಿ ಆಡಳಿತದಲ್ಲಿರುವ ● 6ನೇ ಪುಟಕ್ಕೆ



ಬುಧವಾರ ಮಂಡ್ಯದಲ್ಲಿ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ಚುನಾವಣಾ ಪ್ರಚಾರ ಸಮಾವೇಶವನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಉದ್ಘಾಟಿಸಿದರು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಇತರರು ಚಿತ್ರದಲ್ಲಿದ್ದಾರೆ.

ಮೈಸೂರಲ್ಲಿ ಯದುವೀರ್ ಭರ್ಜರಿ ರೋಡ್ ಶೋ

ಶ್ರೀರಾಂಪೇಟೆ ರಾಮಮಂದಿರದಲ್ಲಿ ರಾಮನವಮಿ ಆಚರಿಸಿದ ನಂತರ ಪ್ರಚಾರ ರಥವೇರಿ ಮತ ಯಾಚನೆ; ಜನರಿಂದ ಮಾರ್ಗದುದ್ದಕ್ಕೂ ಅದ್ಧೂರಿ ಸ್ವಾಗತ

ಮೈಸೂರು, ಏ.17(ಆರ್‌ಕೆ)– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ಬುಧವಾರ ಮೈಸೂರಿನ ಶ್ರೀರಾಂಪೇಟೆಯಲ್ಲಿರುವ ಶ್ರೀರಾಮ ಮಂದಿರದಲ್ಲಿ ರಾಮನವಮಿ ಆಚರಿಸಿದ ನಂತರ ನಗರದ ವಿವಿಧೆಡೆ ರೋಡ್ ಶೋ ನಡೆಸಿ ಭರ್ಜರಿ ಪ್ರಚಾರ ಮಾಡಿದರು. ಈ ವೇಳೆ ಹಲವೆಡೆ ಸಾರ್ವಜನಿಕರು ಅವರಿಗೆ ಗೌರವ ಸಮರ್ಪಿಸಿ, ಬೆಂಬಲ ಸೂಚಿಸಿದರು.



ಶ್ರೀರಾಂಪೇಟೆಯಲ್ಲಿನ ಶ್ರೀರಾಮ ಮಂದಿರದಲ್ಲಿ ರಾಮನವಮಿ ಪೂಜೆಯಲ್ಲಿ ಪಾಲ್ಗೊಂಡ ನಂತರ ಮಾತನಾಡಿದ ಅವರು, ಶ್ರೀರಾಮನ ಸಮಾನತೆ, ವೈಚಾರಿಕತೆ, ಆದರ್ಶಗಳಿಂದ ಕೂಡಿದ ಸಮಸಮಾಜದ ಪರಿಕಲ್ಪನೆ ನಮಗೆ ಸದಾ ಪ್ರೇರಣೆಯಾಗಿದೆ ಎಂದು ಅವರು ಹೇಳಿದರು. ಈ ಬಾರಿಯ ಶ್ರೀರಾಮ ● 7ನೇ ಪುಟಕ್ಕೆ

ಇಂದಿನಿಂದ ಸಿಇಟಿ

ಪರೀಕ್ಷಾ ಅಕ್ರಮ ತಡೆಗೆ ಇತಿಹಾಸದಲ್ಲಿ ಕಂಡು ಕೇಳರಿಯದ ಎಚ್ಚರಿಕಾ ಕ್ರಮ

● ಕೈ ಗಡಿಯಾರ ಕಟ್ಟುವಂತಿಲ್ಲ; ತುಂಬು ತೋಳಿನ ಶರ್ಟ್ ಧರಿಸುವಂತಿಲ್ಲ ● ನೀಲಿ, ಕಪ್ಪು ಪೆನ್ ಮಾತ್ರ ಬಳಸಬೇಕು; ಎಲೆಕ್ಟ್ರಾನಿಕ್ ಪದಾರ್ಥಗಳಿಗೆ ಅವಕಾಶವಿಲ್ಲ ● ಇಂದು ಬೆಳಗ್ಗೆ 10.30 ರಿಂದ 11.50 ರವರೆಗೆ ಜೀವಶಾಸ್ತ್ರ; 2–30 ರಿಂದ 3.50ರವರೆಗೆ ಗಣಿತ, ನಾಳೆ 10.30 ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50ರವರೆಗೆ ರಸಾಯನಶಾಸ್ತ್ರ, ಏ.20ರಂದು ಬೆಳಗ್ಗೆ 11.30ರಿಂದ 12.30ರವರೆಗೆ ಹೊರನಾಡು, ಗಡಿನಾಡಿನ ಕನ್ನಡಿಗರಿಗೆ ಪರೀಕ್ಷೆ

ಬೆಂಗಳೂರು, ಏ.17(ಕೆಎಂಶಿ)– ಲೋಕಸಭಾ ಚುನಾವಣಾ ಕಾವಿನ ಮಧ್ಯದಲ್ಲೇ ವಿದ್ಯಾರ್ಥಿ ಜೀವನದ ಬದಲಾವಣೆಯ ಮಹತ್ವದ ಘಟ್ಟದಲ್ಲಿರುವವರು ನಾಳೆಯಿಂದ ವೃತ್ತಿ ಶಿಕ್ಷಣ ಕೋರ್ಸ್‌ಗಳ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಎದುರಿಸಲಿದ್ದಾರೆ.

ಹಿಂದಿನ ಕಹಿ ಅನುಭವಗಳ ಹಿನ್ನೆಲೆಯಲ್ಲಿ ಪ್ರವೇಶ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳು ಸಮಯ ನೋಡಲು ಗಡಿಯಾರವನ್ನೂ ಕಟ್ಟಿಕೊಂಡು ಹೋಗುವಂತಿಲ್ಲ. ಅಕ್ರಮಗಳಿಗೆ ಅವಕಾಶವಿಲ್ಲದಂತೆ ಭಾರಿ ಬಿಗಿಭದ್ರತೆಯೊಂದಿಗೆ 2024ನೇ ಸಾಲಿನ ಸಿಇಟಿ ಪರೀಕ್ಷೆ ನಡೆಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಸಕಲ ಸಿದ್ಧತೆ ಮಾಡಿಕೊಂಡಿದೆ.

ಪರೀಕ್ಷೆಗೆ ಹಾಜರಾಗುವ ಅಭ್ಯರ್ಥಿಗಳಿಗೆ ಕೆಲವು ಷರತ್ತು ಹಾಗೂ ಸೂಚನೆಗಳನ್ನು ಒಳಗೊಂಡ ಪ್ರವೇಶ ಪತ್ರಗಳನ್ನು ಪರೀಕ್ಷಾ ಪ್ರಾಧಿಕಾರ ಈಗಾಗಲೇ ಕಳುಹಿಸಿಕೊಟ್ಟಿದೆ. ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾದ ಒಂದು ವಾರದ ಬಳಿಕ ಬೆಂಗಳೂರಿನಲ್ಲಿ 167 ಪರೀಕ್ಷಾ ಕೇಂದ್ರಗಳು ಸೇರಿದಂತೆ ರಾಜ್ಯಾದ್ಯಂತ 737 ಕೇಂದ್ರಗಳಲ್ಲಿ ಸಿಇಟಿ ಪರೀಕ್ಷೆ ನಡೆಯಲಿದೆ. ಸುಗಮ ಪರೀಕ್ಷೆಗೆ ಕಟ್ಟುನಿಟ್ಟಿನ ನಿಗಾ ವಹಿಸಲಾಗಿದೆ. ರಾಜಧಾನಿ ಬೆಂಗಳೂರಿನಲ್ಲಿ ಈ ಬಾರಿ 648 ವಿಶೇಷಚೇತನ ಅಭ್ಯರ್ಥಿಗಳು ಸಿಇಟಿ ಪರೀಕ್ಷೆ ಬರೆಯಲಿದ್ದಾರೆ. ಪರೀಕ್ಷೆಯಲ್ಲಿ ● 6ನೇ ಪುಟಕ್ಕೆ

ಮೈಸೂರು ಮಿತ್ರ

ಏ.24ರ ಸಂಜೆ 6ರಿಂದ 26ರಂದು ಮತದಾನ ಮುಕ್ತಾಯದವರೆಗೆ ನಿಷೇಧಾಜ್ಞೆ

ಮೈಸೂರು ನಗರ ವ್ಯಾಪ್ತಿ ಸಂಬಂಧ ನಗರ ಪೊಲೀಸ್ ಆಯುಕ್ತರ ಆದೇಶ



ಮೈಸೂರು,ಏ.17(ಪಿಎಂ)– ಲೋಕಸಭಾ ಸಾರ್ವತ್ರಿಕ ಚುನಾವಣೆ 2024ರ ಹಿನ್ನೆಲೆಯಲ್ಲಿ ಮೈಸೂರು ನಗರ ವ್ಯಾಪ್ತಿಗೆ ಸಂಬಂಧಿಸಿದಂತೆ ಮತಗಟ್ಟೆಗಳ ಸುತ್ತಲೂ 200 ಮೀಟರ್ ವ್ಯಾಪ್ತಿಯಲ್ಲಿ ಏ.24ರ ಸಂಜೆ 6 ಗಂಟೆಯಿಂದ ಏ.26ರಂದು ಮತದಾನ ಮುಕ್ತಾಯಗೊಳ್ಳುವವರೆಗೆ ನಿಷೇಧಾಜ್ಞೆ ಜಾರಿಗೊಳಿಸಿ ನಗರ ಪೊಲೀಸ್ ಆಯುಕ್ತ ಬಿ.ರಮೇಶ್ ಆದೇಶ ಹೊರಡಿಸಿದ್ದಾರೆ. ಜೊತೆಗೆ 15 ವಿಧದ ಷರತ್ತುಗಳನ್ನೂ ವಿಧಿಸಿ ದಂಡ ಪ್ರಕ್ರಿಯಾ ಸಂಹಿತೆ 1973ರ ಕಲಂ 144ರಡಿ ನಿಷೇದಾಜ್ಞೆ ಆದೇಶ ಹೊರಡಿಸಲಾಗಿದೆ.

ಷರತ್ತುಗಳು: ಮೈಸೂರು ನಗರ ಪೊಲೀಸ್ ಕಮೀಷನರೇಟ್ ವ್ಯಾಪ್ತಿಯಲ್ಲಿ 5ಕ್ಕಿಂತ ಹೆಚ್ಚು ಜನರು ಗುಂಪು ಸೇರುವುದು, ಮೆರವಣಿಗೆ ಅಥವಾ ಸಭೆ ಸಮಾರಂಭ ಜರುಗಿಸುವುದನ್ನು ನಿಷೇಧಿಸಲಾಗಿದೆ. ಶಸ್ತ್ರ, ಬಡಿಕೆ, ಬರ್ಚಿ, ಖಡ್ಗ, ಗದೆ, ಬಂದೂಕು, ಚೂರಿ, ಲಾಠಿ, ದೊಣ್ಣೆ, ಚಾಕು ಅಥವಾ ದೇಹಕ್ಕೆ ಅಪಾಯವನ್ನು ಉಂಟು ಮಾಡಬಹುದಾದ ಯಾವುದೇ ಮಾರಕಾಸ್ತ್ರಗಳನ್ನು ತೆಗೆದುಕೊಂಡು ಹೋಗುವುದನ್ನು ಮತ್ತು ಅವುಗಳೊಂದಿಗೆ ತಿರುಗಾಡುವುದನ್ನು ನಿಷೇಧಿಸಲಾಗಿದೆ. ಮತಗಟ್ಟೆಗಳ 200 ಮೀಟರ್ ಒಳಗೆ ಚುನಾವಣೆ ಪ್ರಚಾರ ನಿಷೇಧಿಸಲಾಗಿದೆ. ಈ ಪ್ರದೇಶ ವ್ಯಾಪ್ತಿಯಲ್ಲಿ ಬರುವ ಜೆರಾಕ್ಸ್ ಮಳಿಗೆ, ಬುಕ್‌ಸ್ಟಾಲ್, ಸೈಬರ್ ಕೆಫೆಗಳನ್ನು ನಿರ್ಬಂಧಿಸಲಾಗಿದೆ.

ಮತಗಟ್ಟೆಯ 200 ಮೀಟರ್ ವ್ಯಾಪ್ತಿಯಲ್ಲಿ ಕಲ್ಲುಗಳ ಕ್ಷಾರ ಪದಾರ್ಥ ಇಲ್ಲವೆ ಸ್ಫೋಟಕ ವಸ್ತು ಇತ್ಯಾದಿಗಳನ್ನು ತೆಗೆದುಕೊಂಡು ಹೋಗುವುದನ್ನು ಹಾಗೂ ಶೇಖರಿಸುವುದನ್ನು ನಿಷೇಧಿಸಲಾಗಿದೆ. ಮನುಷ್ಯ ಶವಗಳು ಅಥವಾ ಅವುಗಳ ಆಕೃತಿ ಅಥವಾ ಪ್ರತಿಮೆಗಳ ಪ್ರದರ್ಶನ, ದಹನ ಮಾಡುವುದನ್ನು ನಿಷೇಧಿಸಲಾಗಿದೆ.

ಸದರಿ ಸ್ಥಳದಲ್ಲಿ ಬಹಿರಂಗವಾಗಿ ಘೋಷಣೆ ಕೂಗುವುದು, ಪದ ಹಾಡುವುದು, ವಾದ್ಯ ಬಾರಿಸುವುದು, ವ್ಯಾಖ್ಯಾನ ಕೊಡುವುದು, ಸನ್ನೆ ಅಥವಾ ನಕಲಿ ಪ್ರದರ್ಶನವನ್ನು ಹಾಗೂ ಸಾರ್ವಜನಿಕ ಸಭ್ಯತೆ ಅಥವಾ ನೀತಿಯನ್ನು ಆಕ್ರಮಿಸಬಹುದಾದ ಯಾವುದನ್ನೂ ಮಾಡುವಂತಿಲ್ಲ.

ಸಾರ್ವಜನಿಕವಾಗಿ ಯಾವುದೇ ವ್ಯಕ್ತಿ ಪ್ರಚೋದನಾತ್ಮಕ ಹಾಗೂ ಉದ್ರೇಕಕಾರಿ ಹಾಡುಗಳು ಹಾಡುವಂತಿಲ್ಲ. ಕೂಗಾಟ ಮಾಡಿದರೆ ಕ್ರಮ ಕೈಗೊಳ್ಳಲಾಗುವುದು. ವ್ಯಕ್ತಿಗಳ ತೇಜೋವಧೆ ಮಾಡುವಂತಹ ಚಿತ್ರಗಳು, ಚಿಹ್ನೆಗಳು, ಪ್ರತಿಕೃತಿಗಳು ಮುಂತಾದವುಗಳನ್ನು ಪ್ರದರ್ಶಿಸುವಂತಿಲ್ಲ. ಸಾರ್ವಜನಿಕ ಗಾಂಭೀರ್ಯ ಹಾಗೂ ನೈತಿಕತೆಗೆ ಭಂಗ ತರುವಂತಹ ಪ್ರಕ್ರಿಯೆಗಳಲ್ಲಿ ತೊಡಗುವಂತಿಲ್ಲ.

ಯಾವುದೇ ವ್ಯಕ್ತಿ ಬಹಿರಂಗವಾಗಿ ಮೇಲೆ ವಿವರಿಸಿದ ಮಾರಕಾಸ್ತ್ರ, ಸ್ಫೋಟಕ ವಸ್ತು, ವಿನಾಶಕಾರಿ ವಸ್ತುಗಳು ಹಾಗೂ ಇತರ ಆಕ್ಷೇಪಾರ್ಹ ವಸ್ತುಗಳನ್ನು ಹೊಂದಿರುವುದು ಕಂಡು ಬಂದ ಕೂಡಲೇ ಅವುಗಳನ್ನು ವಶಪಡಿಸಿಕೊಳ್ಳಲು ಪೊಲೀಸ್ ಅಧಿಕಾರಿಗಳಿಗೆ ಅಧಿಕಾರ ಇರುತ್ತದೆ. ಅಂತಹ ಮಾರಕಾಸ್ತ್ರಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಮಾಡಿಕೊಳ್ಳಲಾಗುವುದರ ಜೊತೆಗೆ ಸಂಬಂಧಿಸಿದ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು.

ಶವ ಸಂಸ್ಕಾರಕ್ಕೆ ಅಥವಾ ಮದುವೆ ಮತ್ತು ಧಾರ್ಮಿಕ ಮೆರವಣಿಗೆಗಳಿಗೆ ಈ ಆಜ್ಞೆ ಅನ್ವಯಿಸುವುದಿಲ್ಲ. ಆದರೆ ಮದುವೆ ಮತ್ತು ಇತರೆ ಧಾರ್ಮಿಕ ಮೆರವಣಿಗೆಗಳಲ್ಲಿ ಯಾವುದೇ ಚುನಾವಣಾ ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಹಾಗೂ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ಬಾರದಂತೆ ಎಚ್ಚರಿಕೆ ವಹಿಸಬೇಕು.

ಮತಗಟ್ಟೆಗಳ ಸುತ್ತ 200 ಮೀಟರ್ ಅಂತರದಲ್ಲಿ ಮೊಬೈಲ್ ಫೋನ್, ಕಾರ್ಡ್‌ಲೆಸ್ ಫೋನ್ ಅಥವಾ ಇನ್ನಿತರೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ತೆಗೆದುಕೊಂಡು ಹೋಗುವುದನ್ನು ನಿಷೇಧಿಸಲಾಗಿದೆ (ಚುನಾವಣಾ ಕಾರ್ಯದಲ್ಲಿ ಜಿಲ್ಲಾ ಚುನಾವಣಾಧಿಕಾರಿ, ಚುನಾವಣಾಧಿಕಾರಿ ಅವರಿಂದ ಅನುಮತಿ ಪಡೆದ ಅಧಿಕಾರಿ ಮತ್ತು ಸಿಬ್ಬಂದಿ ಹೊರತುಪಡಿಸಿ). ಮತಗಟ್ಟೆಗಳ ಸುತ್ತ 200 ಮೀಟರ್ ಪರಿಮಿತಿಯಲ್ಲಿ ಪ್ರಚಾರಕ್ಕೆ ಸಂಬಂಧಿಸಿದಂತೆ ಪೋಸ್ಟರ್, ಬ್ಯಾನರ್ ಅಥವಾ ಇನ್ನಾವುದೇ ವಸ್ತುಗಳನ್ನು ಬಳಸುವಂತಿಲ್ಲ. ಈ ಅವಧಿಯಲ್ಲಿ ಧ್ವನಿವರ್ಧಕಗಳನ್ನು ಬಳಸುವಂತಿಲ್ಲ.

ಕಲ್ಯಾಣ ಮಂಟಪ, ಸಮುದಾಯ ಭವನ, ಹೋಟೆಲ್ ಹಾಗೂ ಅತಿಥಿ ಗೃಹಗಳಲ್ಲಿ ವಾಸ್ತವ್ಯ ಹೂಡಿದವರ ಪಟ್ಟಿಗಳ ಪರಿಶೀಲನೆ ಮಾಡಿ ಮತದಾರರಲ್ಲದವರನ್ನು ಕ್ಷೇತ್ರದ ವ್ಯಾಪ್ತಿಯಿಂದ ಹೊರಗೆ ಕಳುಹಿಸಲು ಕ್ರಮ ವಹಿಸಲಾಗುವುದು. ಸದರಿ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಕಾನೂನಿನ ಅನ್ವಯ ಕಠಿಣ ಕ್ರಮವನ್ನು ಜರುಗಿಸಲಾಗುವುದು. ಈ ಆದೇಶವು ಮತದಾನ ಸಿಬ್ಬಂದಿ, ಅಧಿಕಾರಿಗಳು, ಪೊಲೀಸ್ ಅಧಿಕಾರಿಗಳು, ಚುನಾವಣಾ ಕಾರ್ಯನಿರತ ಸಿಬ್ಬಂದಿ ಮತ್ತು ಅಧಿಕಾರಿಗಳು ಹಾಗೂ ಒಬ್ಬೊಬ್ಬರಾಗಿ ಮತಗಟ್ಟೆಗಳಿಗೆ ತೆರಳಿ ಮತದಾನ ಮಾಡುವ ಮತದಾರರಿಗೆ ಅನ್ವಯಿಸುವುದಿಲ್ಲ ಎಂದು ಆದೇಶದಲ್ಲಿ ತಿಳಿಸಲಾಗಿದೆ.


ಪತ್ನಿಯ ಕೊಚ್ಚಿ ಕೊಂದ ಪತಿ ಬಂಧನ

ಮೈಸೂರು, ಏ.17(ಎಸ್‌ಪಿಎನ್)– ಜೂಜಾಟ ಮತ್ತು ಕುಡಿತದ ದಾಸನಾಗಿದ್ದ ಪತಿರಾಯ ಕೌಟುಂಬಿಕ ಕಲಹದಿಂದಾಗಿ ತನ್ನ ಹೆಂಡತಿಯನ್ನು ಮಚ್ಚಿನಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಮೈಸೂರಿನ ಸರ್ದಾರ್ ವಲ್ಲಭಭಾಯ್ ಪಟೇಲ್ ನಗರದ ನ್ಯೂ ಕಿಶೋರ್ ಅಂಗಡಿ ಸಮೀಪ ಸೋಮವಾರ ಬೆಳಗಿನ ಜಾವಾ ನಡೆದಿದೆ.

ಮೈಸೂರು ಆಲನಹಳ್ಳಿ ನಿವಾಸಿ ಶಿಲ್ಪ(26) ಕೊಲೆಯಾದ ಗೃಹಿಣಿಯಾಗಿದ್ದು, ಈಕೆ ಚಾಮರಾಜನಗರ ತಾಲೂಕು ಸಂತೆಮರಹಳ್ಳಿ ಸಮೀಪದ ನವಿಲೂರು ಗ್ರಾಮದ ಮಹೇಶ್‌ನನ್ನು ವಿವಾಹವಾಗಿದ್ದು, ಈ ದಂಪತಿಗೆ 6 ಮತ್ತು 4 ವರ್ಷದ ಇಬ್ಬರು ಮಕ್ಕಳಿದ್ದಾರೆ. ಮದುವೆಯಾದ ಪ್ರಾರಂಭದಲ್ಲಿ ಈ ದಂಪತಿ ಸುಖಕರ ಜೀವನ ನಡೆಸುತ್ತಿದ್ದರು. ದಿನ ಕಳೆದಂತೆ ಮಹೇಶ್ ಇಸ್ಪೀಟ್ ಮತ್ತು ಕುಡಿತದ ದಾಸನಾಗಿ ವಿಪರೀತ ಸಾಲಮಾಡಿಕೊಂಡಿದ್ದ. ಹಣಕಾಸು ವಿಚಾರವಾಗಿ ಆಗಾಗ ದಂಪತಿಗಳ ನಡುವೆ ಜಗಳವಾಗುತ್ತಿತ್ತು.

ಪತಿ ಮಹೇಶ್ ವರ್ತನೆಯಿಂದ ರೋಸಿ ಹೋದ ಶಿಲ್ಪ, ಆಲನಹಳ್ಳಿನಲ್ಲಿರುವ ತಾಯಿ ಮನೆಗೆ ಬಂದು ನೆಲೆಸಿದ್ದರು. ಇದರಿಂದ ಮತ್ತಷ್ಟು ಕುಪಿತನಾಗಿ ಪತಿ ಮಹೇಶ್ ಆಲನಹಳ್ಳಿಯ ಅತ್ತೆ ಮನೆಯಲ್ಲೇ ತಂಗಿದ್ದ ಸೋಮವಾರ ರಾತ್ರಿ ಮತ್ತೆ ಮಹೇಶ್ ಮತ್ತು ಶಿಲ್ಪ ನಡುವೆ ಜಗಳವಾಡಿಕೊಂಡಿದ್ದರು. ಮುಂಜಾನೆ ವೇಳೆಗೆ ದಂಪತಿ ನಡುವಿನ ಜಗಳ ವಿಪರೀತಕ್ಕೆ ತಿರುಗಿ ರಸ್ತೆಗೆ ಬಂದಿದ್ದಾರೆ. ಮನೆಯಲ್ಲಿದ್ದ ಮಚ್ಚಿನಿಂದ ಶಿಲ್ಪ ಕುತ್ತಿ ಮೇಲೆ ಮಹೇಶ್ ಹಲ್ಲೆ ನಡೆಸಿದ್ದು, ತೀವ್ರವಾಗಿ ಗಾಯಗೊಂಡಿದ್ದ ಆಕೆಯನ್ನು ಆಲನಹಳ್ಳಿ ಪೊಲೀಸರು ಕಾವೇರಿ ದಾಖಲಿಸಿದ್ದರೂ ಚಿಕಿತ್ಸೆ ಫಲಕಾರಿಯಾಗದೇ ಶಿಲ್ಪ ಸಾವನ್ನಪ್ಪಿದ್ದಾರೆ. ನಂತರ ತಲೆ ಮರೆಸಿಕೊಂಡಿದ್ದ ಮಹೇಶ್‌ನನ್ನು ಆಲನಹಳ್ಳಿ ಠಾಣೆ ಇನ್ಸ್‌ಪೆಕ್ಟರ್ ಸ್ವರ್ಣ ಮತ್ತು ಸಿಬ್ಬಂದಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿ, ಆತನನ್ನು ನ್ಯಾಯಾಂಗ ಬಂಧನಕ್ಕೆ ಒಳಪಡಿಸಲಾಗಿದೆ.

ಸಾಹಿತಿ ಬನ್ನೂರು ರಾಜುಗೆ '60'; ನಾಳೆ ಅಭಿನಂದನಾ ಸಮಾರಂಭ



ಮೈಸೂರು, ಏ. 17–ಕಳೆದ ಸುಮಾರು ನಾಲ್ಕು ದಶಕಗಳಿಂದಲೂ ಬರವಣಿಗೆಯಲ್ಲಿ ತಮ್ಮನ್ನು ತೊಡಗಿಸಿಕೊಂಡು ಅಕ್ಷರ ಲೋಕದಲ್ಲಿ ಬಹುತೇಕ ಎಲ್ಲಾ ಪ್ರಾಕಾರಗಳಲ್ಲೂ ಕೃಷಿ ಮಾಡಿ ನೂರಕ್ಕೂ ಹೆಚ್ಚು ಪುಸ್ತಕಗಳನ್ನು ನಾಡಿಗೆ ನೀಡಿರುವ ಪತ್ರಕರ್ತರೂ ಆದ ಸಾಹಿತಿ ಬನ್ನೂರು ಕೆ.ರಾಜು, ಅರವತ್ತು ತುಂಬಿ, ಅರುವತ್ತೊಂದನೇ ವಸಂತಕ್ಕೆ ಹೆಜ್ಜೆಯಿರಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಸಾಹಿತ್ಯ ಮತ್ತು ಪತ್ರಿಕೋದ್ಯಮ ಕ್ಷೇತ್ರಗಳೆರಡರಲ್ಲೂ ಸೇವೆ ಸಲ್ಲಿಸುತ್ತಿರುವ ಬನ್ನೂರು ರಾಜು ಅವರಿಗೆ ಶುಭ ಹಾರೈಸಿ ಅಭಿನಂದಿಸುವ ಸಮಾರಂಭವು ಇದೇ ಏ.19 ರಂದು ನಗರದ ಅಗ್ರಹಾರದ ತ್ಯಾಗರಾಜ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಸಂಜೆ 4 ಗಂಟೆಗೆ ಆಯೋಜಿಸಲಾಗಿದೆ.

ನಗರದ ಪ್ರತಿಷ್ಠಿತ ಸೇವಾ ಸಂಸ್ಥೆಗಳಲ್ಲೊಂದಾದ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಆಶ್ರಯದಲ್ಲಿ ಸಾಹಿತಿ, ಪತ್ರಕರ್ತ ಬನ್ನೂರು ರಾಜು ಅವರ ಆತ್ಮೀಯರು, ಹಿತೈಷಿಗಳು, ಸಾಹಿತ್ಯ ಮತ್ತು ಪತ್ರಿಕಾ ಪ್ರೇಮಿಗಳು ಸೇರಿ ಬಹಳ ಸರಳವಾಗಿ ಆಚರಿಸುತ್ತಿರುವ ಈ ಸಮಾರಂಭದ ದಿವ್ಯ ಸಾನ್ನಿಧ್ಯವನ್ನು ನಗರದ ಶ್ರೀ ಹೊಸಮಠದ ಮಠಾಧ್ಯಕ್ಷರಾದ ಶ್ರೀ ಚಿದಾನಂದ ಸ್ವಾಮಿಗಳು ವಹಿಸಿ ಆಶೀರ್ವಚನ ನೀಡುವರು. ಖ್ಯಾತ ಸಂಸ್ಕೃತಿ ಚಿಂತಕ ಡಾ.ಕೆ. ರಘುರಾಮ್ ವಾಜಪೇಯಿ ಅಧ್ಯಕ್ಷತೆಯಲ್ಲಿ ನಡೆಯಲಿರುವ ಈ ಕಾರ್ಯಕ್ರಮದಲ್ಲಿ ಮೈಸೂರು ವಿ.ವಿ.ಯ ಗಾಂಧೀ ಭವನದ ನಿವೃತ್ತ ನಿರ್ದೇಶಕರೂ ಆದ ನಟರಾಜ ಪ್ರತಿಷ್ಠಾನದ ವಿಶೇಷಾಧಿಕಾರಿ ಸಾಹಿತಿ ಪ್ರೊ. ಎಸ್. ಶಿವರಾಜಪ್ಪನವರು ಅಭಿನಂದನಾ ಭಾಷಣ ಮಾಡುವರು. ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಸಾಹಿತಿ ಡಾ.ಲೀಲಾ ಪ್ರಕಾಶ್, ಚಲನಚಿತ್ರ ರಂಗದ ಖ್ಯಾತ ಉದಯೋನ್ಮುಖ ನಾಯಕ ನಟ ಸುಪ್ರೀತ್, ಉದ್ಯಮಿ ರವಿಕುಮಾರ್, ಬಸವ ಭೂಷಣ ಪ್ರಶಸ್ತಿ ಪುರಸ್ಕೃತೆ ವಿದ್ಯಾ ಹಾಗೂ ಬಿಗ್‌ಬಾಸ್ ಖ್ಯಾತಿಯ ಮಾತನಾಡುವ ಗೊಂಬೆ ಕಲಾವಿದೆ ಸುಮಾ ರಾಜ್‌ಕುಮಾರ್ ಸೇರಿದಂತೆ ಅನೇಕ ಗಣ್ಯರು ಭಾಗವಹಿಸುವರು.

ನಿಧನ



ಲಲಿತಮ್ಮ

ಕಿತ್ತೂರು, ಏ.17– ಪಿರಿಯಾಪಟ್ಟಣ ತಾಲೂಕು ಕಿತ್ತೂರಿನ ದಿವಂಗತ ಕೆ.ಎಸ್.ಸಣ್ಣಮೊಗ್ಗೇಗೌಡ ಅವರ ಪತ್ನಿ ಲಲಿತಮ್ಮ (80) ಮಂಗಳವಾರ ನಿಧನರಾದರು. ಮೃತರು ಪುತ್ರ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಕೆ.ಎಸ್. ಮಂಜುನಾಥ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಸ್ವಗ್ರಾಮದ ಕಿತ್ತೂರಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚುನಾವಣಾ ಅಕ್ರಮ, ನೀತಿ ಸಂಹಿತೆ ಉಲ್ಲಂಘನೆ ಕುರಿತು ಮಾಹಿತಿ ನೀಡಿ

ಹೋಟೆಲ್ ಮಾಲೀಕರಿಗೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ.ಮಧು ಮನವಿ



ಮಹಾನಗರ ಪಾಲಿಕೆ ಆಯುಕ್ತೆ ಡಾ. ಮಧು ಬುಧವಾರ ಪಾಲಿಕೆ ಕಚೇರಿ ಸಭಾಂಗಣದಲ್ಲಿ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಮೈಸೂರು, ಏ.17(ಆರ್‌ಕೆ)– ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ, ಹಣ, ಉಡುಗೊರೆ ಹಂಚುವುದೂ ಸೇರಿದಂತೆ ಅಕ್ರಮಗಳು ಕಂಡುಬಂದಲ್ಲಿ ಮಾಹಿತಿ ನೀಡುವಂತೆ ಮೈಸೂರು ಮಹಾನಗರ ಪಾಲಿಕೆ ಆಯುಕ್ತೆ ಡಾ.ಮಧು, ಹೋಟೆಲು ಮಾಲೀಕರಿಗೆ ಮನವಿ ಮಾಡಿದ್ದಾರೆ.

ಪಾಲಿಕೆ ಕಚೇರಿ ಹಳೆ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಹೋಟೆಲು ಮಾಲೀಕರ ಸಂಘದ ಪದಾಧಿಕಾರಿಗಳು ಹಾಗೂ ಸದಸ್ಯರೊಂದಿಗೆ ಸಭೆ ನಡೆಸಿದ ಅವರು, ಮೈಸೂರು–ಕೊಡಗು ಲೋಕಸಭಾ ಚುನಾವಣೆಗೆ 9 ದಿನ ಬಾಕಿ ಇದ್ದು, ಹೋಟೆಲು, ಲಾಡ್ಜ್‌ಗಳಲ್ಲಿ ಕೊಠಡಿ ಬಾಡಿಗೆಗೆ ಪಡೆದು ವಾಸ್ತವ್ಯ ಹೂಡುವ ಗ್ರಾಹಕರು ಚುನಾವಣಾ ಅಕ್ರಮದಲ್ಲಿ ತೊಡಗಿದರೆ, ಹಣ, ಬೆಲೆ ಬಾಳುವ ವಸ್ತುಗಳನ್ನು ವಿತರಿಸಿದರೆ, ಚುನಾವಣಾ ನೀತಿ ಸಂಹಿತೆ ಉಲ್ಲಂಘನೆ ಮಾಡುವುದು ಕಂಡುಬಂದಲ್ಲಿ ತಕ್ಷಣ ಪೊಲೀಸರಿಗಾಗಲೀ, ಫ್ಲೈಯಿಂಗ್ ಸ್ಕ್ವಾಡ್, ಸ್ಟಾಟಿಕ್ ಸರ್ವಲನ್ಸ್ ಟೀಂಗಾಗಲೀ ಮಾಹಿತಿ ನೀಡಿ ಎಂದು ತಿಳಿಸಿದರು.

ಚುನಾವಣಾ ನೀತಿ ಸಂಹಿತೆಯ ಬಗ್ಗೆ ವಿವರಿಸಿದ ಅವರು, ಮುಕ್ತ, ನ್ಯಾಯ ಸಮ್ಮತ ಹಾಗೂ ನಿರ್ಭೀತಿಯಿಂದ ಮತದಾನ ಮಾಡಲು ಸಹಕರಿಸಬೇಕು, ಅಕ್ರಮಗಳನ್ನು ತಡೆಗಟ್ಟುವುದು ಎಲ್ಲರ ಜವಾಬ್ದಾರಿಯಾಗಿರುವುದರಿಂದ ಪ್ರಮುಖವಾಗಿ ಹೋಟೆಲುಗಳಲ್ಲಿ ವಾಸ್ತವ್ಯ ಹೂಡಿ ಆಸೆ, ಆಮಿಷವೊಡ್ಡುವ ಹಾಗೂ ಹಣ ನೀಡುವ ಅಕ್ರಮ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡುವ ಮೂಲಕ ಸಹಕರಿಸುವಂತೆ ಹೋಟೆಲು ಮಾಲೀಕರಿಗೆ ಪಾಲಿಕೆ ಆಯುಕ್ತರು ತಿಳಿಸಿದರು.

ಸಿಸಿಟಿವಿ ಕ್ಯಾಮರಾಗಳನ್ನು ಸುಸ್ಥಿತಿಯಲ್ಲಿರಿಸಿ ತೀವ್ರ ನಿಗಾ ವಹಿಸಬೇಕು, ಹೋಟೆಲು ಕೊಠಡಿಯಲ್ಲಿ ಹಲವು ದಿನಗಳ ಕಾಲ ವಾಸ್ತವ್ಯ ಹೂಡುವ ಗ್ರಾಹಕರ ಚಲನ–ವಲನ, ಕಾರ್ಯಚಟುವಟಿಕೆ ಬಗ್ಗೆ ಗಮನ ಹರಿಸಬೇಕು, ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಅಧಿಕಾರಿಗಳು ಕರ್ತವ್ಯ ನಿರ್ವಹಿಸಬೇಕಾಗಿರುವುದರಿಂದ ಸಂಪೂರ್ಣ ಸಹಕಾರ ನೀಡುವಂತೆಯೂ ಡಾ.ಮಧು ಸಲಹೆ ನೀಡಿದರು.

ಉಪಾಹಾರ ನೀಡಿ: ಈ ಬಾರಿ ಮತದಾನ ಪ್ರಮಾಣ ಹೆಚ್ಚಿಸಲು ಜಿಲ್ಲಾಡಳಿತವು ಸ್ವೀಪ್ ಅಡಿ ಹಲವು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುತ್ತಿರುವುದರಿಂದ ಚುನಾವಣೆಯಲ್ಲಿ ಮತದಾನ ಮಾಡಿ ಹಿಂದಿರುಗುವ ನಾಗರಿಕರಿಗೆ ಒಂದು ಬಾರಿ ಮತದಾನದ ದಿನ ಉಚಿತವಾಗಿ ಹೋಟೆಲುಗಳಲ್ಲಿ ಉಪಾಹಾರ ನೀಡುತ್ತೇವೆಂದು ಪ್ರಕಟಣೆ ನೀಡಿ. ಆ ಮೂಲಕ ಮತದಾನ ಹೆಚ್ಚಿಸಲು ಸಹಕರಿಸಿ ಎಂದು ಕೋರಿಕೊಂಡರು.

ಕಾಲರಾ ತಡೆಗಟ್ಟಿ: ನಿಮ್ಮ ನಿಮ್ಮ ಹೋಟೆಲುಗಳನ್ನು ಸ್ವಚ್ಛವಾಗಿರಿಸಿ, ಬಿಸಿ ನೀರು ಮತ್ತು ಗುಣಮಟ್ಟದ ತಿಂಡಿ–ಊಟ–ಕಾಫಿ–ಟೀ ನೀಡುವ ಮೂಲಕ ಕಾಲರಾದಂತಹ ಸಾಂಕ್ರಾಮಿಕ ರೋಗಗಳು ಹರಡದಂತೆ ತಡೆಗಟ್ಟಲು ಸಹಕರಿಸಬೇಕೆಂದು ಡಾ. ಮಧು ಹೋಟೆಲು ಉದ್ಯಮಿಗಳಿಗೆ ಕರೆ ನೀಡಿದರು.

ಸಂಪೂರ್ಣ ಸಹಕಾರ: ಚುನಾವಣಾ ಅಕ್ರಮ ತಡೆಗಟ್ಟುವ ಮೂಲಕ ನ್ಯಾಯ ಸಮ್ಮತ ಮತದಾನ, ಮತ ಜಾಗೃತಿ, ಪ್ರೋತ್ಸಾಹ, ಹೋಟೆಲುಗಳಲ್ಲಿ ಶುಚಿತ್ವ ಕಾಪಾಡುವುದೂ ಸೇರಿದಂತೆ ಎಲ್ಲಾ ಸಲಹೆಗಳಂತೆ ಕಾರ್ಯನಿರ್ವಹಿಸಿ ಜಿಲ್ಲಾಡಳಿತ, ನಗರಪಾಲಿಕೆಯೊಂದಿಗೆ ತಾವು ಸಂಪೂರ್ಣವಾಗಿ ಸಹಕರಿಸುತ್ತೇವೆ ಎಂದು ಹೋಟೆಲು ಮಾಲೀಕರ ಸಂಘದ ಅಧ್ಯಕ್ಷ ಸಿ. ನಾರಾಯಣಗೌಡ ಇದೇ ಸಂದರ್ಭ ಭರವಸೆ ನೀಡಿದರು.

ಹೋಟೆಲು ಮಾಲೀಕರುಗಳಾದ ರವಿ ಶಾಸ್ತ್ರಿ, ಸುಬ್ರಹ್ಮಣ್ಯ ಆರ್. ತಂತ್ರಿ, ಕೆ.ಸಿ. ವಿಶ್ವನಾಥ ಭಟ್, ಉಗ್ರಯ್ಯ, ಹೇಮಂತ ಕುಮಾರ್, ಕೆ.ಭಾಸ್ಕರ ಶೆಟ್ಟಿ, ಅನಿಲ್ ಕುಮಾರ್, ಸುನೀಲ್ ಬಾಬು, ಹರ್ಷ, ಸಿದ್ದರಾಮೇಗೌಡ, ಕೃಷ್ಣಮೂರ್ತಿ, ಚಂದ್ರೇಗೌಡ, ಧರ್ಮಪ್ರಕಾಶ್, ಸಂಜಯ್, ಅಭಿಷೇಕ್, ಹೆಚ್.ಪಿ.ಚಂದ್ರ, ಸಾಗರ್ ಕುಮಾರ್, ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳ ವಲಯಾಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ನಗರ, ಜಿಲ್ಲಾ ಬ್ರಾಹ್ಮಣ ಸಂಘದಿಂದ ದ್ವಾರಕೀಶ್‌ಗೆ ಶ್ರದ್ಧಾಂಜಲಿ



ಮೈಸೂರು, ಏ. 17– ಕನ್ನಡ ನಾಡಿನ ಕಲೆಯ ನೆಲೆಯಾಗಿ ಕನ್ನಡ ಚಿತ್ರರಂಗಕ್ಕೆ ಶಕ್ತಿ ತುಂಬಿ ಬೆಳೆಸಿದ ಧೀಮಂತ ನಟ, ಹಿರಿಯ ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ಅವರ ಅಗಲಿಕೆ ಸಾಕಷ್ಟು ನೋವು ತಂದಿದೆ ಎಂದು ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಅಧ್ಯಕ್ಷ ಡಿ.ಟಿ. ಪ್ರಕಾಶ್ ಹೇಳಿದರು.

ನಗರದ ಇಟ್ಟಿಗೆಗೂಡಿನಲ್ಲಿರುವ ಮೈಸೂರು ನಗರ ಮತ್ತು ಜಿಲ್ಲಾ ಬ್ರಾಹ್ಮಣ ಸಂಘದ ಆವರಣದಲ್ಲಿ ಆಯೋಜಿಸಿದ್ದ ನಟ ದ್ವಾರಕೀಶ್ ಅವರ ಶ್ರದ್ಧಾಂಜಲಿ ಸಭೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಮೈಸೂರು ಕಲಾವಿದರ ತವರೂರು. ದ್ವಾರಕೀಶ್ ಅವರು ಮೈಸೂರಿನ ಹುಣಸೂರಿನವರು ಎನ್ನುವುದು ನಮ್ಮ ಹೆಮ್ಮೆ. ಡಿ.ಬನುಮಯ್ಯ, ಶಾರದಾವಿಲಾಸ ಸಿಪಿಸಿ ಪಾಲಿಟೆಕ್ನಿಕ್‌ನಲ್ಲಿ ವ್ಯಾಸಂಗ ಮಾಡಿ ಮೈಸೂರಿನ ಗಾಂಧಿ ವೃತ್ತದಲ್ಲಿ ಭಾರತ್ ಆಟೋ ಸ್ಪೇರ್ಸ್ ಆಟೋ ಮೊಬೈಲ್ ಉದ್ಯಮ ಪ್ರಾರಂಭಿಸಿದ್ದ ದ್ವಾರಕೀಶ್ ಅವರು ಅವರ ಸೋದರ ಮಾವ ಹುಣಸೂರು ಕೃಷ್ಣಮೂರ್ತಿ ಅವರಿಂದ ಹೆಚ್ಚಾಗಿ ಕನ್ನಡ ಚಿತ್ರರಂಗದಲ್ಲಿ ಆಸಕ್ತಿಹೊಂದಿ ಅತ್ಯುತ್ತಮ ಸಾಧನೆಯನ್ನು ಮಾಡಿದ್ದಾರೆ. ವಿದೇಶದಲ್ಲಿ ಪ್ರಪ್ರಥಮ ಕನ್ನಡ ಚಿತ್ರದ ಚಿತ್ರೀಕರಣ ಮಾಡಿರುವುದು ಅವರ ಸಾಧನೆಯಾಗಿದೆ, ಡಾ. ರಾಜಕುಮಾರ್ ಮತ್ತು ಡಾ. ವಿಷ್ಣುವರ್ಧನ್ ಚಿತ್ರವೆಂದರೆ ಅಲ್ಲಿ ದ್ವಾರಕೀಶ್ ಪಾತ್ರ ಅಭಿನಯ ಮೆರಗು ತರುತ್ತಿತ್ತು. ನಟ ನಿರ್ದೇಶಕ ನಿರ್ಮಾಪಕರಾಗಿದ್ದ ದ್ವಾರಕೀಶ್ ನೆನಪು ಮೈಸೂರಿನಲ್ಲಿ ಶಾಶ್ವತವಾಗಿ ಉಳಿಯಲು ರಾಜ್ಯ ಸರ್ಕಾರ ಕಲಾರಂಗದ ಮೂಲಕ ವಿವಿಧ ಯೋಜನೆಗಳನ್ನು ಜಾರಿಗೆ ತರಲಿ ಎಂದು ಹೇಳಿದರು.

ಬ್ರಾಹ್ಮಣ ಸಮುದಾಯದ ಮುಖಂಡರಾದ ಎಂ ಆರ್ ಬಾಲಕೃಷ್ಣ, ಹರೀಶ್, ಕಡಕೊಳ ಜಗದೀಶ್, ರಂಗನಾಥ್, ಪ್ರಶಾಂತ್, ಸುಚಿಂದ್ರ, ಚಕ್ರಪಾಣಿ, ಮಂಜುನಾಥ್, ಲತಾ ಬಾಲಕೃಷ್ಣ, ನಾಗಶ್ರೀ ಸುಚಿಂದ್ರ, ಇನ್ನಿತರ ವಿಪ್ರ ಮುಖಂಡರು ಹಾಜರಿದ್ದರು.

ಏ.20ರಂದು ಶ್ರೀಲಕ್ಷ್ಮೀವರದಸ್ವಾಮಿ ಬ್ರಹ್ಮ ರಥೋತ್ಸವ

ಮೈಸೂರು, ಏ.17– ಮೈಸೂರು ಜಿಲ್ಲೆ ಹೆಗ್ಗಡದೇವನಕೋಟೆ ಮುಖ್ಯ ರಸ್ತೆಯಲ್ಲಿರುವ ಇತಿಹಾಸ ಪ್ರಸಿದ್ಧ ಶ್ರೀಲಕ್ಷ್ಮೀವರದರಾಜಸ್ವಾಮಿ 12ನೇ ವರ್ಷದ ಬ್ರಹ್ಮ ರಥೋತ್ಸವವು ಏ.20ರ ಶನಿವಾರದಂದು ಬೆಳಿಗ್ಗೆ ನೆರವೇರಲಿದೆ. ಅಂದು ಸ್ವಾಮಿಗೆ ರಥ ಸಂಪನ್ನ, ರಥಬಲಿ, ಯಾತ್ರಾದಾನ, ಶುಭ ವೃಷಭ ಲಗ್ನದಲ್ಲಿ ರಥಾರೋಹಣ, ಉತ್ಸವ ಮೂರ್ತಿಗೆ ಅಭಿಷೇಕ, ಶ್ರೀ ಸ್ವಾಮಿಯವರಿಗೆ ರಾಸಕ್ರೀಡೆ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಪ್ರಧಾನ ಆಗಮಿಕ ವಿದ್ವಾನ್ ತಿರುಮಲಾಚಾರ್ ಮಾಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮುಕೇಶ್, ಇಶಾಂತ್ ದಾಳಿಗೆ ಕುಸಿದ ಟೈಟನ್ಸ್: ಡೆಲ್ಲಿ ಕ್ಯಾಪಿಟಲ್ಸ್ ಅಮೋಘ ಜಯ

ಅಹಮದಾಬಾದ್: ವೇಗದ ಜೋಡಿ ಮುಕೇಶ್ ಕುಮಾರ್ ಮತ್ತು ಇಶಾಂತ್ ಶರ್ಮಾ ಅವರ ಅಮೋಘ ಬೌಲಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಅಮೋಘ ಜಯ ಸಾಧಿಸಿತು.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಡೆಲ್ಲಿ ತಂಡವು 6 ವಿಕೆಟ್‌ಗಳಿಂದ ಆತಿಥೇಯ ಗುಜರಾತ್ ವಿರುದ್ಧ ಜಯಿಸಿತು. ಟಾಸ್ ಗೆದ್ದ ಡೆಲ್ಲಿ ತಂಡದ ನಾಯಕ ರಿಷಭ್ ಪಂತ್ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು.

ಮುಕೇಶ್ (14ಕ್ಕೆ3) ಮತ್ತು ಇಶಾಂತ್ (8ಕ್ಕೆ2) ಅವರ ದಾಳಿಯ ಮುಂದೆ ಗುಜರಾತ್ ತಂಡವು 17.3 ಓವರ್‌ಗಳಲ್ಲಿ 89 ರನ್‌ಗಳ ಅಲ್ಪಮೊತ್ತ ಗಳಿಸಿ ಆಲೌಟ್ ಆಯಿತು. ಈ ಬಾರಿಯ ಐಪಿಎಲ್‌ನಲ್ಲಿ ದಾಖಲಾದ ಕನಿಷ್ಠ ಮೊತ್ತ ಇದು. ಇದಕ್ಕುತ್ತರವಾಗಿ ಡೆಲ್ಲಿ ತಂಡವು 8.5 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 92 ರನ್ ಗಳಿಸಿತು.

ಗುಜರಾತ್ ತಂಡದ ಎಂಟನೇ ಕ್ರಮಾಂಕದ ಬ್ಯಾಟರ್ ರಶೀದ್ ಖಾನ್ 24 ಎಸೆತಗಳಲ್ಲಿ 31 ರನ್ ಗಳಿಸಿದರು. ವೈಯಕ್ತಿಕ ಗರಿಷ್ಠ ಸ್ಕೋರ್ ಗಳಿಸಿದ ಆಟಗಾರನಾದರು. ಇಡೀ ಇನಿಂಗ್ಸ್‌ನಲ್ಲಿ ದಾಖಲಾದ ಏಕೈಕ ಸಿಕ್ಸರ್ ಕೂಡ ರಶೀದ್ ಕಾಣಿಕೆ. ಈ ಇನಿಂಗ್ಸ್‌ನಲ್ಲಿ ಒಟ್ಟು ಎಂಟು ಬೌಂಡರಿಗಳು ಮಾತ್ರ ದಾಖಲಾದವು.

ರಶೀದ್ ಬಿಟ್ಟರೆ ಸಾಯಿ ಸುದರ್ಶನ್ (12; 9ಎ) ಮತ್ತು ರಾಹುಲ್ ತೆವಾಟಿಯಾ (10; 15ಎ) ಅವರಿಬ್ಬರೇ ಎರಡಂಕಿ ಮುಟ್ಟಿದವರು. ಉಳಿದ ಬ್ಯಾಟರ್‌ಗಳೆಲ್ಲರೂ ವೈಫಲ್ಯ ಅನುಭವಿಸಿದರು.

ಗುಜರಾತ್ ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ಗಿಲ್ ವಿಕೆಟ್ ಗಳಿಸಿದ ಇಶಾಂತ್ ತಂಡಕ್ಕೆ ಮೊದಲ ಯಶಸ್ಸು ಗಳಿಸಿಕೊಟ್ಟರು. ನಾಲ್ಕನೇ ಓವರ್‌ನಲ್ಲಿ ಮುಕೇಶ್ ಎಸೆತಕ್ಕೆ ವೃದ್ಧಿಮಾನ್ ಸಹಾ ಕ್ಲೀನ್‌ಬೌಲ್ಡ್ ಆದರು. ಸಾಯಿ ಅವರು ರನೌಟ್ ಆಗಿದ್ದು ತಂಡಕ್ಕೆ ಬಿದ್ದ ದೊಡ್ಡ ಪೆಟ್ಟು. ಇಶಾಂತ್ ಬೌಲಿಂಗ್‌ನಲ್ಲಿ ಡೇವಿಡ್ ಮಿಲ್ಲರ್ ಕೂಡ ಔಟಾದರು. ಬೌಲರ್‌ಗಳು ಬಿಗಿಪಟ್ಟು ಸಾಧಿಸಿದರು. ಇದರಿಂದಾಗಿ ಕೇವಲ 48 ರನ್‌ಗಳಿಗೆ 6 ವಿಕೆಟ್‌ಗಳು ಪತನವಾದವು.

ಡೆಲ್ಲಿ ತಂಡದ ಎಡಗೈ ವೇಗಿ ಖಲೀಲ್ ಅಹಮದ್, ಸ್ಪಿನ್ನರ್ ಅಕ್ಷರ್ ಪಟೇಲ್ ತಲಾ ಒಂದು ವಿಕೆಟ್ ಗಳಿಸಿದರು. ಟ್ರಿಸ್ಟನ್ ಸ್ಟಬ್ಸ್ ಒಂದೇ ಓವರ್‌ನಲ್ಲಿ ಎರಡು ವಿಕೆಟ್ ಕಬಳಿಸಿದರು.


ಡೆಲ್ಲಿ ತಂಡದ ನಾಯಕ, ವಿಕೆಟ್ ಕೀಪರ್ ರಿಷಭ್ ಪಂತ್ ಎರಡು ಕಠಿಣ ಕ್ಯಾಚ್‌ಗಳನ್ನು ಪಡೆಯುವಲ್ಲಿ ಯಶಸ್ವಿಯಾದರು. ಅಲ್ಲದೇ ಎರಡು ಚುರುಕಾದ ಸ್ಟಂಪಿಂಗ್ ಕೂಡ ಮಾಡಿದರು.

ಈ ಅಲ್ಪಮೊತ್ತವನ್ನು ರಕ್ಷಿಸಿಕೊಳ್ಳಲು ಆತಿಥೇಯ ತಂಡದ ಬೌಲರ್‌ಗಳು ಹೋರಾಟ ಮಾಡಿದರು. ಆದರೆ ಸಾಧ್ಯವಾಗಲಿಲ್ಲ. ಡೆಲ್ಲಿ ಆರಂಭಿಕ ಬ್ಯಾಟರ್ ಜೇಕ್ ಫ್ರೆಸರ್ ಮೆಕ್‌ಗುರ್ಕ್ (20; 10ಎ) ಬಿರುಸಿನ ಆರಂಭ ನೀಡಿದರು. ವೇಗಿ ಸಂದೀಪ್ ವಾರಿಯರ್ (40ಕ್ಕೆ2) ಅವರು ಪೃಥ್ವಿ ಶಾ ಮತ್ತು ಅಭಿಷೇಕ್ ಪೊರೆಲ್ ವಿಕೆಟ್‌ಗಳು ಗಳಿಸಿದರು. ರಶೀದ್ ಖಾನ್ ಮತ್ತು ಸ್ಪೆನ್ಸರ್ ಜಾನ್ಸನ್ ಕೂಡ ತಲಾ ಒಂದು ವಿಕೆಟ್ ಪಡೆದರು.



ರಿಷಭ್ 11 ಎಸೆತಗಳಲ್ಲಿ 16 ರನ್ ಗಳಿಸಿ ಔಟಾಗದೇ ಉಳಿದರು.ತಂಡವನ್ನು ಜಯದ ಗಡಿ ದಾಟಿಸಿದರು. 7ನೇ ಪಂದ್ಯ ಆಡಿದ ಡೆಲ್ಲಿ ತಂಡವು ಮೂರನೇ ಜಯ ಸಾಧಿಸಿತು. ಅಂಕಪಟ್ಟಿಯಲ್ಲಿ ಆರನೇ ಸ್ಥಾನಕ್ಕೇರಿತು. ಗಿಲ್ ಬಳಗಕ್ಕೆ ಇದು ನಾಲ್ಕನೇ ಸೋಲು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

18.04.2024 ಗುರುವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ,
ತಿಥಿ: ದಶಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಮಧ್ಯಾಹ್ನ 1.30 ರಿಂದ 3 ಗಂಟೆಯವರೆಗೆ

■ **ಶ್ರೀರಾಮಕೃಷ್ಣ ಆಶ್ರಮ:** ಸ್ವಾಮಿ ಜ್ಞಾನಯೋಗಾನಂದ ಅವರಿಂದ ಶ್ರೀ ಮದ್ಭಗವದ್ಗೀತಾ ಕುರಿತು ಉಪನ್ಯಾಸ, ಸ್ಥಳ: ಆಶ್ರಮದ ಸಭಾಂಗಣ, ಯಾದವಗಿರಿ, ಸಂಜೆ 6ಕ್ಕೆ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಶೀತದ ತಲೆನೋವು, ತಲೆಭಾರ, ಮೂಗು ಕಟ್ಟುವುದು, ಇತರೆ ಸಮಸ್ಯೆಗಳಿಗೆ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.

■ **ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ:** ವಿಶ್ವ ಧ್ವನಿ ದಿನ ಆಚರಣೆ, ಸ್ಥಳ: ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ, ಬೆಳಗ್ಗೆ 9 ರಿಂದ.

■ **ಡಾ. ಬಿ.ಆರ್. ಅಂಬೇಡ್ಕರ್ ಆದಿದ್ರಾವಿಡ ಯುವಕರ ಅಭಿವೃದ್ಧಿ ಮಹಾಸಂಘ:** ಶ್ರೀ ದೇವಿ ಪಟ್ಟಲದಮ್ಮ, ಶ್ರೀ ಕತ್ತಿಮುನೇಶ್ವರ ದೇವರ ಜಾತ್ರಾ ಮಹೋತ್ಸವ, ಅಧ್ಯಕ್ಷತೆ: ಶಾಸಕ ಎಂ.ಕೆ.ಸೋಮಶೇಖರ್, ಮುಖ್ಯ ಅತಿಥಿಗಳು: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮಾಜಿ ಮೇಯರ್ ಪುರುಷೋತ್ತಮ್, ಶೈಲೇಂದ್ರ, ಭುವನೇಶ್ವರಿ ಪ್ರಭುಮೂರ್ತಿ, ನಾಗರತ್ನ ಮಂಜುನಾಥ್, ಶಾಂತಮ್ಮ ವಡಿವೇಲ್, ಪಿ. ಸಿದ್ದರಾಜು ಸುನಿಲ್, ಸ್ಥಳ:ಡಾ.ಬಿ.ಆರ್.ಅಂಬೇಡ್ಕರ್ ಕಾಲೋನಿ, ಅಶೋಕಪುರಂ, ಬೆಳಗ್ಗೆ 10ಕ್ಕೆ.

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ

■ **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್:** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಬೆಳಗ್ಗೆ 10 ರಿಂದ.


■ **ಶ್ರೀ ನಟರಾಜ ವಸತಿ ಪ್ರಥಮ ದರ್ಜೆ ಮಹಿಳಾ ಕಾಲೇಜು:** ಪ್ರಾಜೆಕ್ಟ್ ರಿಪೋರ್ಟ್ ರೈಟಿಂಗ್ ಕಾರ್ಯಾಗಾರ, ಉದ್ಘಾಟನೆ: ಪ್ರಾಧ್ಯಾಪಕ ಪ್ರೊ.ಕೆ.ಶಿವಚಿತ್ತಪ್ಪ, ಮುಖ್ಯ ಅತಿಥಿಗಳು: ವಿಶೇಷಾಧಿಕಾರಿ ಪ್ರೊ.ಎಸ್. ಶಿವರಾಜಪ್ಪ, ಉಪಸ್ಥಿತರು; ಪ್ರಾಚಾರ್ಯರಾದ ಡಾ.ಎಂ.ಶಾರದಾ, ಡಾ.ಜಿ.ಪ್ರಸಾದಮೂರ್ತಿ, ಡಾ. ಎನ್.ಜಿ.ಲೋಕೇಶ್, ಸ್ಥಳ: ನಟರಾಜ ಸೆಮಿನಾರ್ ಹಾಲ್, ಬೆಳಗ್ಗೆ 10.30ಕ್ಕೆ.

■ **ಶ್ರೀ ಶಂಕರ ಜಯಂತಿ ಸಭಾ:** ಶ್ರೀರಾಮನವಮಿಯಂದು ಬೆಳಗ್ಗೆ 9.30 ರಿಂದ ಅಭಿಷೇಕ, ಅರ್ಚನೆ, ಪೂಜಾ ಕಾರ್ಯಕ್ರಮಗಳು, ಬೆಳಗ್ಗೆ 11.30ಕ್ಕೆ ಮಹಾಮಂಗಳಾರತಿ, ಸಂಜೆ 5ರಿಂದ ವಿದುಷಿ ಪೃಥ್ವಿ ಭಾಸ್ಕರ್ ಮತ್ತು ಸಂಗಡಿಗರಿಂದ ಕರ್ನಾಟಕ ಸಂಗೀತ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

■ **ಒಡನಾಡಿ ಸೇವಾ ಸಂಸ್ಥೆ:** ಪ್ರಸ್ತುತ ವಿದ್ಯಮಾನದಲ್ಲಿ ತೇಜಸ್ವಿ ಚಿಂತನೆ ಸಂವಾದ ಕಾರ್ಯಕ್ರಮ, ಉಪಸ್ಥಿತರು: ನಿರಂತರದ ಪ್ರಸಾದ್ ಕುಂದೂರು, ಲೇಖಕ ನಾ. ದಿವಾಕರ, ಪ್ರೊ. ಶ್ರೀರಾಮ್, ಸ್ಟ್ಯಾನ್ಲಿ–ಪರಶು, ಸ್ಥಳ: ಒಡನಾಡಿ ಸಂಸ್ಥೆ ಆವರಣ, ಹೂಟಗಳ್ಳಿ, ಬೆಳಗ್ಗೆ 11ಕ್ಕೆ.

■ **ರಂಗಾಯಣ:** ರಂಗಾಯಣದ ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವೃಕ್ಷರಾಜ ನಾಟಕ ಪ್ರದರ್ಶನ, ಸಾಹಿತ್ಯ ರಚನೆ : ಎಸ್. ರಾಮನಾಥ್, ನಿರ್ದೇಶನ : ಹೈಸ್ನಾಂ ತೋಂಬಾ, ಸ್ಥಳ: ಭೂಮಿಗೀತ ರಂಗಮಂದಿರ, ಮಧ್ಯಾಹ್ನ 3ಕ್ಕೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಮೊಬೈಲ್ ಬಳಸೋಣ ಬನ್ನಿ–ಪ್ರಪಂಚಕ್ಕೆ ಬೆಳಕಿನ ಕಿಂಡಿಯಾದ ಸಾಧನದ ಸದುಪಯೋಗ ಕುರಿತ ಬಾನುಲಿ ಸರಣಿ. ಪ್ರಸ್ತುತಿ– ಮೈಸೂರಿನ ಎನ್. ರವಿಶಂಕರ್, 6.40 ಪದ ಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ. ಸತ್ಯನಾರಾಯಣ, 7.15 ಮತ ಹಾಕೋಣ ಬನ್ನಿ–ಮತದಾರ ಜಾಗೃತಿ ಕುರಿತು ಕಾರ್ಯಕ್ರಮ ಸರಣಿ, ಚಾಮರಾಜನಗರ ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಹಾಗೂ SVEEP ನೋಡಲ್ ಅಧಿಕಾರಿ ಪಿ. ಲಕ್ಷ್ಮಿ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಡಾ.ಮೈಸೂರು ಉಮೇಶ್, 10.00 ಶಾಸ್ತ್ರೀಯ ಸಂಗೀತ– ಕರ್ನಾಟಕ ಪೊಲೀಸ್ ಬ್ಯಾಂಡ್, ವಾದ್ಯವೃಂದ– ವಿ. ಸುಬ್ಬಣ್ಣ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30ದೇವರನಾಮ, 1.20 ಭಾವಗೀತೆ–ಕೆ. ಆರ್. ಹರ್ಷದೀಪ್, 4.00 ಜನಪದ ಸಂಗೀತ–ಮಳವಳ್ಳಿ ಮಹದೇವಸ್ವಾಮಿ ಮತ್ತು ಸಂಗಡಿಗರಿಂದ ಮೈದಾಳರಾಮನ ಕಥೆ, 4.30 ವಿಜ್ಞಾನ ಭಾರತಿ, 6.50 ಕೃಷಿರಂಗ–ಸಾವಯವ ಕೃಷಿಗೆ ಸೂಕ್ತವಾದ ತಳಿ ಹಾಗೂ ಬಿತ್ತನೆ ಬೀಜ ಪೂರೈಕೆ ಈ ಕುರಿತು ಮೈಸೂರಿನ ಸಹಜ ಸಮೃದ್ಧ ಸಂಸ್ಥೆಯ ಜಿ. ಕೃಷ್ಣಪ್ರಸಾದ್ ಅವರೊಂದಿಗೆ ಸಂದರ್ಶನ, ಪ್ರಸ್ತುತಿ– ಎನ್.ಕೇಶವಮೂರ್ತಿ, 8.00 ಯುವವಾಣಿ, 10.00 ನಾಟಕ: ತಟ್ಟೆ ಇಡ್ಲಿರಾದ್ಧಾಂತ, ರಚನೆ– ಮಾಯಾಸಂದ್ರ ಕೃಷ್ಣಪ್ರಸಾದ್, ನಿರ್ಮಾಣ–ಪ್ರಭುಸ್ವಾಮಿ ಪಿ ಮಳಿಮಠ್, 10.30 ಸವಿನೆನಪು

■ **ಶ್ರೀ ಗಣಪತಿ ಸೇವಾ ಮಂಡಳಿ ಟ್ರಸ್ಟ್:** ಐದನೆಯ ರಾಮೋತ್ಸವ ಕಾರ್ಯಕ್ರಮ, ಲಕ್ಷ್ಮೀ ಜನಾರ್ಧನ ಶ್ಲೋಕ ತರಗತಿ ಮಕ್ಕಳಿಂದ ಭಜನೆ, ವಿದುಷಿ ನಾಗಲಕ್ಷ್ಮಿ ಅವರಿಂದ ರಾಮಾಯಣದಲ್ಲಿ ಆಂಜನೇಯನ ಪಾತ್ರ ಕುರಿತು ಉಪನ್ಯಾಸ, ಸ್ಥಳ: ಗಣಪತಿ ದೇವಸ್ಥಾನ, ಐ–ಬ್ಲಾಕ್, ರಾಮಕೃಷ್ಣನಗರ, ಸಂಜೆ 6 ಗಂಟೆಗೆ

■ **ಶ್ರೀ ರಾಮ ಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ:** 30ನೇ ಶ್ರೀರಾಮನವಮಿ ಸಂಗೀತೋತ್ಸವ–2024, ಸಂಜೆ 5.15ರಿಂದ ಸುಷ್ಮಾ ದೀಪಕ್–ಪ್ರೇರಣಾ ಪ್ರವೀಣ್–ಪ್ರಮತ್ ಅವರಿಂದ ಗಾಯನ, ಸಂಜೆ 6.15ರಿಂದ ವಿದ್ವಾನ್ ಪಟ್ಟಾಭಿರಾಮನ್ ಪಂಡಿತ್ ಅವರಿಂದ ಗಾಯನ, ವಿದ್ವಾನ್ ವೈಭವ್ ರಮಣಿ–ಪಿಟೀಲು, ವಿದ್ವಾನ್ ಹೆಚ್.ಎಸ್.ಸುಧೀಂದ್ರ–ಮೃದಂಗ, ಸ್ಥಳ: ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿವಿ ಮೊಹಲ್ಲಾ.

■ **ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಮಹಾರತ್ನ ಟ್ರಸ್ಟ್:** ಮತ ಜಾಗೃತಿ ಅಭಿಯಾನ, ಚಾಲನೆ : ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಮಹಾರತ್ನ ಟ್ರಸ್ಟ್ ಅಧ್ಯಕ್ಷ ಮೈಸೂರು ಮಹಾಲಿಂಗು, ಸ್ಥಳ: ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನ, ವಿಜಯನಗರ 1ನೇ ಹಂತ, ಸಂಜೆ 5ಕ್ಕೆ.

■ **ಭಾರತೀ ಸ್ತ್ರೀ ಸಮಾಜ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಚಾರಿಟಬಲ್ ಟ್ರಸ್ಟ್:** ವೈಭವ ಶಯನೋತ್ಸವ, ಸ್ಥಳ: ಸಮಾಜದ ಆವರಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ರಾಮಮಂದಿರ:** ಶ್ರೀ ರಾಮೋತ್ಸವ, ಶ್ರೀ ವಾಣಿಯಮ್ಮ ಭಜನಾ ಮಂಡಳಿಯವರಿಂದ ಭಜನಾ ಕಾರ್ಯಕ್ರಮ, ಸ್ಥಳ: ಶ್ರೀರಾಮಮಂದಿರ, ಜಯನಗರ, ಸಂಜೆ 6ರಿಂದ.

■ **ಶ್ರೀರಾಮ ದೇವಸ್ಥಾನ:** ಶ್ರೀರಾಮ ನವಮಿ ಮಹೋತ್ಸವ, ಬೆಳಗ್ಗೆ ಪಂಚಾಮೃತ ಅಭಿಷೇಕ, ಅಲಂಕಾರ, ಶ್ರೀ ಗಣಪತಿ ಹೋಮ, ಸ್ಥಳ: ಶ್ರೀರಾಮ ದೇವಸ್ಥಾನ, ಅರಮನೆ ಕೋಟೆ, ಉತ್ತರ ಬಾಗಿಲು.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** ಶ್ರೀ ರಾಮನವಮಿ ಪ್ರಯುಕ್ತ ಸಂಗೀತೋತ್ಸವ, ಅಕ್ಕರೈ ಸಿಸ್ಟರ್ಸ್ ವಿದುಷಿ ಸುಬ್ಬಲಕ್ಷ್ಮಿ ಮತ್ತು ಸ್ವರ್ಣಲತಾ ಅವರಿಂದ ಶಾಸ್ತ್ರೀಯ ಸಂಗೀತ, ವಿದ್ವಾನ್ ಗೋಕುಲ್–ಪಿಟೀಲು, ವಿದ್ವಾನ್ ಡೆಲ್ಲಿ ಸಾಯಿರಾಂ–ಮೃದಂಗ, ವಿದ್ವಾನ್ ಕೃಷ್ಣ–ಘಟಂ, ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮಸೇವಾ ಮಂಡಲಿ:** 71ನೇ ವರ್ಷದ ಶ್ರೀರಾಮೋತ್ಸವ, ಸಂಜೆ 6.30ಕ್ಕೆ ವಿದುಷಿ ಶ್ರೀಮತಿ ಶಶಿಕಲಾ ಚಂದ್ರಶೇಖರ್ ಮತ್ತು ವೃಂದದವರಿಂದ ಅವರಿಂದ ದೇವರನಾಮ ಹಾಗೂ ಸುಗಮ ಸಂಗೀತ, ರಾತ್ರಿ 8ಕ್ಕೆ ರಾಗ ತರಂಗ ವೃಂದದವರಿಂದ ದೇವರನಾಮ, ಸ್ಥಳ: ಶ್ರೀರಾಮ ಸೇವಾ ಮಂಡಲಿ, ವಿದ್ಯಾರಣ್ಯಪುರಂ.

ಗಾಣಿಗನಕೊಪ್ಪಲಿನಲ್ಲಿಂದು, ತಿ. ನರಸೀಪುರ ತಾಲೂಕು

■ **ಶ್ರೀ ಘನನೀಲಿ ಪವಾಡಪುರುಷ ಸಿದ್ದಪ್ಪಾಜಿ ದೇವಸ್ಥಾನ:** ಮಹಾ ಕೊಂಡೋತ್ಸವ, ರಾತ್ರಿ 8 ಗಂಟೆಗೆ ಅಗ್ನಿ ಸ್ಪರ್ಶ, ಸ್ಥಳ: ದೇವಸ್ಥಾನ.

COUNTDOWN
2024 LS Polls on APRIL 26
8 DAYS TO GO

ಹಸಿರು ನಮ್ಮ ಉಸಿರು

25ನೇ ವರ್ಷದ ಸವಿನೆನಪು



ರಾಗಿಮಂಡಿ
ವಸಂತು
ದುಃಖತಪ್ತರು: ಕುಟುಂಬವರ್ಗದವರು



ಶ್ರೀಮತಿ ಲಕ್ಷ್ಮೀ ಪಿ. ಮತ್ತು ಶ್ರೀ ಕೆ.ಆರ್.ಎಂ.ಮಹದೇವು ರವರ
23ನೇ ವಿವಾಹ ವಾರ್ಷಿಕೋತ್ಸವದ
ಶುಭಾಶಯಗಳು 18-04-2024
ಶುಭಕೋರುವವರು: ಕೆ.ಆರ್.ಎಂ ಗ್ರೂಪ್ಸ್, ಜಿ. ರವಿ ಸ್ನೇಹ ಬಳಗ.



ನಕ್ಕರೆ ಅದೇ ಸ್ವರ್ಗ

ಗುಂಡ ತನ್ನ ತಾಯಿ ಮತ್ತು ಪತ್ನಿ ಜೊತೆಯಲ್ಲಿ ಆಶ್ರಮದಲ್ಲಿ ನಡೆಯುತ್ತಿದ್ದ ಪ್ರವಚನ ಕೇಳಲು ಹೋಗಿದ್ದ.

ಗುರುಗಳು : ನಿಮ್ಮಲ್ಲಿ ಸ್ವರ್ಗಕ್ಕೆ ಹೋಗಲು ಇಚ್ಛೆ ಇರುವವರು ಕೈ ಎತ್ತಿ ಎಂದರು. ತಕ್ಷಣ ಗುಂಡನ ತಾಯಿ ಮತ್ತು ಪತ್ನಿ ಕೈ ಎತ್ತಿದರು. ಗುಂಡ ಮಾತ್ರ ಕೈ ಎತ್ತದೆ ಕುಳಿತಿದ್ದ.

ಗುರುಗಳು : ಏನೋ ಗುಂಡಾ ನೀನೇಕೆ ಕೈ ಎತ್ತಿಲ್ಲ. ನೀನು ಸ್ವರ್ಗಕ್ಕೆ ಹೋಗೋದಿಲ್ಲವೆ?

ಗುಂಡ : ಗುರುಗಳೇ ಅವರಿಬ್ಬರು ಇಲ್ಲಿಂದ ಹೋದರೆ ಇಲ್ಲೆ ಸ್ವರ್ಗ, ಬೇರೆ ಸ್ವರ್ಗ ಬೇಕಿಲ್ಲ.

ಗುರುಗಳು : ಗುಂಡ ಮಹಾಜ್ಞಾನಿ, ಶಿಷ್ಯರೇ ಈತನನ್ನು ನಮ್ಮ ಆಶ್ರಮಕ್ಕೆ ಸೇರಿಸಿಕೊಳ್ಳಿ...!!

ಮೈಸೂರು ಮಿತ್ರ

ಗುರುವಾರ, 18 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ.........

ಏನೂ ಮಾಡದೆ ಇರುವುದಕ್ಕಿಂತ, ತಡವಾಗಿಯಾದರೂ ಏನಾದರೂ ಒಳ್ಳೆಯದನ್ನು ಮಾಡುವುದು ಶ್ರೇಯಸ್ಕರ –ಸೂಕ್ತಿ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಲಕ್ಕಿ ಸೊಪ್ಪಾದ್ರೂ ಲೆಕ್ಕದ ಮುದ್ದೆ ಉಣಬೇಕು

ನಿಮ್ಮ ಪತ್ರಗಳು

■ ಫುಟ್‌ಪಾತ್ ಆಕ್ರಮಿಸಿದ ಗ್ಯಾರೇಜ್ ಮಾಲೀಕರು, ಪಾದಚಾರಿಗಳ ಪರದಾಟ



ಮಾನ್ಯರೆ

ಮೈಸೂರಿನ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸುಣ್ಣದಕೇರಿ ಕೆ.ಆರ್.ಪೊಲೀಸ್ ಠಾಣೆ ಟ್ರಾಫಿಕ್ ವ್ಯಾಪ್ತಿಗೆ ಸೇರಿದ ಫುಟ್‌ಪಾತ್ ಸೇರಿದಂತೆ ರಸ್ತೆಗಳನ್ನೆಲ್ಲಾ ಗ್ಯಾರೇಜ್‌ನವರು ಆಕ್ರಮಿಸಿಕೊಂಡಿರುವುದರಿಂದ ಸಾರ್ವಜನಿಕರ ಸಂಚಾರಕ್ಕೆ ತೊಂದರೆಯಾಗುತ್ತಿದ್ದು, ನಾಗರಿಕರ ಗೋಳು ಹೇಳತೀರದಾಗಿದೆ. ನಗರದಲ್ಲಿ ವಾಹನಗಳ ಸಂಚಾರ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ವಾಹನ ರಿಪೇರಿಗೆ ಬರುವ ದ್ವಿಚಕ್ರ ವಾಹನಗಳನ್ನು ಗ್ಯಾರೇಜ್ ಮಾಲೀಕರು ಫುಟ್‌ಪಾತ್ ಮತ್ತು ರಸ್ತೆಯನ್ನು ಅತಿಕ್ರಮಿಸಿಕೊಂಡು ನಿಲ್ಲಿಸುವಂತಹ ಕೆಲಸವಾಗಿದೆ. ಇದರಿಂದ ಸ್ಥಳೀಯ ನಿವಾಸಿಗಳಿಗೆ, ಸಾರ್ವಜನಿಕರಿಗೆ ಹಾಗೂ ರಸ್ತೆಯಲ್ಲಿ ಸಂಚಾರ ಮಾಡುವ ಸವಾರರಿಗೆ ಕಂಟಕವಾಗಿದೆ.

ಫುಟ್‌ಪಾತ್ ಹಾಗೂ ರಸ್ತೆ ಆಕ್ರಮಿಸಿಕೊಂಡಿರುವ ಗ್ಯಾರೇಜ್ ಮಾಲೀಕರು ಯಾವುದಕ್ಕೂ ಜಗ್ಗದೆ ತಮ್ಮ ಕೆಲಸ ಮುಂದುವರೆಸಿದ್ದಾರೆ. ಕೆಲ ತಿಂಗಳ ಹಿಂದೆ ಹಿರಿಯ ನಾಗರಿಕರೊಬ್ಬರು ತಮ್ಮ ಮನೆಯಿಂದ ಸಂಜೆ ವಾಯುವಿಹಾರಕ್ಕೆ ಹೋಗುವ ಸಮಯದಲ್ಲಿ ಫುಟ್‌ಪಾತ್‌ನಲ್ಲಿ ಸ್ಥಳವಿಲ್ಲದ ಕಾರಣ ರಸ್ತೆಯಲ್ಲಿ ಹೋಗುತ್ತಿದ್ದಾಗ ವೇಗವಾಗಿ ಬಂದ ದ್ವಿಚಕ್ರ ವಾಹನ ಸವಾರ ಡಿಕ್ಕಿ ಹೊಡೆದ ಪರಿಣಾಮ ಅವರಿಗೆ ಸಣ್ಣಪುಟ್ಟ ಗಾಯಗಳಾದವು. ಪಾದಚಾರಿಗಳಿಗೆ ಫುಟ್‌ಪಾತ್‌ನಲ್ಲಿ ಸ್ಥಳವಿಲ್ಲದೆ ರಸ್ತೆಗಿಳಿಯುವ ವಾಹನಗಳಿಗೆ ಹಿಡಿತ ಸಿಗದೇ ಅಪಘಾತಕ್ಕೆ ಎಡೆಮಾಡಿಕೊಡುತ್ತಿವೆ.

ಬಹುತೇಕ ರಸ್ತೆಗಳಲ್ಲಿನ ಫುಟ್‌ಪಾತ್‌ಗಳು ಸಾರ್ವಜನಿಕರ ಪಾಲಿಗೆ ಇದ್ದೂ ಇಲ್ಲದಂತಾಗಿದೆ. ಹೀಗಾಗಿ ಪಾದಚಾರಿಗಳು ಮುಖ್ಯ ರಸ್ತೆಯಲ್ಲೇ ನಡೆಯಬೇಕಾಗಿದೆ. ವಾಹನಗಳನ್ನು ಎಲ್ಲೆಂದರಲ್ಲಿ ಅಡ್ಡಾದಿಡ್ಡಿಯಾಗಿ ನಿಲ್ಲಿಸಿರುತ್ತಾರೆ. ಜನರು ರಸ್ತೆಯಲ್ಲಿ ಮತ್ತು ಫುಟ್‌ಪಾತ್‌ನಲ್ಲಿ ನಡೆದುಕೊಂಡು ಹೋಗಲು ಸಾಧ್ಯವಾಗುವುದಿಲ್ಲ. ಅತಿವೇಗವಾಗಿ ಹೋಗುವ ವಾಹನಗಳಿಂದ ಸಾರ್ವಜನಿಕರಿಗೆ ಅಪಾಯವಾಗುವ ಸಾಧ್ಯತೆ ಹೆಚ್ಚಿದೆ. ಆದಷ್ಟು ಬೇಗ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸಬೇಕು ಎಂಬುದು ಸಾರ್ವಜನಿಕರ ಆಗ್ರಹವಾಗಿದೆ. **–ಮಹೇಶ್ ಎಸ್.ಎಸ್., ಮೈಸೂರು.**

■ ದ್ವಾರಕೀಶ್ ಕನ್ನಡ ಚಿತ್ರರಂಗದ ಶ್ರೇಷ್ಠ ನಟ



ಮಾನ್ಯರೆ,

ಕನ್ನಡದ ಹಿರಿಯ ನಟ, ನಿರ್ಮಾಪಕ, ನಿರ್ದೇಶಕ ದ್ವಾರಕೀಶ್ ನಿಧನ ಚಿತ್ರರಂಗಕ್ಕೆ ತುಂಬಲಾರದ ನಷ್ಟವಾಗಿದೆ. ಕನ್ನಡಾಭಿಮಾನಿಗಳಿಗೆ ಬರಸಿಡಿಲು ಬಡಿದಂತಾಗಿದೆ. ಪ್ರಚಂಡ ಕುಳ್ಳ ಖ್ಯಾತಿಯ ಇವರು ವಿಷ್ಣುವರ್ಧನ್, ಅಂಬರೀಶ್, ರಾಜ್‌ಕುಮಾರ್‌ರಂತಹ ದಿಗ್ಗಜರ ಜೊತೆಗೆ ಅನೇಕ ಚಿತ್ರದಲ್ಲಿ ನಟಿಸಿ ಪ್ರಖ್ಯಾತಿಯಾದವರು. ಇವರ ನಟನೆಯಿಂದ ನಗದೆ ಇದ್ದವರು ಯಾರೂ ಇಲ್ಲ. ಇವರ ಹಾಸ್ಯ ಎಲ್ಲರಿಗೂ ಅಚ್ಚುಮೆಚ್ಚು, ಕಳ್ಳ ಕುಳ್ಳ, ಹೊಸ ಕಳ್ಳ ಹಳೆ ಕುಳ್ಳ, ಆಪ್ತಮಿತ್ರ, ಗುರು ಶಿಷ್ಯರು, ಹದ್ದಿನಕಣ್ಣು, ನೀ ಬರೆದ ಕಾದಂಬರಿ, ಗಲಾಟೆ ಸಂಸಾರ, ಗಿಡ್ಡುದಾದ, ಪೆದ್ದ ಗೆದ್ದ, ಸಿಂಗಾಪುರದಲ್ಲಿ ರಾಜಾಕುಳ್ಳ, ಕಿಟ್ಟು ಪುಟ್ಟು, ಹೀಗೆ ಹಲವಾರು ಚಿತ್ರಗಳಲ್ಲಿ ನಟಿಸಿ ಸ್ಯಾಂಡಲ್‌ವುಡ್‌ನಲ್ಲಿ ಹೆಸರು ಮಾಡಿದವರು ಇವರು. ಇವರ ನಿಧನ ಕನ್ನಡ ಚಿತ್ರ ರಸಿಕರ ಮಮತೆ ಬಂಧನವನ್ನು ಕಡಿದುಹಾಕಿದೆ. ಹಲವಾರು ಜನರನ್ನು ಚಿತ್ರರಂಗಕ್ಕೆ ಪರಿಚಯಿಸಿದ ಕೀರ್ತಿ ಇವರದ್ದು. ಇವರ ಆತ್ಮಕ್ಕೆ ಭಗವಂತ ಶಾಂತಿ ದೊರಕಿಸಲಿ ಎನ್ನುವುದೆ ನಮ್ಮ ಪ್ರಾರ್ಥನೆ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ

■ ರಾಷ್ಟ್ರ, ರಾಜ್ಯದ ಹಿತ ಕಾಪಾಡೋರಿಗೆ ನಮ್ಮ ಮತ

ಮಾನ್ಯರೆ,

ರಾಷ್ಟ್ರ ಮತ್ತು ರಾಜ್ಯದ ಹಿತ ಕಾಪಾಡೋರಿಗೆ ನಮ್ಮ ಮತ. ಸ್ವಚ್ಛ ಆಡಳಿತ ನೀಡೋರಿಗೆ ನಮ್ಮ ಮತ. ಕಾವೇರಿ ವಿವಾದವನ್ನು ಬಗೆಹರಿಸುವವರಿಗೆ ನಮ್ಮ ಮತ. ಬಡತನ ನಿರ್ಮೂಲನೆ ಮಾಡೋರಿಗೆ ನಮ್ಮ ಮತ. ಲಂಚತನ ನಿರ್ಮೂಲನೆ ಮಾಡೋರಿಗೆ ನಮ್ಮ ಮತ. ರೈತರ ಗೋಳು ಕೇಳೋರಿಗೆ ನಮ್ಮ ಮತ.

ಉತ್ತಮ ರಸ್ತೆ ನಿರ್ಮಿಸುವವರಿಗೆ ನಮ್ಮ ಮತ. ಸಣ್ಣ ಸಣ್ಣ ಗ್ರಾಮಗಳಿಗೂ ವಿದ್ಯುತ್, ಬಸ್ ಸೌಕರ್ಯ ಕಲ್ಪಿಸೋರಿಗೆ ನಮ್ಮ ಮತ. ಸರ್ವರಿಗೂ ಸೂರು–ನೀರು ಒದಗಿಸೋರಿಗೆ ನಮ್ಮ ಮತ.ನಿರುದ್ಯೋಗ ಹೋಗಲಾಡಿಸೋರಿಗೆ ನಮ್ಮ ಮತ.

ದಿನನಿತ್ಯದ ಸಮಸ್ಯೆಗಳಿಗೆ ಪರಿಹಾರ ಒದಗಿಸುವವರಿಗೆ ನಮ್ಮ ಮತ. ಭ್ರಷ್ಟಾಚಾರ ತೊಲಗಿಸೋರಿಗೆ ನಮ್ಮ ಮತ. ಹೆಂಡ, ಸಾರಾಯಿ ಮಾರಾಟ ಬಂದ್ ಮಾಡೋರಿಗೆ ನಮ್ಮ ಮತ. ಮುಚ್ಚಿರೋ ಕಾರ್ಖಾನೆಗಳನ್ನು ಮತ್ತೆ ಪ್ರಾರಂಭ ಮಾಡುವವರಿಗೆ ನಮ್ಮ ಮತ.

ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸುವವರಿಗೆ ನಮ್ಮ ಮತ. ಬರವನ್ನು ಹೋಗಲಾಡಿಸೊರಿಗೆ ನಮ್ಮ ಮತ. ವನ್ಯ ಮೃಗ, ಪ್ರಾಣಿ, ಪಕ್ಷಿಗಳನ್ನು ಕಾಪಾಡೋರಿಗೆ ನಮ್ಮ ಮತ. ಪ್ರಾಣಿ ಸಂಪತ್ತು, ಸಸ್ಯ ಸಂಪತ್ತು ಉಳಿಸುವವರಿಗೆ ನಮ್ಮ ಮತ. ಪರಿಸರ ಮಾಲಿನ್ಯ, ವಾಯುಮಾಲಿನ್ಯ, ಜಲಮಾಲಿನ್ಯ ತಡೆಗಟ್ಟೋರಿಗೆ ನಮ್ಮ ಮತ.

ಗ್ರಾಮೀಣ ಕಲೆಗಳಿಗೆ ಪ್ರೋತ್ಸಾಹ ನೀಡೋರಿಗೆ ನಮ್ಮ ಮತ. ಸ್ವದೇಶಿ ಉತ್ಪನ್ನಗಳಿಗೆ ಪ್ರೋತ್ಸಾಹ ನೀಡೋರಿಗೆ ನಮ್ಮ ಮತ. ವಿದೇಶಿ ಉತ್ಪನ್ನಗಳನ್ನು ಧಿಕ್ಕರಿಸುವವರಿಗೆ ನಮ್ಮ ಮತ. ಭ್ರಷ್ಟ ರಾಜಕಾರಣಿಗಳಿಗಲ್ಲ ನಮ್ಮ ಮತ. ಉತ್ತಮ ಸರಳ ಸಜ್ಜನ ವ್ಯಕ್ತಿಗೆ ನಮ್ಮ ಮತ. ಎಲ್ಲಕ್ಕಿಂತ ಅಮೂಲ್ಯವಾದುದು ನಮ್ಮ ಮತ. ಆಸೆ ಆಮಿಷಗಳಿಗೆ ತುತ್ತಾಗದೆ ನೀಡುವೆವು ನಮ್ಮ ಮತ. ಹಣ, ಹೆಂಡ, ಸಾರಾಯಿಗೆ ಮಾರಿಕೊಳ್ಳುವುದಿಲ್ಲ ನಮ್ಮ ಮತ. ಅರ್ಹ ಪಕ್ಷಕ್ಕೆ, ಯೋಗ್ಯ ವ್ಯಕ್ತಿಗೆ ನಮ್ಮ ಮತ.


–ಅಹಲ್ಯ .ಸಿ.ನಾ. ಚಂದ್ರ, ಜನತಾನಗರ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

‘ಅಯೋಧ್ಯೆ’ ಎಂಬ ಪುಸ್ತಕ ರತ್ನ



ಅಯೋಧ್ಯೆ ನಮ್ಮ ದೇಶದ ಅತ್ಯಂತ ಪ್ರಾಚೀನ ನಗರಗಳಲ್ಲೊಂದು. ವೇದ ಸಾಹಿತ್ಯದಲ್ಲೇ **‘ದೇವಾನಾಂ ಪೂರಯೋಧ್ಯಾ’** ಎಂಬ ಮಾತು ಇದೆ. ಭಾರತದ ಏಳು ಪವಿತ್ರ ನಗರಗಳಲ್ಲಿ ಅಯೋಧ್ಯೆಯೇ ಪ್ರಥಮ ಸ್ಥಾನದಲ್ಲಿದೆ.

ಅಯೋಧ್ಯಾ ಮಧುರಾ ಮಾಯಾ ಕಾಶೀಕಾಂಚೀ ಹ್ಯವಂತಿಕಾ।
ಪುರೀ ದ್ವಾರಾವತೀ ಚೈವ ಸಪ್ತೈತಾ ಮೋಕ್ಷದಾಯಿಕಾಃ॥

(ಅಯೋಧ್ಯೆ, ಮಧುರ, ಮಾಯಾನಗರ, ಕಾಶಿ, ಕಾಂಚಿ, ಅವಂತಿಕಾ (ಉಜ್ಜಯಿನಿ) ದ್ವಾರಕೆ–ಇವು ಏಳು ಮುಕ್ತಿಯನ್ನು ಕೊಡುವ ನಗರಗಳು) ಎಂಬ ಶ್ಲೋಕವೂ ಪ್ರಸಿದ್ಧವಾಗಿದೆ. ತ್ರೇತಾಯುಗದಲ್ಲಿ ಅಯೋಧ್ಯೆಯು ಕೋಸಲ ದೇಶದ ರಾಜಧಾನಿಯಾಗಿತ್ತು. ವಾಲ್ಮೀಕಿ ರಾಮಾಯಣದಲ್ಲಿ ಅಯೋಧ್ಯೆಯನ್ನು ವರ್ಣಿಸಲಾಗಿದೆ.

ಅಯೋಧ್ಯಾ ನಾಮ ನಗರೀ ತತ್ರಾಸೀಲ್ಲೋಕ ವಿಶ್ರುತಾ ।
ಮನುನಾ ಮಾನವೇಂದ್ರೇಣ ಯಾ ಪುರೀ ನಿರ್ಮಿತಾ ಸ್ವಯಮ್॥
ಆಯತಾ ದಶ ಚ ದ್ವೇಚ ಯೋಜನಾನಿ ಮಹಾಪುರೀ।
ಶ್ರೀಮತೀ ತ್ರೀಣಿ ವಿಸ್ತೀರ್ಣಾ ಸುವಿಭಕ್ತಮಹಾಪಥಾ॥
ರಾಜ ಮಾರ್ಗೇಣ ಮಹತಾ ಸುವಿಭಕ್ತೇನ ಶೋಭಿತಾ।
ಮುಕ್ತ ಪುಷ್ಪಾವಕೀರ್ಣೇನ ಜಲಸಿಕ್ತೇನ ನಿತ್ಯಶಃ॥

(ಆ ಕೋಸಲ ದೇಶದಲ್ಲಿ ಜಗದ್ವಿಖ್ಯಾತವಾದ ಅಯೋಧ್ಯಾ ಎಂಬ ನಗರವಿತ್ತು. ಮನುಷ್ಯ ಕುಲದ ಮೂಲಪುರುಷನಾಗಿದ್ದ ಮನು ಆ ಪುರವನ್ನು ನಿರ್ಮಿಸಿದ್ದನು. ಆ ನಗರದ ಉದ್ದಳತೆ ಹನ್ನೆರಡು ಯೋಜನಗಳು, ಅದರ ವಿಸ್ತಾರ (ಅಡ್ಡಳತೆ) ಮೂರು ಯೋಜನಗಳು. ಅದರ ಮಾರ್ಗಗಳು ವಿಶಾಲವಾಗಿದ್ದವು. ದೊಡ್ಡ ರಾಜಮಾರ್ಗದಿಂದ ಅದು ಶೋಭಿಸುತ್ತಿತ್ತು. ಆ ರಾಜಮಾರ್ಗವನ್ನು ಪ್ರತಿದಿನವೂ ನೀರಿನಿಂದ ತೊಳೆದು ಅದರ ಮೇಲೆ ಹೂವುಗಳನ್ನೆರಚುತ್ತಿದ್ದರು).

ಸರಯೂ ನದಿಯ ತೀರದಲ್ಲಿದ್ದ ಈ ನಗರದಲ್ಲೇ ನಮ್ಮೆಲ್ಲರ ಆರಾಧ್ಯ ದೈವ ಶ್ರೀರಾಮನು ಹುಟ್ಟಿ ಬೆಳೆದು ರಾಜ್ಯವನ್ನಾಳಿದುದು. ಅನೇಕ ವರ್ಷಗಳವರೆಗೆ ಪರಕೀಯರ ಆಳ್ವಿಕೆಯಲ್ಲಿ ಗ್ರಹಣ ಹಿಡಿದಂತಿದ್ದ ಅಯೋಧ್ಯೆ ಈಗ ಮತ್ತೆ ರಾಮಜನ್ಮ ಭೂಮಿಯಾಗಿ ಮತ್ತೆ ಕಂಗೊಳಿಸುತ್ತಿದೆ.

ಸುಮಾರು ವರ್ಷಗಳಿಂದ ಭಾರತೀಯರು ಕಾಣುತ್ತಿದ್ದ ಕನಸು ಇಂದು ನನಸಾಗಿದೆ. ಅಯೋಧ್ಯೆಯಲ್ಲಿ ಭವ್ಯ ರಾಮ ಮಂದಿರ ನಿರ್ಮಿತವಾಗಿ ಅಲ್ಲಿ ಬಾಲರಾಮನ ಪ್ರತಿಷ್ಠಾಪನೆ ವಿಧಿವತ್ತಾಗಿ ನೆರವೇರಿದೆ. ಪ್ರತಿದಿನ ಲಕ್ಷ ಭಕ್ತರು ಬಾಲರಾಮನ ದರ್ಶನವನ್ನು ಪಡೆದು ಧನ್ಯತೆಯನ್ನು ಪಡೆಯುತ್ತಿದ್ದಾರೆ. ಅಯೋಧ್ಯೆ ಶ್ರೀರಾಮನ ರಾಜ್ಯಭಾರದ ಸಮಯದಲ್ಲಿದ್ದಂತೆ ದೇದೀಪ್ಯಮಾನವಾಗಿದೆ. ಅಯೋಧ್ಯೆಗೆ ಹೋಗಿ ಅಲ್ಲಿರುವ ವಿದ್ಯಮಾನಗಳನ್ನೆಲ್ಲ ಕಣ್ಣಾರೆ ಕಂಡು, ಇತಿಹಾಸವನ್ನೆಲ್ಲ ಪರಾಮರ್ಶಿಸಿ ಅನಿಲ್ ಹೆಚ್.ಟಿ. ಅವರು ರಚಿಸಿದ ಪುಸ್ತಕವೇ **ಅಯೋಧ್ಯೆ : ಪ್ರೀತಿಯ ಮಂದಿರ – ರಾಷ್ಟ್ರಮಂದಿರ**. ಅನಿಲ್ ಪತ್ರಿಕೋದ್ಯಮಿ. ವಿಶ್ವವಾಣಿ ಪತ್ರಿಕೆಯ ಕೊಡಗು ಪ್ರತಿನಿಧಿ. ಟಿವಿ1ನ ವ್ಯವಸ್ಥಾಪಕ ನಿರ್ದೇಶಕ; ಆಕಾಶವಾಣಿಯ ಕೊಡಗು ವರದಿಗಾರ, ಛಾಯಾಚಿತ್ರ ಗ್ರಾಹಕ. ಇನ್ನೂ ಹಲವು ಆಯಾಮಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡಿರುವ ಲೇಖಕ. ಯಾವ ಕೆಲಸವನ್ನು ಮಾಡಿದರೂ ಅಚ್ಚುಕಟ್ಟಾಗಿ ಮಾಡುವ ಶಿಸ್ತು ಅವರಲ್ಲಿದೆ.

ಕರ್ನಾಟಕಕ್ಕೂ ಶ್ರೀರಾಮನಿಗೂ ಬಿಡಿಸಲಾಗದ ನಂಟು. ಶ್ರೀರಾಮನ ಪರಮಭಕ್ತ ಹನುಮಂತ ನಮ್ಮವನೇ ತಾನೆ? ಅಯೋಧ್ಯೆಯ ರಾಮಮಂದಿರದಲ್ಲಿ ಪ್ರತಿಷ್ಠಾಪಿತವಾದ ಬಾಲರಾಮನ ವಿಗ್ರಹದ ಕಲ್ಲು ಕರ್ನಾಟಕದ್ದೇ. ಅದರಲ್ಲಿ ಸುಂದರ ಬಾಲರಾಮನನ್ನು ಮೂಡಿಸಿದ ಶಿಲ್ಪಿವರೇಣ್ಯ ಅರುಣ್ ಯೋಗಿರಾಜ್ ಮೈಸೂರಿನವರು. ಈ ಸಂಬಂಧದ ಸಮಸ್ತ ವಿವರಣೆ ಪ್ರಸ್ತುತ ಪುಸ್ತಕದಲ್ಲಿದೆ. ಭವ್ಯ ದಿವ್ಯ ನವ್ಯ ರಾಮಮಂದಿರದ ಲೋಕೋತ್ತರ ವೈಭವವನ್ನು ಹೆಚ್.ಟಿ. ಅನಿಲ್ ಅವರು ಸರಳ ಕನ್ನಡದಲ್ಲಿ ಪಡಿಮೂಡಿಸಿದ್ದಾರೆ. ಈ ಪುಸ್ತಕವನ್ನು ಓದುತ್ತಿದ್ದರೆ ಸ್ವಯಂ ಅಯೋಧ್ಯೆಗೆ ಹೋಗಿ ಬಾಲರಾಮನ ದರ್ಶನವನ್ನು ಮಾಡಿದ ಭಾವನೆ ಬರುತ್ತದೆ ಎಂದರೆ ತಪ್ಪಿಲ್ಲ.

ಬಾಲರಾಮನನ್ನು ಅವರು ವರ್ಣಿಸಿರುವ ಪರಿಯೇ ಆಕರ್ಷಕವಾಗಿದೆ. ಅದರ ಕೆಲವು ವಾಕ್ಯಗಳು ಇಂತಿವೆ–

“ಬಾಲರಾಮನನ್ನು ಅಲಂಕರಿಸಿದ್ದ ಬಗೆ ಬಗೆಯ ವರ್ಣಗಳ ಸುವಾಸನೆಯುಕ್ತ ಅಂದಚಂದದ ಹೂವುಗಳು, ಆಕರ್ಷಕ ದಿರಿಸು, ಬಂಗಾರ, ಮುತ್ತು, ಮಾಣಿಕ್ಯ, ಪೋಣಿಸಲ್ಪಟ್ಟ ರತ್ನ ಖಚಿತ ಒಡವೆಗಳು ಅಯೋಧ್ಯಾಪತಿ ರಾಘವನ ಅಲಂಕಾರಗಳು. ಬಾಲರಾಮನ ಆ ಸೊಬಗು ಬಣ್ಣಿಸಲು ಪದಗಳೇ ಸಾಲದು.

“ಮಹಾವಿಷ್ಣುವಿನ ಅವತಾರವಾಗಿರುವ ರಘುರಾಮನು ಅಯೋಧ್ಯೆಯಲ್ಲಿ ಈಗ ಪ್ರತಿಷ್ಠಾಪಿಸಲ್ಪಟ್ಟಿದ್ದಾನೆ. ಹಳದಿ ಬಣ್ಣದ ಬನಾರಸಿ ಧೋತಿ, ಹೆಗಲಲ್ಲಿ ಕೆಂಪು ಬಣ್ಣದ ಉತ್ತರೀಯ ಹಾಕಲಾಗಿದೆ. ಈ ದಿರಿಸನ್ನು ಚಿನ್ನದ ನೂಲಿನಲ್ಲಿ ಕಸೂತಿ ಮಾಡಲ್ಪಟ್ಟಿದೆ. ದಿಲ್ಲಿಯ ಖ್ಯಾತ ವಸ್ತ್ರ ವಿನ್ಯಾಸಕ ಮನೀಷ್ ತ್ರಿಪಾಠಿ ಅವರು ಅಯೋಧ್ಯಾಧಾಮದಲ್ಲಿಯೇ ತಯಾರಿಸಿದ್ದಾರೆ.” (ಪು. 16).

ಬಾಲರಾಮನಿಗೆ ತೊಡಿಸಿರುವ ಕಿರೀಟ ಹನ್ನೊಂದು ಕೋಟಿ ರೂಪಾಯಿ ಬೆಲೆಯುಳ್ಳದ್ದು. ಇದನ್ನು ಸೂರತ್‌ನ ವಜ್ರ ವ್ಯಾಪಾರಿ ಕೊಡುಗೆಯಾಗಿ ನೀಡಿದ್ದಾರೆ–ಎಂದರೆ ಅವರ ರಾಮಭಕ್ತಿಯನ್ನು ಮೆಚ್ಚಬೇಕಲ್ಲವೆ?

ರಾಮಮಂದಿರ ನಿರ್ಮಾಣದ ಇತಿಹಾಸವನ್ನು ಲೇಖಕರು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ರಾಜಸ್ಥಾನದ ಎಷ್ಟು ಜನ ಶಿಲ್ಪಿಗಳು ಮಂದಿರದ ಒಂದೊಂದು ಕಂಬವನ್ನೂ ಕೌಶಲದಿಂದ ಕೆತ್ತಿದ್ದಾರೆ ಎಂದು ತಿಳಿಸಿದ್ದಾರೆ. ಕರಸೇವಕರ ತ್ಯಾಗ ಎಷ್ಟು ದೊಡ್ಡದು ಎಂಬುದನ್ನು ಮನಮುಟ್ಟುವಂತೆ ಬಣ್ಣಿಸಿದ್ದಾರೆ. ಕರಸೇವಕರ ನೆನಪಿಗಾಗಿ ಅಯೋಧ್ಯೆಯ ಹೃದಯ ಭಾಗದಲ್ಲಿ **ಕರಸೇವಕಪುರಂ** ಎಂಬ ಕೇಂದ್ರವಿದೆ. ಇದನ್ನೂ ಪ್ರವಾಸಿಗಳು ನೋಡಬೇಕು ಎಂದು ಲೇಖಕರು ವಿನಂತಿಸಿದ್ದಾರೆ. ಶ್ರೀರಾಮ ಮಂದಿರದಲ್ಲಿ ಕೊಡುವ ಏಕಮಾತ್ರ ಪ್ರಸಾದ ಕಲ್ಲು ಸಕ್ಕರೆ ಎಂಬುದನ್ನು ಜ್ಞಾಪಿಸಿದ್ದಾರೆ.

ಕೇವಲ ಹಿಂದೂಗಳಿಗೆ ಅಯೋಧ್ಯೆ ಪವಿತ್ರ ಸ್ಥಳವೆಂದಿಲ್ಲ. ಭಗವಾನ್ ಬುದ್ಧನೂ ಅನೇಕ ವರ್ಷಗಳ ಕಾಲ ಅಯೋಧ್ಯೆಯಲ್ಲಿ ವಾಸಿಸಿದ್ದನು. ಆದ್ದರಿಂದ ಬೌದ್ಧರಿಗೂ ಇದು ಯಾತ್ರಾ ಸ್ಥಳ. ಜೈನ ತೀರ್ಥಂಕರರಾದ ಋಷಭನಾಥ, ಅಜಿತನಾಥ, ಮುಂತಾದವರು ಇಲ್ಲಿ ಹುಟ್ಟಿದರು ಅಥವಾ ಬೆಳೆದರು ಎಂಬ ಕಾರಣದಿಂದ ಅಯೋಧ್ಯೆ ಜೈನರಿಗೂ ಪಾವನ ಸ್ಥಳ ಎಂಬ ಮಾಹಿತಿಯನ್ನೂ ಲೇಖಕರು ಕೊಟ್ಟಿದ್ದಾರೆ. (ಪು. 43)

ಅಯೋಧ್ಯೆಗೆ ಹೋಗುವ ಪ್ರವಾಸಿಗಳು ನೋಡಬೇಕಾದ ಹನುಮಾನ್ ಗುಡಿ, ಕನಕ ಭವನ, ವಾಲ್ಮೀಕಿ ರಾಮಾಯಣ ಭವನ, ನಾಗೇಶ್ವರನಾಥ ದೇವಾಲಯ, ಸೀತಾರಸೋಯೀ (ಅಡುಗೆ ಮನೆ), ಕೈಕೇಯೀಕೋಪ ಭವನ, ಸುಮಿತ್ರಾ ಭವನ, ಸೀತಾಕೂಪ (ಬಾವಿ), ಸರಯೂ ನದಿ, ದಶರಥ ಮಹಲ್, ಸೂರ್ಯ ಸ್ತಂಭ ಮುಂತಾದ ಆಕರ್ಷಣೆಗಳ ವಿವರಣೆಗಳನ್ನೂ ಲೇಖಕ ಅನಿಲ್ ಈ ಪುಸ್ತಕದಲ್ಲಿ ನೀಡಿದ್ದಾರೆ.

ಲತಾಮಂಗೇಶ್ಕರ್ ವೃತ್ತ

ಅಯೋಧ್ಯೆಯಲ್ಲಿ ಪ್ರವಾಸಿಗಳನ್ನು ಆಕರ್ಷಿಸುವ ಸ್ಥಳವೆಂದರೆ ಭಾರತರತ್ನ ಪುರಸ್ಕೃತ ಗಾಯಕಿ ಲತಾ ಮಂಗೇಶ್ಕರ್ ವೃತ್ತ ಎಂಬ ಮಾಹಿತಿಯೂ ಈ ಪುಸ್ತಕದಲ್ಲಿದೆ. ಈ ವೃತ್ತದ ಮಧ್ಯದಲ್ಲಿ ಹದಿನಾಲ್ಕು ಟನ್ ತೂಕದ ಬೃಹತ್ ವೀಣೆಯನ್ನು ಜನರು ನೋಡಬಹುದು. ಇದರ ನಿರ್ಮಾಣಕ್ಕೆ ಆದ ವೆಚ್ಚ ಎಂಟು ಕೋಟಿ ರೂಪಾಯಿಗಳು. ಹಾಗೆಯೇ ಸೀತಾಕಂಗನ್, ರಾಮಕಥಾ ಪಾರ್ಕ್ ಇತ್ಯಾದಿಗಳ ಬಗೆಗೂ ಲೇಖಕರು ಹೇಳಿದ್ದಾರೆ.

ಅಯೋಧ್ಯೆಯಲ್ಲಿ ಮಂಗ (ಕೋತಿ)ಗಳು ಹೆಚ್ಚು. ಯಾರೂ ಮಂಗಗಳನ್ನು ಬೆದರಿಸುವಂತಿಲ್ಲ, ಓಡಿಸುವಂತಿಲ್ಲ. ಹಣ್ಣು, ಕಾಯಿ, ತಿಂಡಿ ಇತ್ಯಾದಿಗಳನ್ನು ಕಿತ್ತುಕೊಂಡು ತಿನ್ನಲು ಮಂಗಗಳಿಗೆ ಸ್ವಾತಂತ್ರ್ಯ ಇದೆ. ಪ್ರವಾಸಿಗಳು ಎಚ್ಚರದಿಂದ ವರ್ತಿಸಬೇಕು ಎಂದು ಅನಿಲ್ ಎಚ್ಚರಿಸುತ್ತಾರೆ. ಪ್ರಯಾಣಿಕರನ್ನು ವಂಚಿಸುವ ಸಾಧು ವೇಷಧಾರಿಗಳೂ ಅಯೋಧ್ಯೆಯಲ್ಲಿ ಬೀಡು ಬಿಟ್ಟಿದ್ದಾರೆ ಎಂದೂ ತಿಳಿಸಿದ್ದಾರೆ.

ಶ್ರೀರಾಮನಿಗೆ ದೇಶ ವಿದೇಶಗಳಿಂದ ಲೆಕ್ಕವಿಲ್ಲದಷ್ಟು ಉಡುಗೊರೆಗಳು ಬಂದಿವೆ. ಉತ್ತರ ಪ್ರದೇಶದ ಭಕ್ತರು ಇಪ್ಪತ್ತೈದು ಲಕ್ಷ ರೂಪಾಯಿ ಮೌಲ್ಯದ 2100 ಕೆ.ಜಿ. ಭಾರದ ಬೃಹತ್ ಘಂಟೆಯನ್ನು ನೀಡಿದ್ದಾರೆ. ತೆಲಂಗಾಣದ ಶ್ರೀನಿವಾಸ ಶಾಸ್ತ್ರಿಗಳು ಬಂಗಾರದ ಪಾದುಕೆಗಳನ್ನು ಕೊಟ್ಟಿದ್ದಾರೆ. ಇಂಥ ಹತ್ತಾರು ಕೊಡುಗೆಗಳ ವಿವರಣೆಗಳು ಈ ಪುಸ್ತಕದಲ್ಲಿವೆ. ಹೀಗೆ ಅಮೂಲ್ಯ ಮಾಹಿತಿಗಳನ್ನು ಸಂಗ್ರಹಿಸಿ ಕೊಟ್ಟಿರುವ ಲೇಖಕ ಹೆಚ್.ಟಿ. ಅನಿಲ್ ಓದುಗರ ಅಭಿನಂದನೆಗೆ ಪಾತ್ರರೆಂಬುದನ್ನು ಬೇರೆ ಹೇಳಬೇಕಾಗಿಲ್ಲ.

ಈ ಪುಸ್ತಕದ ವೈಶಿಷ್ಟ್ಯವೇನೆಂದರೆ ಇದರಲ್ಲಿರುವ ಸುಂದರ ವರ್ಣಮಯ ಚಿತ್ರಗಳು. ನೋಟವನ್ನು ಸೆರೆ ಹಿಡಿಯುವ ಚೆಲುವಿನ ಚಿತ್ರಗಳು. ಅನ್ಯತ್ರ ಅಲಭ್ಯವಾದ ಅಪೂರ್ವ ಚಿತ್ರಗಳು. ಲೇಖಕರು ಪುಸ್ತಕವನ್ನು ಅರ್ಪಿಸಿರುವುದೂ ಶ್ರೀರಾಮನಿಗೆ. ಆ ಶ್ರೀರಾಮಚಂದ್ರನಿಗೆ ನಮಸ್ಕಾರಗಳನ್ನರ್ಪಿಸಿ ಈ ಲೇಖನದ ಮಂಗಳವನ್ನು ಹೇಳೋಣ.

ಮಂಗಳಂ ಕೋಸಲೇಂದ್ರಾಯ
ಮಹನೀಯ ಗುಣಾತ್ಮನೇ।
ಚಕ್ರವರ್ತಿತನೂಜಾಯ
ಸಾರ್ವಭೌಮಾಯ ಮಂಗಳಮ್ ॥

ವಿರಾಜಪೇಟೆಯಲ್ಲಿ ನಾರಾಯಣ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್‌ನ

ತುರ್ತು ವೈದ್ಯಕೀಯ ಸೇವೆಗಳ ಉದ್ಘಾಟನೆ





ವಿರಾಜಪೇಟೆ, ಏ.17– ನಾರಾಯಣ ಆಸ್ಪತ್ರೆ, ಮೈಸೂರು, ವಿರಾಜಪೇಟೆಯ ಕ್ರೆಡೋ ಮೆಡಿಕಲ್ ಸೆಂಟರ್‌ನಲ್ಲಿ 24x7 ಆಂಬುಲೆನ್ಸ್ ಸೇವೆಯೊಂದಿಗೆ ಮಲ್ಟಿ ಸ್ಪೆಷಾಲಿಟಿ ಕ್ಲಿನಿಕ್ ಮತ್ತು ತುರ್ತು ವೈದ್ಯಕೀಯ ಸೇವೆಗಳನ್ನು ಮೈಸೂರಿನ ನಾರಾಯಣ ಆಸ್ಪತ್ರೆಯಲ್ಲಿ ಕಾರ್ಡಿಯಾಲಜಿ ಸೇವೆಗಳು ಮತ್ತು ಕ್ಲಿನಿಕಲ್ ಅಲಯನ್ಸ್‌ನ ನಿರ್ದೇಶಕ ಡಾ.ವಿ. ಕೇಶವ ಮೂರ್ತಿ, ವಿರಾಜಪೇಟೆ ಟೌನ್ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ರವೀಂದ್ರ, ಕ್ರೆಡೋ ಮೆಡಿಕಲ್ ಸೆಂಟರ್‌ನ ಡಾ.ಪೂಣಚ್ಚ ಉದ್ಘಾಟಿಸಿದರು.

ಕಾರ್ಯಕ್ರಮದಲ್ಲಿ ಮರ್ಸರಾ ನರ್ಸಿಂಗ್ ಹೋಂನ ಡಾ.ಫಾತಿಮಾ ಕರಿಯಪ್ಪ, ನಾರಾಯಣ ಆಸ್ಪತ್ರೆಯ ತುರ್ತು ಸೇವಾ ಸಲಹೆಗಾರ ಡಾ. ಅಶೋಕ್, ಕೊಡವ ಸಮಾಜದ ಮನು, ಅನಿಲ್ ಮತ್ತು ರೋಟರಿ ಕ್ಲಬ್ ವಿರಾಜಪೇಟೆಯ ಪೃಥ್ವಿ ಮಾದಯ್ಯ ಹಾಜರಿದ್ದರು. ಈ ವೈದ್ಯಕೀಯ ಸೇವೆಗಳ ಪ್ರಾರಂಭವು ಗುಣಮಟ್ಟದ ಆರೋಗ್ಯ ಸೇವೆಯನ್ನು ವಿರಾಜಪೇಟೆ ಪ್ರಾಂತ್ಯಕ್ಕೆ ಒದಗಿಸುವ ಆಸ್ಪತ್ರೆಯ ಬದ್ಧತೆಯ ಮೈಲಿಗಲ್ಲಾಗಿದೆ.

ನಾರಾಯಣ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್ ಈ ಪ್ರಾಂತ್ಯದ ಜನರು ಆಸ್ಪತ್ರೆಯ ತಜ್ಞ ವೈದ್ಯರೊಂದಿಗೆ ಸಮಾಲೋಚನೆ ನಡೆಸಲು ಅವಕಾಶ ಕಲ್ಪಿಸುತ್ತದೆ. ಈ ಕ್ಲಿನಿಕ್‌ನಲ್ಲಿ ವಯಸ್ಕರ ಕಾರ್ಡಿಯಾಲಜಿ, ಮಕ್ಕಳ ಕಾರ್ಡಿಯಾಲಜಿ, ಮೂತ್ರಶಾಸ್ತ್ರ, ವೈದ್ಯಕೀಯ ಗ್ಯಾಸ್ಟ್ರೋಎಂಟರಾಲಜಿ ಅಗತ್ಯ ತುರ್ತು ಸೇವೆಗಳು ಲಭ್ಯವಿರುತ್ತವೆ.

ಮೈಸೂರಿನ ನಾರಾಯಣ ಆಸ್ಪತ್ರೆಯ ಕಾರ್ಡಿಯಾಲಜಿ ಸೇವೆಗಳು ಮತ್ತು ಕ್ಲಿನಿಕಲ್ ಅಲಯನ್ಸ್ ನಿರ್ದೇಶಕ ಡಾ.ವಿ.ಕೇಶವ ಮೂರ್ತಿ ಮಾತನಾಡಿ, ವಿರಾಜಪೇಟೆಯಲ್ಲಿ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ಕಲ್ಪಿಸುವ ನಮ್ಮ ಬದ್ಧತೆಯನ್ನು ಈ ಹೊಸ ಮಲ್ಟಿಸ್ಪೆಷಾಲಿಟಿ ಕ್ಲಿನಿಕ್ ಪ್ರತಿಬಿಂಬಿಸುತ್ತದೆ ಎಂದು ಹೇಳಿದರು.

ನಮ್ಮ ನಾರಾಯಣ ಎಮರ್ಜೆನ್ಸಿ ಆಂಬುಲೆನ್ಸ್ ರೆಸ್ಪಾನ್ಸ್ (NEAR) ಸೇವೆಯು ಒಂದು ಅದ್ಭುತ ಉಪಕ್ರಮವಾಗಿದ್ದು, ರೋಗಿಗಳ ಜೀವ ಉಳಿಸಲು ಅಗತ್ಯವಿರುವ ಹೆಚ್ಚಿನ ಚಿಕಿತ್ಸೆಗಾಗಿ ತ್ವರಿತವಾಗಿ ಮೈಸೂರಿನ ನಾರಾಯಣ ಆಸ್ಪತ್ರೆಗೆ ತಲುಪಬಹುದು ಎಂದು ತಿಳಿಸಿದರು.

ರೈತರಿಗೆ ಮೂರು ದಿನ ಆನ್‌ಲೈನ್ ತರಬೇತಿ


ಮೈಸೂರು, ಏ.17– ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ವತಿಯಿಂದ ರೈತ ಹಾಗೂ ರೈತಮಹಿಳೆಯರಿಗೆ ಮೂರು ದಿನ ಆನ್‌ಲೈನ್ ತರಬೇತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.

ಏ.23, ಮಧ್ಯಾಹ್ನ 3ಕ್ಕೆ ಮಾವು ನೇರ ಮಾರುಕಟ್ಟೆಗಿರುವ ಅವಕಾಶಗಳು ಎಂಬ ವಿಷಯದ ಮೇಲೆ, ಏ.30, ಮಧ್ಯಾಹ್ನ 3ಕ್ಕೆ ಮಾಗಿ ಉಳುಮೆಯಿಂದಾಗುವ ಪ್ರಯೋಜನಗಳು ಎಂಬ ವಿಷಯದ ಮೇಲೆ ಹಾಗೂ ಮೇ 3, ಮಧ್ಯಾಹ್ನ 3 ಗಂಟೆಗೆ ಮಣ್ಣು ಪರೀಕ್ಷೆ ಮಹತ್ವ & ವಿಶ್ಲೇಷಣಾ ಆಧಾರಿತ ರಸಗೊಬ್ಬರಗಳ ಬಳಕೆ ಬಗ್ಗೆ ಎಂಬ ವಿಷಯದ ಮೇಲೆ ಮೂರು ದಿನಗಳೂ ಆನ್‌ಲೈನ್ ಮೂಲಕ ತರಬೇತಿ ನೀಡಲಾಗುತ್ತದೆ.

ಆಸಕ್ತ ರೈತ ಅಥವಾ ರೈತ ಮಹಿಳೆಯರು www.kmw-kvob-syp ಗೂಗಲ್ ಮೀಟ್ ಲಿಂಕ್‌ನ ಮೂಲಕ ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗೆ ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಸಹಾಯಕ ಕೃಷಿ ನಿರ್ದೇಶಕರ ದೂ.ಸಂ:8277933157 ಸಂಪರ್ಕಿಸಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು ಎಂದು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದ ಉಪ ಕೃಷಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com



ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಪರ ಮಾಜಿ ಶಾಸಕ ಯತೀಂದ್ರ ಮತಯಾಚನೆ



ಮೈಸೂರು ತಾಲೂಕಿನ ಡಿ. ಸಾಲುಂಡಿಯಲ್ಲಿ ಮಾಜಿ ಶಾಸಕ ಡಾ.ಯತೀಂದ್ರ, ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಮತಯಾಚಿಸಿದರು.

ಮೈಸೂರು, ಏ.17(ಎಂಟಿವೈ)– ನುಡಿದಂತೆ ನಡೆದು ಐದು ಗ್ಯಾರಂಟಿ ಯೋಜನೆಗಳನ್ನು ಅಧಿಕಾರಕ್ಕೆ ಬಂದ 9 ತಿಂಗಳಲ್ಲಿಯೇ ಜಾರಿಗೊಳಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸಲು ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಅವರನ್ನು ಅತ್ಯಧಿಕ ಮತಗಳ ಅಂತರದಿಂದ ಆಯ್ಕೆ ಮಾಡಬೇಕೆಂದು ಮಾಜಿ ಶಾಸಕ ಡಾ.ಯತೀಂದ್ರ ಮನವಿ ಮಾಡಿದ್ದಾರೆ.

ಮೈಸೂರು ತಾಲೂಕಿನ ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ ಡಿ. ಸಾಲುಂಡಿಯಲ್ಲಿ ಬುಧವಾರ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ ಪರವಾಗಿ ಮತಯಾಚಿಸಿ ಮಾತನಾಡಿದ ಅವರು, ವಿಧಾನಸಭೆಯಲ್ಲಿ ಗ್ಯಾರಂಟಿ ಯೋಜನೆಗಳ ಬಗ್ಗೆ ಹಾಡಿ ಹೊಗಳಿದ್ದ ಶಾಸಕ ಜಿ.ಟಿ. ದೇವೇಗೌಡರು ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡ ಮೇಲೆ ತೆಗಳುತ್ತಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಮಹಿಳೆಯರು ದಾರಿ ತಪ್ಪುತ್ತಿದ್ದಾರೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಹೇಳುವುದರೊಂದಿಗೆ ಮಹಿಳೆಯರಿಗೆ ಅವಹೇಳನ ಮಾಡುತ್ತಿದ್ದಾರೆ. ಇಂತಹವರು ಸ್ವಾರ್ಥಕ್ಕಾಗಿ ಭ್ರಷ್ಟ ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿ ಸುಳ್ಳು ಭರವಸೆಗಳು, ಭ್ರಷ್ಟಾಚಾರ, ಬೆಲೆ ಏರಿಕೆ, ಸರ್ಕಾರಿ ಸ್ವಾಮ್ಯದ ಉದ್ದಿಮೆಗಳನ್ನು ಖಾಸಗೀಕರಣ ಮಾಡಿ ಇಡಿ, ಐಟಿ ಸಂಸ್ಥೆಗಳನ್ನು ದುರುಪಯೋಗಪಡಿಸಿಕೊಂಡು 10 ವರ್ಷದಲ್ಲೇ ದೇಶವನ್ನು ಶ್ರೀಮಂತರಿಗೆ ಅಡವಿಟ್ಟು ಬಡವರ, ಮಧ್ಯಮವರ್ಗದವರ ಮೇಲೆ ತೆರಿಗೆ ಹಾಕಿ ಯಾವುದೇ ಅಭಿವೃದ್ಧಿ ಮಾಡದೇ ಮೋದಿ ಮುಖ ನೋಡಿ ಓಟು ಹಾಕಿ ಎನ್ನುತ್ತಿದ್ದಾರೆ. ಇಂತಹವರನ್ನು ತಿರಸ್ಕರಿಸಿ ನುಡಿದಂತೆ ನಡೆಯುವ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್‌ರವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಹಲವಾರು ಮುಖಂಡರು ಜೆಡಿಎಸ್ ಪಕ್ಷ ತೊರೆದು ಕಾಂಗ್ರೆಸ್ ಸೇರ್ಪಡೆಯಾದರು.

ಸಭೆಯಲ್ಲಿ ಜಿ.ಪಂ. ಮಾಜಿ ಸದಸ್ಯರಾದ ರಾಕೇಶ್ ಪಾಪಣ್ಣ, ಜವರಪ್ಪ, ಕೂರ್ಗಳ್ಳಿ ಮಹದೇವ್, ಬೀರಿಹುಂಡಿ ಬಸವಣ್ಣ, ಮಾದೇಗೌಡ, ಅರುಣ್‌ಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷ ಬಸವರಾಜು, ತಾ.ಪಂ. ಸದಸ್ಯರಾದ ಸಿ.ಎಂ. ಸಿದ್ದರಾಮೇಗೌಡ, ಕೆಂಚಪ್ಪ, ಜಿ.ಕೆ. ಬಸವಣ್ಣ, ಎಂ.ಟಿ. ರವಿಕುಮಾರ್, ಓಬಿಸಿ ಮಾಜಿ ಅಧ್ಯಕ್ಷ ಕೋಟೆಹುಂಡಿ ಮಹಾದೇವ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಬಿ. ಗುರುಸ್ವಾಮಿ, ಬಿ.ರವಿ, ಗ್ರಾ.ಪಂ. ಮಾಜಿ ಅಧ್ಯಕ್ಷರಾದ ಬಸವರಾಜು, ಸೋಮಣ್ಣ, ಮಾಕಿ ಮಹದೇವ, ಮುಖಂಡರಾದ ದೇವರಾಜ್ ಕಾಟೂರು, ಹಿನಕಲ್ ಉದಯ್, ಚಂದ್ರು, ಗಡ್ಡಬಸಪ್ಪ, ಸಿದ್ದರಾಜು, ಚಿಕ್ಕಣ್ಣ, ಶಿವಪ್ಪ, ಶಿವರಾಜೇಗೌಡ, ಮನೋಜ್, ಧನಗಳ್ಳಿ ಬಸವರಾಜು ಇದ್ದರು.



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರವಾಗಿ ಹೆಬ್ಬಾಳ್‌ನ ಒಂದನೇ ವಾರ್ಡಿನಲ್ಲಿ ಮನೆಮನೆ ಪ್ರಚಾರ ಮಾಡಲಾಯಿತು. ಈ ಸಂದರ್ಭದಲ್ಲಿ ನಗರ ಪಾಲಿಕೆ ಮಾಜಿ ಸದಸ್ಯ ಶಿವಣ್ಣ, ಯುವ ಮೋರ್ಚಾ ಮಾಜಿ ಅಧ್ಯಕ್ಷ ಎಂಜೆ ಕಿರಣ್‌ಗೌಡ, ಶಕ್ತಿ ಕೇಂದ್ರದ ಅಧ್ಯಕ್ಷರಾದ ಜಯಪ್ಪ. ಬಿ.ಟಿ. ರಾಜೇಂದ್ರ, ವಾರ್ಡಿನ ಅಧ್ಯಕ್ಷರಾದ ಕಿರಣ ಸುಖದರೆ, ಮಹೇಶ್ ಅರಸ್, ರುಕ್ಮಿಣಿ, ಸರಸ್ವತಿ, ಕೆಎಸ್‌ಆರ್‌ಟಿಸಿ ಶಿವಣ್ಣ, ಗುರು, ಮನು, ಅರುಣ, ಹರೀಶ್ ಕುಮಾರ್, ಶಿವಸ್ವಾಮಿ, ತ್ರಿವೇಣಿ, ಪ್ರವೀಣ್‌ಕುಮಾರ್, ಜೆಡಿಎಸ್ ಮತ್ತು ಬಿಜೆಪಿಯ ಮುಖಂಡರು ಇದ್ದರು.



ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್, ಗುಂಡ್ಲುಪೇಟೆ ಶಾಸಕ ಗಣೇಶ್‌ಪ್ರಸಾದ್ ಅವರನ್ನು, ಗುಂಡ್ಲುಪೇಟೆಯಲ್ಲಿ ನಡೆದ ರೋಡ್ ಶೋ ವೇಳೆ ಮೈಸೂರು ನಗರಪಾಲಿಕೆ ಮಾಜಿ ಸದಸ್ಯ ಎನ್.ದೈವರಾಜ್ ಮತ್ತು ಅವರ ಬೆಂಬಲಿಗರು ಭಾರೀ ಗಾತ್ರದ ಹಣ್ಣಿನ ಹಾರವನ್ನು ಕ್ರೇನ್ ಮೂಲಕ ಹಾಕಿ ಗೌರವಿಸಿದರು. ಈ ಸಂದರ್ಭದಲ್ಲಿ ಉದ್ಯಮಿ ಟೈಗರ್ ಪಿ.ಮಧು, ರಾಷ್ಟ್ರೀಯ ಈಡಿಗ ಮಹಾ ಮಂಡಳಿಯ ಕಾರ್ಯದರ್ಶಿ ಆರ್.ಗುರುರಾಜ್ ಈಡಿಗರ್, ಧೀರಜ್ ಪ್ರಸಾದ್, ಪೂರ್ವಜ್ ವಿಶ್ವನಾಥ್, ನಾಗ ನಾಯಕ, ಕಾಳಿ ಪ್ರಸಾದ್, ನಂಜುಂಡ ನಾಯಕ್ ಇನ್ನಿತರರಿದ್ದರು.

ಮೋದಿ ಇಲ್ಲದಿದ್ದರೆ ಬಿಜೆಪಿ ಶೂನ್ಯ

ಕೆಪಿಸಿಸಿ ವಕ್ತಾರ ಜಿ.ವಿ.ಸೀತಾರಾಮು

ಮೈಸೂರು, ಏ.17(ಜಿಎ)–ಮೋದಿ ಇಲ್ಲದಿದ್ದರೆ ಬಿಜೆಪಿಯೇ ಶೂನ್ಯವಾಗಲಿದೆ ಎಂದು ಕೆಪಿಸಿಸಿ ವಕ್ತಾರ ಜಿ.ವಿ. ಸೀತಾರಾಮು ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರು ಏಕಚಕ್ರಾಧಿಪತಿಯಂತೆ ವರ್ತಿಸುತ್ತಿದ್ದು, ದೇಶದಲ್ಲಿ ಮೋದಿ ಇಲ್ಲ ಎಂದರೆ ಏನೂ ಇಲ್ಲ ಎಂಬಂತೆ ಬಿಂಬಿಸುವ ಮೂಲಕ ಬಿಜೆಪಿ ಅಜೆಂಡಾವನ್ನು ಮುಚ್ಚಿ ಹಾಕುತ್ತಿದ್ದಾರೆ ಎಂದು ಆರೋಪಿಸಿದರು.

ಕಳೆದ ಹತ್ತು ವರ್ಷಗಳಿಂದ ಹೇಳಿಕೊಂಡು ಬಂದ ಯೋಜನೆಗಳನ್ನು ಇನ್ನೂ ಜಾರಿ ಮಾಡಿಲ್ಲ. ಅದರೆ, ಈಗ 2047ಕ್ಕೆ ವಿಕಸಿತ ಭಾರತ ಕಟ್ಟೋಣ ಎಂದು ಮತ್ತೆ ಅದೇ ಹಳೇ ಯೋಜನೆಗಳ ಬಗ್ಗೆ ಮಾತನಾಡುತ್ತಿದ್ದಾರೆ. ಈಗ ದೇಶದಲ್ಲಿ ಇವರಿಂದ ಏನೂ ಅಭಿವೃದ್ಧಿಯಾಗಿಲ್ಲ. ನಮ್ಮ ಕಾಂಗ್ರೆಸ್ ಗ್ಯಾರಂಟಿ ಯೋಜನೆಯ ಯಶಸ್ಸು ಕಂಡು ಅವರು ಈಗ ಮೋದಿ ಗ್ಯಾರಂಟಿ ಎಂದು ಹೇಳುತ್ತಿದ್ದಾರೆ. ನಾವು ಗ್ಯಾರಂಟಿ ಯೋಜನೆ ಘೋಷಿಸಿದ್ದಾಗ ಅಣಕಿಸಿದವರೇ ಈ ರೀತಿ ಮಾಡಿರುವುದರಿಂದಲೇ ತಿಳಿಯುತ್ತಿದೆ ಅವರು ನಮ್ಮ ಗ್ಯಾರಂಟಿ ಕಾಪಿ ಮಾಡಿದ್ದಾರೆ ಎಂದು ತಿಳಿಸಿದರು. ಮತ್ತೊಂದೆಡೆ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಹಾ ಸಂದರ್ಶನವೊಂದರ ವೇಳೆ, ರಾಜ್ಯಕ್ಕೆ ಬರ ಪರಿಹಾರ ನೀಡುವ ನಿಟ್ಟಿನಲ್ಲಿ ತಾಂತ್ರಿಕ ತೊಂದರೆ ಎದುರಾದವು ಎಂದಿದ್ದಾರೆ. ಹೀಗಾಗಿ ವಿಜಯೇಂದ್ರ ಅವರ ಹೇಳಿಕೆ ಬರ ಪರಿಹಾರ ನೀಡುವ ನಿಟ್ಟಿನಲ್ಲಿ ಕೇಂದ್ರದ ವೈಫಲ್ಯ ಒಪ್ಪಿಕೊಂಡಂತಾಗಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರಾದ ಕೋಟೆಹುಂಡಿ ಮಹದೇವ್, ಗೋಪಿನಾಥ್, ಆನಂದ್, ಶಿವನಾಗಪ್ಪ ಉಪಸ್ಥಿತರಿದ್ದರು.

ಕೆ.ಆರ್.ಪೇಟೆ, ಪಾಂಡವಪುರ ತಾಲೂಕಿನ ವಿವಿಧೆಡೆ ಸ್ಟಾರ್ ಚಂದ್ರು ಪ್ರಚಾರ

ಕೆ.ಆರ್.ಪೇಟೆ, ಏ.17–ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರು ಕೆ.ಆರ್.ಪೇಟೆ ತಾಲೂಕು ತೆಂಡೇಕೆರೆ ಗ್ರಾಮದಲ್ಲಿ ಬಾಬಾಸಾಹೇಬ್ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದ ನಂತರ ಕೆ.ಆರ್.ಪೇಟೆ ಮತ್ತು ಪಾಂಡವಪುರ ತಾಲೂಕಿನ ಹಲವು ಗ್ರಾಪಂ ವ್ಯಾಪ್ತಿಯಲ್ಲಿ ಚುನಾವಣಾ ಪ್ರಚಾರ ನಡೆಸಿದರು.

ಪ್ರಚಾರಕ್ಕೆ ತೆರಳಿದ ಕಡೆಯಲ್ಲೆಲ್ಲಾ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಸ್ಟಾರ್ ಚಂದ್ರು ಅವರಿಗೆ ಆರತಿ ಎತ್ತಿ, ಪಟಾಕಿ ಸಿಡಿಸಿ, ಹೂ ಮಾಲೆ ಹಾಕಿ ಸ್ವಾಗತಿಸಿದ ದೃಶ್ಯಗಳು ಎಲ್ಲೆಡೆ ಕಂಡುಬಂದಿತು. ಪಾಂಡವಪುರದಲ್ಲಿ ರೈತ ಸಂಘ ಹಾಗೂ ಸರ್ವೋದಯ ಪಕ್ಷದ ಕಾರ್ಯಕರ್ತರು ಚುನಾವಣಾ ಪ್ರಚಾರದಲ್ಲಿ ಪಾಲ್ಗೊಂಡರು.



ಕಾಂಗ್ರೆಸ್ ಪಕ್ಷ ರೈತರ ಪಕ್ಷ. ಉಳುವವನೇ ಭೂಮಿ ಒಡೆಯ ಕಾಯ್ದೆ ಜಾರಿಗೆ ತಂದಿದ್ದು ಕಾಂಗ್ರೆಸ್. ರೈತ ಬಾಂಧವರು ಮತ ಚಲಾಯಿಸುವ ಮುನ್ನ ಕಾಂಗ್ರೆಸ್ ಸರ್ಕಾರ ನೀಡಿದ ಕೊಡುಗೆಗಳನ್ನು ಒಮ್ಮೆ ಮನನ ಮಾಡಬೇಕು ಎಂದು ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಹೇಳಿದರು. ನನ್ನ ಗೆಲುವು ರೈತರ ಗೆಲುವು. ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳು ಮತ್ತು ಅಭಿವೃದ್ಧಿ ಕಾರ್ಯಗಳ ಆಧಾರದ ಮೇಲೆ ಮತ ಕೇಳುತ್ತಿದ್ದೇನೆ. ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಸಾಲಮನ್ನಾ, ಕನಿಷ್ಠ ಬೆಂಬಲ ಬೆಲೆ ಜಾರಿಗೊಳಿಸಲಾಗುವುದು. ನಿಮ್ಮ ಒಂದು ವೋಟ್ ರೈತರ ಜೀವನ ಸುಧಾರಣೆಗೆ ದಾರಿದೀಪವಾಗಲಿದೆ ಎಂದರು. ಸ್ವಾಭಿಮಾನಕ್ಕೆ ಹೆಸರಾದ ಜಿಲ್ಲೆ ಎಂದರೆ ಅದು ಮಂಡ್ಯ. ಜಿಲ್ಲೆಯ ಸ್ವಾಭಿಮಾನದ ಅಳಿವು, ಉಳಿವು ಮಂಡ್ಯ ಜಿಲ್ಲೆಯ ಜನತೆ ಕೈಯಲ್ಲಿದೆ. ಜನ್ಮ ಕೊಟ್ಟ ಈ ಮಣ್ಣಿನ ಋಣ ತೀರಿಸಲು ಬಂದಿದ್ದೇನೆ. ಮಂಡ್ಯ ಜನರ ಪ್ರೀತಿ, ಸ್ವಾಭಿಮಾನ ನಂಬಿ ಚುನಾವಣೆಗೆ ಸ್ಪರ್ಧಿಸಿದ್ದೇನೆ. ಜಿಲ್ಲೆಯ ಜನರು ನನ್ನ ಕೈ ಹಿಡಿಯುವ ಮೂಲಕ ಕಾಂಗ್ರೆಸ್‌ಗೆ ಶಕ್ತಿ ತುಂಬಬೇಕು, ಸಿದ್ದರಾಮಯ್ಯ ಡಿ.ಕೆ.ಶಿವಕುಮಾರ್ ಅವರ ಕೈ ಬಲಪಡಿಸಬೇಕು ಎಂದು ಮನವಿ ಮಾಡಿದರು.

ಪಾಂಡವಪುರ ತಾಲೂಕಿನಲ್ಲಿ ಸ್ಟಾರ್ ಚಂದ್ರು ಪರ ದರ್ಶನ್ ಪುಟ್ಟಣ್ಣಯ್ಯ ಮತಯಾಚಿಸಿದರು. ವಿಶ್ವದಲ್ಲೇ ಎಲ್ಲೂ ಇಲ್ಲದ ಗ್ಯಾರಂಟಿ ಯೋಜನೆಗಳನ್ನು ಕಾಂಗ್ರೆಸ್ ಸರ್ಕಾರ ಅನುಷ್ಠಾನಕ್ಕೆ ತಂದಿದೆ. ರೈತರ ಬಗ್ಗೆ ಕಾಳಜಿ ಹೊಂದಿರುವ ಕಾಂಗ್ರೆಸ್ ಪಕ್ಷವನ್ನು ರೈತ ಬಂಧುಗಳು ಬೆಂಬಲಿಸಿ, ಸ್ಟಾರ್ ಚಂದ್ರು ಅವರನ್ನು ಜಯಶೀಲರನ್ನಾಗಿಸಬೇಕು ಎಂದು ಅವರು ಮನವಿ ಮಾಡಿದರು. ನಾರಾಯಣಪುರ, ಚಿನಕುರಳಿ, ಹೊನಗನಹಳ್ಳಿ, ರಾಗಿಮುದ್ದನಹಳ್ಳಿ, ಡಿಂಕ, ಬನ್ನಂಗಾಡಿ, ಕಟ್ಟೇರಿ, ಅರಳಕುಪ್ಪೆ, ಕೆ.ಬೆಟ್ಟಹಳ್ಳಿ, ಹರವು, ಕ್ಯಾತನಹಳ್ಳಿ, ಕೆನ್ನಾಳು ಪಂಚಾಯತಿಗಳಲ್ಲಿ ಅವರು ಚುನಾವಣಾ ಪ್ರಚಾರ ನಡೆಸಿದರು.





ಪ್ರಚಾರಕ್ಕೆ ತೆರಳಿದ ಕಡೆಯಲ್ಲೆಲ್ಲಾ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಸಾರ್ವಜನಿಕರು ಸ್ಟಾರ್ ಚಂದ್ರು ಅವರಿಗೆ ಆರತಿ ಎತ್ತಿ ಸ್ವಾಗತಿಸಿದರು.

ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾಯಿಸುತ್ತಾರೆ ಎಂಬುದು ಶುದ್ಧ ಸುಳ್ಳು

- ರಾಜಕೀಯ ಲಾಭಕ್ಕಾಗಿ ಕಾಂಗ್ರೆಸ್ ಅಪಪ್ರಚಾರ
- ವಾಸ್ತವವಾಗಿ ಕಾಂಗ್ರೆಸ್ಸೇ 80 ಬಾರಿ ಸಂವಿಧಾನ ತಿದ್ದುಪಡಿ ಮಾಡಿದೆ
- ಮಾಜಿ ಮೇಯರ್ ಶಿವಕುಮಾರ್ ಆಕ್ರೋಶ

ಮೈಸೂರು,ಏ.17(ಎಂಟಿವೈ)– ಕಾಂಗ್ರೆಸ್ ನಾಯಕರು ಬಿಜೆಪಿಯವರು ಸಂವಿಧಾನವನ್ನು ಬದಲಾಯಿಸುತ್ತಾರೆ ಎಂದು ಆರೋಪ ಮಾಡುತ್ತಿರುವುದರಲ್ಲಿ ಯಾವುದೇ ಹುರುಳಿಲ್ಲ ಎಂದು ಮಾಜಿ ಮೇಯರ್ ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂವಿಧಾನ ರಚನೆಗೊಂಡ ನಂತರ ಇದುವರೆಗೂ 110 ಬಾರಿ ತಿದ್ದುಪಡಿ ಮಾಡಲಾಗಿದೆ. ಅವುಗಳಲ್ಲಿ ಕಾಂಗ್ರೆಸ್ ಸರ್ಕಾರವೇ 80 ಬಾರಿ ಸಂವಿಧಾನಕ್ಕೆ ತಿದ್ದುಪಡಿ ಮಾಡಿದೆ. ಆದರೂ, ಬಿಜೆಪಿ ಕೇಂದ್ರದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ, ಸಂವಿಧಾನವನ್ನೇ ಬದಲಾಯಿಸುತ್ತಾರೆ ಎಂದು ನಿರಂತರವಾಗಿ ಸುಳ್ಳುಗಳನ್ನು ಹೇಳುವ ಮೂಲಕ ದಲಿತರನ್ನು ದಾರಿತಪ್ಪಿಸುತ್ತಿದ್ದಾರೆ. ಪ್ರಧಾನಿ ಮೋದಿ ಸಂವಿಧಾನವನ್ನು ಯಾವುದೇ ಕಾರಣಕ್ಕೂ ಬದಲಾಯಿಸುವುದಿಲ್ಲ. ಸಂವಿಧಾನ ಬದಲಾವಣೆ ಕುರಿತು ಹೇಳಿಕೆ ನೀಡುತ್ತಿದ್ದ ನಾಯಕರ ವಿರುದ್ಧ ಪಕ್ಷ ಈಗಾಗಲೇ ಕ್ರಮ ಕೈಗೊಂಡಿದೆ. ಹೀಗಿದ್ದರೂ ಕಾಂಗ್ರೆಸ್ ನಾಯಕರು, ಬಿಜೆಪಿ ವಿರುದ್ಧ ಅಪಪ್ರಚಾರ ಮಾಡಿ ದಲಿತರಲ್ಲಿ ಅಪನಂಬಿಕೆಯನ್ನುಂಟು ಮಾಡಲು ಯತ್ನಿಸುತ್ತಿದೆ ಎಂದು ಕಿಡಿಕಾರಿದರು.



ಕಾಂಗ್ರೆಸ್‌ನಿಂದಲೇ ಅಂಬೇಡ್ಕರ್ ಅವರಿಗೆ ಅನ್ಯಾಯವಾಗಿದೆ. ದಲಿತ ಸಮುದಾಯಕ್ಕೆ ಕಾಂಗ್ರೆಸ್ ಕೊಡುಗೆ ಶೂನ್ಯ. ಆದರೂ ಚುನಾವಣೆ ಸಂದರ್ಭದಲ್ಲಿ ದಲಿತ ಸಮುದಾಯದ ಮತವನ್ನು ಸೆಳೆಯಲು ಕುತಂತ್ರ ನಡೆಸುತ್ತಿದ್ದಾರೆ. ಕಾಂಗ್ರೆಸ್ ಮಾಡುವ ಅಪಪ್ರಚಾರಕ್ಕೆ ದಲಿತ ಸಮುದಾಯ ಆಸ್ಪದ ನೀಡುವುದಿಲ್ಲ. ದೇಶದಲ್ಲಿ ಮತ್ತೆ ಮೋದಿ ಪ್ರಧಾನಿಯಾಗಲು ಎಲ್ಲಾ ಸಮುದಾಯಗಳು ನಿರ್ಧರಿಸಿವೆ ಎಂದು ತಿಳಿಸಿದರು.

ರಾಜ್ಯ ಪೌರಕಾರ್ಮಿಕರ ಸಂಘದ ಅಧ್ಯಕ್ಷ ನಾರಾಯಣ್ ಅವರು ದಲಿತರು ಕಾಂಗ್ರೆಸ್‌ಗೆ ಮತ ನೀಡಬೇಕೆಂದು ಹೇಳಿದ್ದಾರೆ. ಆದರೆ 70 ವರ್ಷಗಳ ಕಾಲ ಈ ದೇಶವನ್ನು ಆಳಿದ ಕಾಂಗ್ರೆಸ್ ಪೌರಕಾರ್ಮಿಕರ ಉದ್ಧಾರಕ್ಕೆ ಏನೇನು ಮಾಡಿದೆ ಎಂದು ಹೇಳಿಲ್ಲ. ಆದರೆ, ಬಿಜೆಪಿ ಸರ್ಕಾರ ಪೌರಕಾರ್ಮಿಕರ ಹಿತ ಕಾಯಲು ಅನೇಕ ಕಾರ್ಯಕ್ರಮ ರೂಪಿಸಿದೆ. 2 ಲಕ್ಷ ರೂ. ಸಾಲ ಸೌಲಭ್ಯ ನೀಡಲಾಗುತ್ತಿದೆ. ಪೌರಕಾರ್ಮಿಕರನ್ನು ಅಧ್ಯಯನಕ್ಕಾಗಿ ವಿದೇಶಗಳಿಗೆ ಕಳುಹಿಸಿ ತರಬೇತಿ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಪೌರಕಾರ್ಮಿಕರ ಅಭಿವೃದ್ಧಿಗೆಂದು ಹಲವಾರು ಕಾರ್ಯಕ್ರಮಗಳನ್ನು, ಯೋಜನೆಗಳನ್ನು ಜಾರಿಗೆ ತಂದಿದ್ದು ಬಿಜೆಪಿ ಸರ್ಕಾರ. ಈ ದೇಶದಲ್ಲಿ ಪೌರ ಕಾರ್ಮಿಕರ ಪಾದ ತೊಳೆದು ಪೂಜೆ ಮಾಡುವ ಮೂಲಕ ಮೋದಿ ಪೌರಕಾರ್ಮಿಕರನ್ನು ಗೌರವಿಸಿದ್ದಾರೆ ಎಂದು ತಿಳಿಸಿದರು.

ಮಾಜಿ ಮೇಯರ್ ಆರ್.ಲಿಂಗಪ್ಪ ಮಾತನಾಡಿ, ದೇಶದ ಹಿತ ಕಾಯುವ ನಿಟ್ಟಿನಲ್ಲಿ ಮೋದಿ ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂದು ಜನ ಹಂಬಲಿಸುತ್ತಿದ್ದಾರೆ. ಕರ್ನಾಟಕದಲ್ಲಿ ಬಿಜೆಪಿಯೊಂದಿಗೆ ಜೆಡಿಎಸ್ ಮೈತ್ರಿ ಮಾಡಿಕೊಂಡಿದ್ದು, ರಾಜ್ಯದ 28 ಕ್ಷೇತ್ರಗಳಲ್ಲೂ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಜೆಡಿಎಸ್ ಕಾರ್ಯಕರ್ತರು ಪಣ ತೊಟ್ಟಿದ್ದಾರೆ. ದೇಶದ ಹಿತಕ್ಕಾಗಿ ಎಲ್ಲರೂ ಮೈತ್ರಿ ಅಭ್ಯರ್ಥಿಗೆ ಬೆಂಬಲ ನೀಡಬೇಕು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಸತ್ಯವತಿ, ರಾಜೇಶ್ವರಿ, ಬಿಜೆಪಿ ನಗರ ಸಹ ವಕ್ತಾರ ದೇವರಾಜ್, ಮಾಧ್ಯಮ ಸಂಚಾಲಕ ಮಹೇಶ್ ರಾಜೇ ಅರಸ್ ಇದ್ದರು.

ಕಾಂಗ್ರೆಸ್ ನಾಯಕರು ರಾಜಕೀಯ ಲಾಭಕ್ಕೆ ಒಕ್ಕಲಿಗ ಸಮುದಾಯವನ್ನು ಬೀದಿಗೆಳೆಯುವ ಕೆಲಸ ಮಾಡುತ್ತಿದ್ದಾರೆ

ಮಾಜಿ ಮೇಯರ್ ಸಂದೇಶ್‌ಸ್ವಾಮಿ ಆರೋಪ

ಮೈಸೂರು,ಏ.17(ಎಂಟಿವೈ)–ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ರಾಜಕೀಯ ಲಾಭಕ್ಕಾಗಿ ಒಕ್ಕಲಿಗ ಸಮುದಾಯವನ್ನು ಬೀದಿಗೆಳೆಯುವ ಕೆಲಸ ಮಾಡುತ್ತಿದ್ದಾರೆ ಎಂದು ಮಾಜಿ ಮೇಯರ್ ಸಂದೇಶ್‌ಸ್ವಾಮಿ ಆರೋಪಿಸಿದ್ದಾರೆ.

ಮೈಸೂರಿನ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕಲಿಗ ಸಮುದಾಯದವರು ತಮ್ಮ ಒಕ್ಕಲುತನ ಮಾಡಿಕೊಂಡು ನೆಮ್ಮದಿಯಾಗಿದ್ದಾರೆ. ನಿಮ್ಮ ರಾಜಕೀಯ ಬೇಳೆ ಬೇಯಿಸಿಕೊಳ್ಳಲು ರಾಜಕಾರಣಕ್ಕೆ ಒಕ್ಕಲಿಗ ಸಮುದಾಯವನ್ನು ಎಳೆದು ತರಬೇಡಿ. ರಾಜಕಾರಣಕ್ಕೆ ಬಾಲಗಂಗಾಧರನಾಥ ಮಠದ ಸ್ವಾಮಿಯವರ ಹೆಸರನ್ನು ಎಳೆದು ತರುತ್ತಿರುವುದು ಸರಿಯಲ್ಲ. ರಾಜಕೀಯ ದುರುದ್ದೇಶಕ್ಕೆ ಮಠದ ಹೆಸರನ್ನು ಪ್ರಸ್ತಾಪಿಸಬಾರದು. ಕಾಂಗ್ರೆಸ್–ಜೆಡಿಎಸ್ ಮೈತ್ರಿಯಾಗಿದ್ದಾಗ ಲೋಕಸಭೆ ಚುನಾವಣೆಯಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರನ್ನು ಮೈಸೂರಿನಲ್ಲಿ ಸ್ಪರ್ಧಿಸಲು ಬಿಡದೆ, ತುಮಕೂರಿಗೆ ಹೋಗಿ ಸ್ಪರ್ಧಿಸುವಂತೆ ಮಾಡಿದರು. ಅವರನ್ನು ಸೋಲಿಸಿದ್ದು ಯಾರು ಎಂಬುದು ಇಡೀ ಒಕ್ಕಲಿಗ ಸಮುದಾಯಕ್ಕೆ ಗೊತ್ತಿದೆ. ಮಹಿಳೆಯರ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿಯವರಿಗೆ ಇರುವಷ್ಟು ಕಾಳಜಿ, ಮಮತೆ, ಪ್ರೀತಿ, ವಾತ್ಸಲ್ಯ ಬೇರೆ ಯಾರಿಗೂ ಇಲ್ಲ. ಆ ಕಾರಣದಿಂದಲೇ ಕುಮಾರಣ್ಣ ಎಂದು ಪ್ರಸಿದ್ಧಿಯಾದರು. ಆದರೆ ಈಗ ಅವರು ಮಹಿಳೆಯರ ಕುರಿತು ನೀಡಿರುವ ಹೇಳಿಕೆಯನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ, ಅಪಾರ್ಥ ಬರುವಂತೆ ತಿಳಿಸುವ ಮೂಲಕ ರಾಜಕೀಯಕ್ಕೆ ಬಳಸಿಕೊಳ್ಳುತ್ತಿರುವುದು, ವಿವಾದವನ್ನು ಜೀವಂತವಾಗಿಡುವ ಪ್ರಯತ್ನ ನಡೆಸುತ್ತಿರುವುದು ಸರಿಯಲ್ಲ ಎಂದರು.

ಕಾಂಗ್ರೆಸ್‌ನ ಗ್ಯಾರಂಟಿಗಳೆಲ್ಲಾ ಗೋತಾ ಹೊಡೆಯುತ್ತಿವೆ. ಗ್ಯಾರಂಟಿ ಹೆಸರಿನಲ್ಲಿ ಕಾಂಗ್ರೆಸ್ ಸರ್ಕಾರ ಮಹಿಳೆಯರನ್ನು ಯಾಮಾರಿಸಿ, ಅವರ ಮೂಗಿಗೆ ತುಪ್ಪ ಸವರುತ್ತಿದೆ. ಕೇಂದ್ರ ಸರ್ಕಾರದ ಯೋಜನೆಗಳು ನಿರಂತರವಾಗಿದ್ದರೆ, ರಾಜ್ಯ ಕಾಂಗ್ರೆಸ್ ಸರ್ಕಾರದ ಯೋಜನೆಗಳು, ಕಾರ್ಯಕ್ರಮವೆಲ್ಲಾ ಅತಂತ್ರವಾಗಿವೆ ಎಂದು ಕಿಡಿಕಾರಿದರು.

ಬಿಜೆಪಿಯಿಂದ ಸಂವಿಧಾನ ಬದಲಾಯಿಸುವ ಹುನ್ನಾರ ನಡೆಯುತ್ತಿದೆ

ಶಾಸಕ ತನ್ವೀರ್ ಸೇಠ್ ಆರೋಪ

ಮೈಸೂರು,ಏ.17(ಎಂಟಿವೈ)– ಸಂವಿಧಾನದಲ್ಲಿ ಎಲ್ಲಾ ಧರ್ಮಗಳಿಗೂ ಸಮಾನತೆ ಕಲ್ಪಿಸಿರುವುದನ್ನು ಸಹಿಸದೇ ಬಿಜೆಪಿ ನಾಯಕರು ಸಂವಿಧಾನ ಬದಲಿಸುವ ಹುನ್ನಾರ ನಡೆಸುತ್ತಿದ್ದು, ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ಧರ್ಮಗಳ ಜನರು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯನ್ನು ಸೋಲಿಸಿ, ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬೆಂಬಲ ನೀಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ತನ್ವೀರ್ ಸೇಠ್ ಮನವಿ ಮಾಡಿದ್ದಾರೆ.

ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಬುಧವಾರ ಆಯೋಜಿಸಿದ್ದ ಅಲ್ಪಸಂಖ್ಯಾತ ಘಟಕದ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ ಹಾಗೂ ಅಲ್ಪಸಂಖ್ಯಾತ ಮುಖಂಡರ ಸಭೆಯಲ್ಲಿ ಮಾತನಾಡಿದ ಅವರು, ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರು ಕೊಡುಗೆ ನೀಡಿದ ಸಂವಿಧಾನದಲ್ಲಿ ಭಾರತದಲ್ಲಿರುವ ಎಲ್ಲಾ ಜಾತಿ, ಧರ್ಮಗಳಿಗೂ ಸಮಾನ ಅವಕಾಶ ನೀಡಿದ್ದಾರೆ. ಸಂವಿಧಾನದಲ್ಲಿರುವ ಸಮಾನತೆಯೇ ಬಿಜೆಪಿ ನಾಯಕರಿಗೆ ಸಹಿಸಲು ಆಗುತ್ತಿಲ್ಲ. ಸಮಾನತೆಗೆ ಒತ್ತು ನೀಡಿದೆ. ಆ ಕಾರಣದಿಂದಲೇ ಸಂವಿಧಾನ ಬದಲಿಸಲು ಉದ್ದೇಶಿಸಿದ್ದಾರೆ. ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚಿನ ಸ್ಥಾನ ಲಭಿಸಿದರೆ ಸಂವಿಧಾನ ಬದಲಿಸುವುದಕ್ಕೆ ಮುಂದಾಗುತ್ತಾರೆ. ಇದಕ್ಕೆ ಅವಕಾಶ ಮಾಡಿಕೊಡಬಾರದು. ಇದನ್ನು ತಡೆಯಬೇಕಾದರೆ ನಾವು ಈಗ ಸಂವಿಧಾನದ ಪರವಾಗಿರುವ ಕಾಂಗ್ರೆಸ್‌ಗೆ ಮತ ನೀಡಬೇಕು. ಅದಕ್ಕಾಗಿ ಬಿಜೆಪಿಯನ್ನು ಸೋಲಿಸಲೇಬೇಕು ಎಂದು ತಿಳಿಸಿದರು.



ಮೈಸೂರಿನ ಜಿಲ್ಲಾ ಕಾಂಗ್ರೆಸ್ ಭವನದಲ್ಲಿ ಅಲ್ಪಸಂಖ್ಯಾತರ ಘಟಕದ ವತಿಯಿಂದ ನೂತನ ಪದಾಧಿಕಾರಿಗಳ ಅಧಿಕಾರ ಸ್ವೀಕಾರ ಸಮಾರಂಭದಲ್ಲಿ ಶಾಸಕ ತನ್ವೀರ್ ಸೇಠ್ ಮಾತನಾಡಿದರು.

ಕಳೆದ 10 ವರ್ಷಗಳಿಂದ ಆಡಳಿತ ನಡೆಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ದೇಶದ ಬಡ ಜನರ ಪರ ಯಾವುದೇ ಕಾರ್ಯಕ್ರಮ ರೂಪಿಸಲಿಲ್ಲ. ಉದ್ದೇಶಪೂರ್ವಕವಾಗಿ ಮುಸ್ಲಿಂ ಸಮುದಾಯಕ್ಕೆ ನೋವುಂಟು ಮಾಡಿದ್ದಾರೆ. ದೇಶಕ್ಕೆ ಸ್ವಾತಂತ್ರ್ಯ ದೊರಕಿಸಿಕೊಡಲು ಅನೇಕ ಮುಸ್ಲಿಮರು ಹೋರಾಟಗಾರರು ಬ್ರಿಟಿಷರ ವಿರುದ್ಧ ಹೋರಾಟ ಮಾಡಿದ್ದಾರೆ. ಈಗ ಅದೇ ಮಾದರಿಯ ತ್ಯಾಗದ ಹೋರಾಟಕ್ಕೆ ಸಜ್ಜಾಗಬೇಕು. ಚುನಾವಣೆಯ ನಂತರ ಸ್ವಾಭಿಮಾನದಿಂದ ಮುಸ್ಲಿಂರು ಜೀವನ ಮಾಡಬೇಕಾದರೆ, ಕಡ್ಡಾಯವಾಗಿ ಕಾಂಗ್ರೆಸ್‌ಗೆ ಮತ ಚಲಾಯಿಸಬೇಕು. ಮತದಾನದಿಂದ ದೂರ ಉಳಿಯಬಾರದು ಎಂದು ಸಲಹೆ ನೀಡಿದರು.

ಈ ಬಾರಿ ಲೋಕಸಭಾ ಚುನಾವಣೆ ಸತ್ಯ ಹಾಗೂ ಸುಳ್ಳಿನ ನಡುವೆ ನಡೆಯುತ್ತಿರುವ ಚುನಾವಣೆ. 10 ವರ್ಷದ ಹಿಂದೆ ಮೋದಿ ಕಪ್ಪು ಹಣ ತಂದು ಪ್ರತಿಯೊಬ್ಬರ ಖಾತೆಗೆ 15 ಲಕ್ಷ ರೂ. ಹಾಕುವುದಾಗಿ ಹೇಳಿದ್ದರು. ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸಿ, ನಿರುದ್ಯೋಗ ಸಮಸ್ಯೆ ಹೋಗಲಾಡಿಸುವುದಾಗಿ ಭರವಸೆ ನೀಡಿದ್ದರು. ಆದರೆ ನೀಡಿದ್ದ ಒಂದೇ ಒಂದು ಭರವಸೆಯನ್ನೂ ಈಡೇರಿಸಿಲ್ಲ. ಕಾಂಗ್ರೆಸ್ ಪಕ್ಷ ನೀಡಿದ ಎಲ್ಲ ಆಶ್ವಾಸನೆಗಳನ್ನು ಈಡೇರಿಸಿದೆ. ನಾವು ಕೆಲಸ ಮಾಡಿದ್ದೇವೆ, ಜನತೆ ನಮ್ಮ ಕೆಲಸಕ್ಕೆ ಕೂಲಿ ಕೊಡಬೇಕು ಎಂದು ಮತಯಾಚಿಸಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅಲ್ಪಸಂಖ್ಯಾತರು ಸೇರಿದಂತೆ ಎಲ್ಲಾ ವರ್ಗದ ಹಿತಕಾಯುವ ಕೆಲಸ ಮಾಡಿದ್ದಾರೆ. ಅಲ್ಪಸಂಖ್ಯಾತರಲ್ಲಿ ಕೇವಲ ಮುಸ್ಲಿಮರು ಮಾತ್ರ ಇಲ್ಲ. ಕ್ರೈಸ್ತರು, ಜೈನ ಧರ್ಮ, ಸಿಖ್ ಸೇರಿದಂತೆ ಇನ್ನು ಅನೇಕ ಧರ್ಮಗಳು ಸೇರಿವೆ. ಸಿಎಂ ಸಿದ್ದರಾಮಯ್ಯ ಕ್ರೈಸ್ತ ಧರ್ಮಕ್ಕೆ 200 ಕೋಟಿ, ಜೈನ ಧರ್ಮಕ್ಕೆ 80 ಕೋಟಿ ಅನುದಾನ ನೀಡಿದ್ದಾರೆ. ಎಲ್ಲಾ ಸಮುದಾಯಗಳಿಗೂ ನ್ಯಾಯ ಒದಗಿಸುತ್ತಿದ್ದಾರೆ ಎಂದರು.

ಪಶು ಸಂಗೋಪನೆ ಸಚಿವ ಕೆ.ವೆಂಕಟೇಶ್ ಮಾತನಾಡಿ, 5 ವರ್ಷಕ್ಕೊಮ್ಮೆ ಬರುವ ಚುನಾವಣೆಗಳು ತಮ್ಮ ಹಕ್ಕನ್ನು ಪ್ರತಿಪಾದಿಸುವುದರೊಂದಿಗೆ ದೇಶದಲ್ಲಿ ಅಶಾಂತಿ ಕದಡುವ ಶಕ್ತಿಗಳನ್ನು ಹಿಮ್ಮೆಟ್ಟಿಸಲು ಜನರಿಗೆ ದೊರೆಯುವ ಅವಕಾಶವಾಗಿದೆ. ಈ ಅವಕಾಶ ಬಳಸಿಕೊಂಡು ಈ ಬಾರಿ ಬಿಜೆಪಿಯನ್ನು ಸೋಲಿಸಬೇಕು. ದೇಶದಲ್ಲಿ ಒಡೆದು ಆಳುವ ನೀತಿಯನ್ನು ಕೇಂದ್ರದ ಬಿಜೆಪಿ ಸರ್ಕಾರ ಅನುಸರಿಸುತ್ತಿದೆ. ಆದರೆ, ಕಾಂಗ್ರೆಸ್ ಪಕ್ಷ ಅಲ್ಪಸಂಖ್ಯಾತ ಸಮುದಾಯಕ್ಕೆ ಸಂಪೂರ್ಣ ರಕ್ಷಣೆ ನೀಡಲಿದೆ. ಜೆಡಿಎಸ್, ಬಿಜೆಪಿಯೊಂದಿಗೆ ಹೊಂದಾಣಿಕೆ ಮಾಡಿಕೊಂಡಿರುವುದರಿಂದ ಜೆಡಿಎಸ್‌ನಲ್ಲಿ ಗುರುತಿಸಿಕೊಂಡಿದ್ದ ಅನೇಕ ಅಲ್ಪಸಂಖ್ಯಾತ ಮುಖಂಡರು ಕಾಂಗ್ರೆಸ್ ಬೆಂಬಲಿಸಲು ಮುಂದಾಗಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ, ಅಬ್ದುಲ್ ಜಬ್ಬಾರ್, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮಾಜಿ ಮೇಯರ್ ಆರೀಫ್ ಹುಸೇನ್, ಪಾಲಿಕೆ ಮಾಜಿ ಸದಸ್ಯ ಶೌಕತ್ ಪಾಷ, ಅಜ್ಜರತ್ ಪಾಷ, ನಗರಾಧ್ಯಕ್ಷ ಆರ್.ಮೂರ್ತಿ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮೋಸಿನ್ ಖಾನ್, ರಾಜ್ಯ ಉಪಾಧ್ಯಕ್ಷ ಸಿರಾಜ್ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯದ ಮುಖಂಡರು ಕಾರ್ಯಕ್ರಮದಲ್ಲಿ ಹಾಜರಿದ್ದರು.

ತಮಿಳುನಾಡಿಗೆ ನೀರು ಬಿಟ್ಟು ಅನ್ಯಾಯ ಮಾಡಿದ ಕಾಂಗ್ರೆಸ್ ತಿರಸ್ಕರಿಸಿ

ಬಹಿರಂಗ ಪ್ರಚಾರ ಸಭೆಯಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಮನವಿ

ಕೆ.ಆರ್.ಪೇಟೆ, ಏ.17– ಮಂಡ್ಯ ಜಿಲ್ಲೆಯ ರೈತರ ಕಬ್ಬು, ಭತ್ತದ ಬೆಳೆಯು ನೀರಿಲ್ಲದೆ ಒಣಗುತ್ತಿದೆ. ಇದನ್ನು ನೋಡಿದರೆ ಕಣ್ಣಲ್ಲಿ ನೀರು ಬರುತ್ತಿದೆ. ಹಾಗಾಗಿ ನಮ್ಮ ಮಂಡ್ಯ ಜಿಲ್ಲೆಯ ರೈತರಿಗೆ ಅನ್ಯಾಯ ಮಾಡಿ ತಮಿಳುನಾಡಿಗೆ ನೀರು ಹರಿಸಿ ಅಲ್ಲಿ 3ನೇ ಬೆಳೆ ಬೆಳೆಯಲು ಅನುಕೂಲ ಮಾಡಿಕೊಟ್ಟ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸಿ, ರೈತರು ಮತ್ತು ಬಡವರ ಪರ ಧ್ವನಿಯಾಗಿರುವ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಕನಿಷ್ಠ ಮೂರು ಲಕ್ಷ ಮತಗಳ ಅಂತರದಿಂದ ಗೆಲ್ಲಿಸುವ ಮೂಲಕ ಕೇಂದ್ರದಲ್ಲಿ ಕೃಷಿ ಸಚಿವರಾಗಲು ಅವಕಾಶ ಕಲ್ಪಿಸಬೇಕು ಎಂದು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತದಾರರಲ್ಲಿ ಮನವಿ ಮಾಡಿದರು.

ಪಟ್ಟಣದ ಪುರಸಭಾ ಮೈದಾನದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿ ಅವರ ಪರವಾಗಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಬಹಿರಂಗ ಪ್ರಚಾರ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರವು ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿ ಶೂನ್ಯವಾಗಿದೆ. ಜನತೆಗೆ ಮೂಲಭೂತ ಸೌಲಭ್ಯಗಳಿಗೆ ಅನುದಾನ ನೀಡದೇ ರಾಜ್ಯದ ಜನರನ್ನು ವಂಚಿಸುತ್ತಿದೆ. ಈ ಹಿಂದೆ ರೈತರ ಪಂಪ್‌ಸೆಟ್‌ಗಳಿಗೆ ವಿದ್ಯುತ್ ಸೌಲಭ್ಯ ಪಡೆಯಲು 25ಸಾವಿರ ಇದ್ದ ಠೇವಣಿ ಹಣವನ್ನು ಈಗ 3ಲಕ್ಷಕ್ಕೆ ಏರಿಕೆ ಮಾಡುವ ಮೂಲಕ ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ. ಇಂತಹ ರೈತ ವಿರೋಧಿ ಸರ್ಕಾರಕ್ಕೆ ಲೋಕಸಭಾ ಚುನಾವಣೆ ಯಲ್ಲಿ ತಕ್ಕಪಾಠ ಕಲಿಸಬೇಕು ಎಂದರು.

2006ರಲ್ಲಿ ಜೆಡಿಎಸ್-ಬಿಜೆಪಿ ಮೈತ್ರಿ ಸರ್ಕಾರದಲ್ಲಿ ಮುಖ್ಯಮಂತ್ರಿಯಾಗಿದ್ದ ಕುಮಾರಸ್ವಾಮಿ ಅವರು ಗ್ರಾಮ ವಾಸ್ತವ್ಯದ ವೇಳೆ ನಾನಾ ಲಕ್ಷಾಂತರ ಮಹಿಳೆಯರ ತಮ್ಮ ಕುಟುಂಬದ ಯಜಮಾನ ಸಾರಾಯಿ ಕುಡಿದು, ಲಾಟರಿ ಆಟವಾಡುತ್ತಾ ನೆಮ್ಮದಿ ಹಾಳಾಗಿದೆ. ಹಾಗಾಗಿ ಇವರ ಆಶಯದಂತೆ ಲಾಟರಿ ಮತ್ತು ಸಾರಾಯಿ ಯನ್ನು ನಿಷೇಧ ಮಾಡುವ ಮೂಲಕ ಬಡ ಕುಟುಂಬಗಳ ನೆಮ್ಮದಿಗೆ ಕಾರಣವಾಗಿದ್ದಾರೆ. 2018ರಲ್ಲಿ ಎರಡನೇ ಬಾರಿಗೆ ಮುಖ್ಯಮಂತ್ರಿಯಾಗಿದ್ದ ವೇಳೆ ಸುಮಾರು 22ಲಕ್ಷ ರೈತರ 25ಸಾವಿರ ಕೋಟಿ ಸಾಲವನ್ನು ಮನ್ನಾ ಮಾಡುವ ಮೂಲಕ ತಮಗಿರುವ ರೈತಪರ ಹಾಗೂ ಬಡವರ ಪರ ಕಾಳಜಿಯನ್ನು ತೋರಿಸಿದ್ದಾರೆ ಎಂದರು.



ಕೆ.ಆರ್.ಪೇಟೆ: ಪಟ್ಟಣದ ಪುರಸಭಾ ಮೈದಾನದಲ್ಲಿ ಮಂಡ್ಯ ಲೋಕಸಭಾ ಕ್ಷೇತ್ರದ ಜೆಡಿಎಸ್ ಮತ್ತು ಬಿಜೆಪಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಅವರ ಪರವಾಗಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ಬಹಿರಂಗ ಸಭೆಯನ್ನು ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಉದ್ಘಾಟಿಸಿದರು. ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಇತರರು ಚಿತ್ರದಲ್ಲಿದ್ದಾರೆ.

ಮಂಡ್ಯದ ನೀರು ತಮಿಳುನಾಡು ಪಾಲು: ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕಳೆದ 35 ವರ್ಷಗಳಿಂದ ಮಂಡ್ಯ ಜಿಲ್ಲೆಯ ಜನತೆ ನಾನು ಸೂಚಿಸಿದ ಜೆಡಿಎಸ್ ಪಕ್ಷದ ಅಭ್ಯರ್ಥಿಗಳಿಗೆ ಪ್ರಚಂಡ ಮತಗಳನ್ನು ನೀಡಿ ಗೆಲ್ಲಿಸಿದ್ದೀರಿ, ಇದೇ ಮೊದಲ ಬಾರಿಗೆ ನಾನೇ ನೇರವಾಗಿ ಚುನಾವಣೆಗೆ ಸ್ಪರ್ಧೆ ಮಾಡಿದ್ದೇನೆ. ಈ ನಾಡಿನ ನೀರಾವರಿ ಯೋಜನೆಗಳಿಗೆ ಶಾಶ್ವತ ಪರಿಹಾರ ರೂಪಿಸುವುದು ನನ್ನ ಉದ್ದೇಶವಾಗಿದೆ. ಇದಕ್ಕೆ ಮಂಡ್ಯ ಜಿಲ್ಲೆಯ ಜನತೆ ಅವಕಾಶ ನೀಡಬೇಕು. ಕಾಂಗ್ರೆಸ್ ಸರ್ಕಾರವು ಕನ್ನಂಬಾಡಿ ಕಟ್ಟೆಯಿಂದ ವಿಸಿ ನಾಲೆಗಳಲ್ಲಿ ನೀರು ನಿಲ್ಲಿಸಿ ರೈತರ ಬೆಳೆ ಒಣಗಲು ಕಾರಣವಾಗಿದೆ. ಮಂಡ್ಯ ಲೋಕಸಭಾ ಅಭ್ಯರ್ಥಿ ಸ್ಟಾರ್ ಚಂದ್ರು ಅವರಿಗೆ ಗುತ್ತಿಗೆ ನೀಡಿ, ಅವರನ್ನೇ ಕಾಂಗ್ರೆಸ್ ಅಭ್ಯರ್ಥಿಯನ್ನಾಗಿ ಮಾಡಿದ್ದಾರೆ.

ಬೃಹತ್ ಬಹಿರಂಗ ಸಭೆಯಲ್ಲಿ ರಾಜ್ಯ ಯುವ ಜನತಾದಳದ ಅಧ್ಯಕ್ಷ ನಿಖಿಲ್, ಮಾಜಿ ಸಚಿವರಾದ ಸಿ.ಎಸ್.ಪುಟ್ಟರಾಜು, ಕೆ.ಸಿ.ನಾರಾಯಣ ಗೌಡ, ಜಿಲ್ಲಾ ಬಿಜೆಪಿ ಅಧ್ಯಕ್ಷ ಡಾ.ಇಂದ್ರೇಶ್, ಜಿಲ್ಲಾ ಜೆಡಿಎಸ್ ಅಧ್ಯಕ್ಷ ಡಿ.ರಮೇಶ್, ಮನ್‌ಮುಲ್ ನಿರ್ದೇಶಕ ಡಾಲು ರವಿ, ಮುಖಂಡರಾದ ಅಬ್ಬಾಸ್ ಅಲಿಬೋಹ್ರಾ, ಸಿದ್ದರಾಮಯ್ಯ, ಚೋಳೇನಹಳ್ಳಿ ಪುಟ್ಟಸ್ವಾಮಿಗೌಡ, ಎಸ್.ಎಲ್.ಮೋಹನ್, ಹೆಚ್.ಕೆ.ರಾಮು, ಎ.ಆರ್.ರಘು, ಎಂ.ಬಿ. ಹರೀಶ್, ಬಿ.ಎಂ.ಕಿರಣ್, ಕೆ.ಜೆ.ವಿಜಯ್ ಕುಮಾರ್, ಶರಣು ತಳ್ಳಿಕೆರಿ, ರಾಜೇನಹಳ್ಳಿ ಕುಮಾರಸ್ವಾಮಿ, ಎ.ಎಂ.ಸಂಜೀವಪ್ಪ, ಐನೋರಹಳ್ಳಿ ಮಲ್ಲೇಶ್, ತೋಟಪ್ಪಶೆಟ್ಟಿ, ಬೇಲದಕೆರೆ ಪಾಪೇಗೌಡ, ಆರ್.ಜಗದೀಶ್, ತಾಲೂಕು ಜೆಡಿಎಸ್ ಅಧ್ಯಕ್ಷ ಎ.ಎನ್ ಜಾನಕಿರಾಮ್, ತಾಲೂಕು ಜೆಡಿಎಸ್ ಕಾನೂನು ಘಟಕದ ಅಧ್ಯಕ್ಷ ವಕೀಲ ವಿ.ಎಸ್.ಧನಂಜಯಕುಮಾರ್ ಸೇರಿದಂತೆ ಸುಮಾರು 20 ಸಾವಿರಕ್ಕೂ ಹೆಚ್ಚು ಕಾರ್ಯಕರ್ತರು ಹಾಗೂ ಮುಖಂಡರು ಬೃಹತ್ ಬಹಿರಂಗ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಕುಮಾರಣ್ಣ ಅವರನ್ನು ಬೃಹತ್ ಮೂಸಂಬಿ ಹಣ್ಣಿನ ಹಾರವನ್ನು ಕ್ರೇನ್ ಮೂಲಕ ಹಾಕುವ ಮೂಲಕ ಅದ್ದೂರಿಯಾಗಿ ಸ್ವಾಗತಿಸಲಾಯಿತು.

ಮನ್‌ಮುಲ್ ಅಭ್ಯರ್ಥಿಗಳ ಘೋಷಣೆ: ಮುಂಬರುವ ಮಂಡ್ಯ ಜಿಲ್ಲಾ ಹಾಲು ಒಕ್ಕೂಟದ ನಿರ್ದೇಶಕರ ಸ್ಥಾನಕ್ಕೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳನ್ನಾಗಿ ಡಾಲು ರವಿ ಮತ್ತು ಎಂ.ಬಿ.ಹರೀಶ್ ಅವರನ್ನು ಮಾಜಿ ಸಿ.ಎಂ.ಕುಮಾರಸ್ವಾಮಿ ಅವರು ಘೋಷಣೆ ಮಾಡಿದರು.

ಮನೆಯಿಂದಲೇ ಶತಾಯುಷಿ ಮತದಾನ



ಶ್ರೀರಂಗಪಟ್ಟಣ, ಏ.17– ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಹಿರಿಯರು ಮತ್ತು ವಯೋವೃದ್ಧರಿಗೆ ಮನೆಯಲ್ಲಿಯೇ ಮತದಾನ ಮಾಡುವ ಅವಕಾಶ ಕಲ್ಪಿಸಲಾಗಿದ್ದು, ಶತಾಯುಷಿಯೊಬ್ಬರು ಉತ್ಸಾಹದಿಂದ ಮತದಾನ ಮಾಡಿದ್ದಾರೆ.

ತಾಲೂಕಿನ ತಡಗವಾಡಿ ಗ್ರಾಮ ಪಂಚಾಯಿತಿಯ ಚಿಕ್ಕ ಹಾರೋಹಳ್ಳಿ ಗ್ರಾಮದಲ್ಲಿ ಹಿರಿಯ ನಾಗರಿಕರಾದ, 102 ವಯಸ್ಸಿನ ಹೊಂಬಾಳಮ್ಮ ಆತ್ಮವಿಶ್ವಾಸದಿಂದ ಮತದಾನ ಮಾಡಿದರು.

102 ರ ಇಳಿ ವಯಸ್ಸು ತುಂಬಿದ್ದು ಅವರು ತಮ್ಮ ಮತದಾನ ಮಾಡುವ ಮೂಲಕ ಇತರ ಮತದಾರರಿಗೆ ಮಾದರಿಯಾಗಿದ್ದಾರೆ. ಕಾರ್ಯನಿರ್ವಾಹಕ ಅಧಿಕಾರಿ ಗಳ ನಿರ್ದೇಶನದನ್ವಯ 102 ವರ್ಷ ತುಂಬಿದರು. ಆತ್ಮವಿಶ್ವಾಸದಿಂದ ಮತ ಚಲಾಯಿಸಿದ ಹೊಂಬಾಳಮ್ಮ ಅವರಿಗೆ ತಾಲೂಕು ಪಂಚಾಯಿತಿ ವತಿಯಿಂದ ಗೌರವಾದರಗಳಿಂದ ಸನ್ಮಾನಿಸಲಾಯಿತು.

ಇದೇ ವೇಳೆ ಹೊಂಬಾಳಮ್ಮ ಅವರ ಅನಿಸಿಕೆ ಅಭಿಪ್ರಾಯಗಳನ್ನು ಪಡೆದುಕೊಳ್ಳಲಾಯಿತು. ಶ್ರೀರಂಗಪಟ್ಟಣ ವ್ಯಾಪ್ತಿಯ ಸೆಕ್ಟರ್ ಅಧಿಕಾರಿಗಳು ಹಾಗೂ ಬಿಎಲ್‌ಓ ರವರು ಹೊಂಬಾಳಮ್ಮರವರ ಮನೆಗೆ ಭೇಟಿ ನೀಡಿ ಮತದಾನ ಪಡೆದುಕೊಂಡರು.

ಈ ಸಂದರ್ಭದಲ್ಲಿ ತಾಲೂಕು ಪಂಚಾಯಿತಿಯ IEC ಸಂಯೋಜಕರು, ಪ್ರಥಮ ದರ್ಜೆ ಸಹಾಯಕರು, NRLM ಸಂಯೋಜಕರು, ಗ್ರಾಮ ಪಂಚಾಯಿತಿಯ ಸಿಬ್ಬಂದಿ, ಸೆಕ್ಟರ್ ಅಧಿಕಾರಿಗಳು ಸೇರಿದಂತೆ ಇತರರು ಇದ್ದರು

ಇಂದು ಯುವ ಮತದಾರರ ವಿಶೇಷ ಜಾಗೃತಿ

ಮಂಡ್ಯ, ಏ.17– ಜಿಲ್ಲಾಡಳಿತ ಜಿಲ್ಲಾ ಸ್ವೀಪ್ ಸಮಿತಿ ಹಾಗೂ ಶ್ರೀರಂಗಪಟ್ಟಣ ತಾಪಂ ವತಿಯಿಂದ ಶ್ರೀರಂಗಪಟ್ಟಣ ತಾಲೂಕು, ನಗುವನಹಳ್ಳಿ ಗ್ರಾಪಂ ವ್ಯಾಪ್ತಿಯ ಬೆಳವಾಡಿ ಗ್ರಾಮದಲ್ಲಿರುವ ಮಹಾರಾಜ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ "ಯುವ ಮತದಾರರ ವಿಶೇಷ ಜಾಗೃತಿ" ಕಾರ್ಯಕ್ರಮವನ್ನು ಏ.18 ರಂದು ಬೆಳಗ್ಗೆ 10.30 ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ಚಿನಕುರಳಿ ಹೋಬಳಿಯಲ್ಲಿ ಕುಮಾರಸ್ವಾಮಿ ಪರ ಮತಯಾಚನೆ

ಪಾಂಡವಪುರ, ಏ.17– ಮಂಡ್ಯ ಲೋಕಸಭಾ ಕ್ಷೇತ್ರದ ಎನ್‌ಡಿಎ ಮೈತ್ರಿ ಅಭ್ಯರ್ಥಿ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಪರವಾಗಿ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಅವರು ಚಿನಕುರಳಿ ಹೋಬಳಿ ವ್ಯಾಪ್ತಿಯ ಹಲವು ಹಳ್ಳಿಗಳಿಲ್ಲಿ ಬಿರುಸಿನ ಪ್ರಚಾರ ನಡೆಸಿದರು.



ಹೆಚ್.ಡಿ.ಕುಮಾರಸ್ವಾಮಿರವರ ಪರವಾಗಿ ಜಿಪಂ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಅಶೋಕ್ ಪ್ರಮುಖ ಬೀದಿಗಳಲ್ಲಿ ಮತಯಾಚನೆ ನಡೆಸಿದರು.

ತಾಲೂಕಿನ ಬನ್ನಂಗಾಡಿ ಗ್ರಾಮದಿಂದ ಆರಂಭಗೊಂಡ ಮತಯಾಚನೆ ತಾಲೂಕಿನ ಗಿರಿಯಾರಗಳ್ಳಿ, ಕೆಂಪೂಗೌಡನಕೊಪ್ಪಲು, ಅಂತನಹಳ್ಳಿ, ಬಿಂಡಹಳ್ಳಿ, ಯರಗನಹಳ್ಳಿ, ಮಲ್ಲಿಗೆರೆ, ಹೊಸ ಸಾಯಪನಹಳ್ಳಿ, ಹಳೇ ಸಾಯಪನಹಳ್ಳಿ, ಡಿಂಕಾ, ಡಿಂಕಾಶೆಟ್ಟಹಳ್ಳಿ ವಳಲೇಕಟ್ಟೆ ಕೊಪ್ಪಲು, ರಾಗಿಮುದ್ದನಹಳ್ಳಿ, ಹುಣಸೇ ಕಟ್ಟೆಕೊಪ್ಪಲು, ಬಸವನಗುಡಿಕೊಪ್ಪಲು, ಹೊನ್ನೇಹಳ್ಳಿ, ಗುಮ್ಮನಹಳ್ಳಿ, ಕುಂಬಾರ ಕೊಪ್ಪಲು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಮುಖಂಡರು, ಕಾರ್ಯಕರ್ತರ ಸಭೆ ನಡೆಸಿ ಮತಯಾಚನೆ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ಎಂ.ಸಿ. ಯಶ್ವಂತ್‌ಕುಮಾರ್, ತಾಪಂ ಮಾಜಿ ಅಧ್ಯಕ್ಷೆ ಪೂರ್ಣಿಮಾ ವೆಂಕಟೇಶ್, ತಾಪಂ ಮಾಜಿ ಸದಸ್ಯ ಸಿ.ಎಸ್.ಗೋಪಾಲಗೌಡ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಯಶ್ವಂತ್ ಕುಮಾರ್, ಗ್ರಾಪಂ ಅಧ್ಯಕ್ಷ ಪ್ರಭಾಕರ್, ಹುಚ್ಚೇಗೌಡ, ಸಿ.ಕೆ.ಅಂಕೇಗೌಡ, ಬಿ.ಪಿ.ಶ್ರೀನಿವಾಸ್, ಮಲ್ಲಿಗೆರೆ ರವಿಕರ, ಗಂಗಾಧರ್, ರಾಜೇಶ್, ಕರೀಗೌಡ, ಬಿ.ಎಸ್.ಶ್ರೀನಿವಾಸ್, ವಾಸು, ನಿವೃತ್ತ ಶಿಕ್ಷಕ ನಾಗರಾಜು, ಚಂದ್ರು ಸೇರಿದಂತೆ ಹಲವರು ಹಾಜರಿದ್ದರು.

ಮಲ್ಲನಕುಪ್ಪೆ ಚೆಕ್‌ಪೋಸ್ಟ್ ಪರಿಶೀಲನೆ

ಮಂಡ್ಯ, ಏ.17– ಚೆಕ್‌ಪೋಸ್ಟ್‌ನಲ್ಲಿ ಚಲಿಸುವ ಎಲ್ಲಾ ವಾಹನಗಳ ಪರಿಶೀಲನೆ ನಡೆಸಬೇಕು. ತಾವು ಮಾಡುವ ಕೆಲಸಗಳನ್ನು ಜಿಲ್ಲಾ ದೂರು ನಿರ್ವಹಣಾ ಕೋಶದಿಂದ ವೀಕ್ಷಿಸಲಾಗುತ್ತಿದೆ. ಇದರ ಜೊತೆಗೆ ಸಹಾಯಕ ಚುನಾವಣಾಧಿಕಾರಿಗಳು ಹಾಗೂ ವೀಕ್ಷಕರು ಸಹ ತಮ್ಮ ಕೆಲಸಗಳ ಬಗ್ಗೆ ನಿಗಾ ವಹಿಸುತ್ತಾರೆ. ಜವಾಬ್ದಾರಿಯಿಂದ ಕಾರ್ಯನಿರ್ವಹಿಸಿ ಲೋಪ ಕಂಡುಬಂದರೆ ನೋಟೀಸ್ ಜಾರಿ ಮಾಡಿ ಆರ್.ಪಿಆಕ್ಟ್ ಅಡಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಶೇಖ್ ತನ್ವೀರ್ ಆಸಿಫ್, ಸಹಾಯಕ ಚುನಾವಣಾಧಿಕಾರಿ ಲೋಕನಾಥ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



ಇಂದು ಸ್ಟಾರ್ ಚಂದ್ರು ಪರ ನಟ ದರ್ಶನ್ ಪ್ರಚಾರ

ಮಂಡ್ಯ, ಏ.17– ಮಂಡ್ಯ ಲೋಕಸಭಾ ಕ್ಷೇತ್ರದ ಚುನಾವಣಾ ಪ್ರಚಾರ ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಗುರುವಾರ (ಏ.18) ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಪರ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಪ್ರಚಾರ ನಡೆಸಲಿದ್ದಾರೆ.



ಮಳವಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹಲಗೂರಿನಿಂದ ಹಿಡಿದು ಮಳವಳ್ಳಿ ಟೌನ್ ಸೇರಿದಂತೆ ಗ್ರಾಮಾಂತರ ಪ್ರದೇಶದ ಐದಾರು ಪಾಯಿಂಟ್‌ಗಳಲ್ಲಿ ಚಂದ್ರು ಪರ ದರ್ಶನ್ ಪ್ರಚಾರ ನಡೆಸಲಿದ್ದಾರೆ. ಸಂಸದೆ ಸುಮಲತಾ ಅಂಬರೀಷ್ ಅವರ ಪರಮಾಪ್ತರಾಗಿರುವ ದರ್ಶನ್, ಚಂದ್ರು ಪರ ಪ್ರಚಾರ ಮಾಡಲು ಬರುತ್ತಿದ್ದರೆ ಅತ್ತ ಸುಮಲತಾ ಎನ್‌ಡಿಎ ಅಭ್ಯರ್ಥಿ ಹೆಚ್.ಡಿ. ಕುಮಾರಸ್ವಾಮಿಗೆ ಬೆಂಬಲ ಕೊಟ್ಟಿದ್ದು, ಚುನಾವಣಾ ಕಣ ತೀವ್ರ ರಂಗೇರಿದೆ.

ಒಂದನೇ ಪುಟದಿಂದ

ರೈತರ ಸಾಲ ಮನ್ನಾ; ಗೃಹಲಕ್ಷ್ಮಿಗೆ ವರ್ಷಕ್ಕೆ 1.24 ಲಕ್ಷ ಗ್ಯಾರಂಟಿ



ರಾಜ್ಯಗಳಲ್ಲಿ ಯಾವ ಗ್ಯಾರಂಟಿ ಯೋಜನೆಗಳು ಅನುಷ್ಠಾನವಾಗಿಲ್ಲ. ಬದಲಾಗಿ ರೈತರು, ಬಡವರು ಸಂಕಷ್ಟ ಅನುಭವಿಸುವ ಪರಿಸ್ಥಿತಿ ಆ ರಾಜ್ಯಗಳಲ್ಲಿ ನಿರ್ಮಾಣವಾಗಿದೆ ಎಂದು ಆರೋಪಿಸಿದರು.

ದೇಶದಲ್ಲಿ 4000 ಕಿಲೋಮೀಟರ್ ನಡೆಯುವ ಮೂಲಕ ಯಶಸ್ವಿಯಾಗಿ ಭಾರತ್ ಜೋಡೋ ಯಾತ್ರೆ ನಡೆಸಿದ ನಾನು ಯಾತ್ರೆಯ ಉದ್ದಕ್ಕೂ ದೇಶದ ಜನರು ಅನುಭವಿಸುತ್ತಿರುವ ಕಷ್ಟಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದೇನೆ. ಅವರ ಅಹವಾಲು ಆಲಿಸಿದ್ದೇನೆ. ರೈತರ ಬೆಳೆಗಳಿಗೆ ನ್ಯಾಯಯುತ ಬೆಲೆ ಕೊಡಿಸಿಕೊಡಿ ಎಂದು ಲಕ್ಷಾಂತರ ಜನರು ನನ್ನ ಬಳಿ ಪಾದಯಾತ್ರೆ ವೇಳೆ ಮನವಿ ಮಾಡಿದ್ದಾರೆ. ಉದ್ಯಮಿಗಳ 16 ಲಕ್ಷ ಕೋಟಿ ರೂ. ಸಾಲಮನ್ನಾ ಮಾಡುವ ಮೋದಿ ಸರ್ಕಾರ ಬಡವರ ಸಾಲಮನ್ನಾ ಮಾಡುತ್ತಿಲ್ಲ. ಕೇಂದ್ರ ಸರ್ಕಾರದ ಯಾವುದೇ ಯೋಜನೆಗಳು ನಮ್ಮ ಬಳಿಗೆ ಬರುತ್ತಿಲ್ಲ ಎಂಬುದೂ ಸೇರಿದಂತೆ ನೂರಾರು ಸಮಸ್ಯೆಗಳನ್ನು ನನ್ನ ಬಳಿ ದೇಶದ ಜನರು ಮುಕ್ತವಾಗಿ ಚರ್ಚಿಸಿದ್ದಾರೆ. ಈ ಎಲ್ಲಾ ಸಮಸ್ಯೆಗಳು ಬಗೆಹರಿಯಬೇಕೆಂದರೆ ಕೇಂದ್ರದಲ್ಲಿ ಇಂಡಿಯಾ ಒಕ್ಕೂಟದ ಸರ್ಕಾರ ಅಧಿಕಾರಕ್ಕೆ ಬರಬೇಕೆಂದು ಮನವಿ ಮಾಡಿದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರ ಹಿಡಿದರೆ ದೇಶದ ಪ್ರತಿ ಕುಟುಂಬದ ಯಜಮಾನಿಗೆ ವರ್ಷಕ್ಕೆ ಒಂದು ಲಕ್ಷ ರೂ. ಹಣವನ್ನು ಬ್ಯಾಂಕಿಗೆ ಜಮೆ ಮಾಡುವುದಾಗಿ ಈಗಾಗಲೇ ಹೇಳಲಾಗಿದೆ. ವರ್ಷಕ್ಕೆ ಒಂದು ಲಕ್ಷವೆಂದರೆ ತಿಂಗಳಿಗೆ ಎಂಟೂವರೆ ಸಾವಿರ ರೂ. ಮಹಿಳೆಯರ ಅಕೌಂಟಿಗೆ ಸೇರಲಿದ್ದು, ರಾಜ್ಯ ಸರ್ಕಾರ ನೀಡುತ್ತಿರುವ ಗೃಹಲಕ್ಷ್ಮಿ ಯೋಜನೆಯ ಎರಡು ಸಾವಿರ ರೂ. ಸೇರಿದರೆ ಒಟ್ಟು 10,500 ರೂ. ಹಣ ಪ್ರತಿ ತಿಂಗಳು ರಾಜ್ಯದ ಪ್ರತಿ ಕುಟುಂಬದ ಯಜಮಾನಿಗೆ ತಲುಪಲಿದೆ. ಇದರಿಂದ ಬಡವರ ಕಷ್ಟಗಳು ನಿವಾರಣೆಯಾಗಲಿದೆ ಎಂದು ತಿಳಿಸಿದರು.

ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ. ಇದರಿಂದ ಪದವೀಧರರು, ಬಡವರು ಉದ್ಯೋಗವಿಲ್ಲದೇ ಸಂಕಷ್ಟದ ಜೀವನ ನಡೆಸುತ್ತಿದ್ದಾರೆ. ಇತ್ತ ಕೂಲಿಕಾರ್ಮಿಕರಿಗೆ ದುಡಿಮೆಗೆ ತಕ್ಕ ಕೂಲಿ ಸಿಗುತ್ತಿಲ್ಲ. ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಉದ್ಯೋಗ ಸೃಷ್ಟಿಯ ಜೊತೆಗೆ ನರೇಗಾ ಯೋಜನೆಯನ್ನು ಗ್ರಾಮೀಣ ಪ್ರದೇಶದಿಂದ ನಗರ ವ್ಯಾಪ್ತಿಗೆ ವಿಸ್ತರಿಸುವ ಜೊತೆಗೆ ಆಶಾ–ಅಂಗನವಾಡಿ ಕಾರ್ಯಕರ್ತೆಯರಿಗೆ ಸಂಭಾವನೆ ಹೆಚ್ಚಿಸುತ್ತೇವೆ ಎಂದು ಭರವಸೆ ನೀಡಿದರು.

ಇಡೀ ವಿಶ್ವದಲ್ಲೇ ಚುನಾವಣಾ ಬಾಂಡ್ ಹಗರಣ ಅತಿದೊಡ್ಡ ಹಗರಣವಾಗಿದೆ. ಬಾಂಡ್ ಹಗರಣವನ್ನು ನಿಗೂಢವಾಗಿಟ್ಟಿದ್ದ ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಛೀಮಾರಿ ಹಾಕಿದೆ. ಬಾಂಡ್ ಹಗರಣದ ಬಗ್ಗೆ ಮಾತನಾಡುವಾಗ ಪ್ರಧಾನಿ ನರೇಂದ್ರ ಮೋದಿ ಕೈ ನಡುಗುತ್ತಿತ್ತು. ಅಲ್ಲಿಗೆ ಅತಿದೊಡ್ಡ ಭ್ರಷ್ಟಾಚಾರ ನಡೆದಿರುವುದು ಸಾಬೀತಾಗಿದೆ. ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆಂದು ಬೊಬ್ಬೆ ಹೊಡೆಯುವ ಮೋದಿ ಸರ್ಕಾರ, ಸಿಬಿಐ, ಐಟಿ, ಇಡಿ ಮೂಲಕ ಉದ್ಯಮಿಗಳು, ಶ್ರೀಮಂತರನ್ನು ಹೆದರಿಸಿ ಕೋಟ್ಯಂತರ ರೂ. ಹಣವನ್ನು ಚುನಾವಣಾ ಬಾಂಡ್ ರೂಪದಲ್ಲಿ ಪಡೆದಿದೆ. ಗೂಂಡಾಗಳ ರೀತಿ ಹೆದರಿಸಿ, ಬೆದರಿಸಿ ಹಣ ವಸೂಲಿ ಮಾಡಿರುವ ಈ ಸರ್ಕಾರವನ್ನು ತೆಗೆಯಬೇಕೆಂದು ಮನವಿ ಮಾಡಿದರು.

ರಾಜ್ಯದಲ್ಲಿ ಬಲಿಷ್ಠವಾಗಿರುವ ಕಾಂಗ್ರೆಸ್ ಅನ್ನು ಎದುರಿಸಲಾಗದೇ ಅಸ್ತಿತ್ವ ಕಳೆದುಕೊಳ್ಳುವ ಹಂತಕ್ಕೆ ಬಂದಿರುವ ಎ ಮತ್ತು ಬಿ ಟೀಂ ಪಕ್ಷಗಳು ಇದೀಗ ಒಂದಾಗಿ ಎ ಪ್ಲಸ್ ಬಿ ಟೀಂ ಆಗಿವೆ. ಅಧಿಕಾರಕ್ಕಾಗಿ ಹಾತೊರೆಯುತ್ತಿರುವ ಈ ಎರಡೂ ಪಕ್ಷಗಳನ್ನು ಜನ ಕಿತ್ತೊಗೆದು ಅಭಿವೃದ್ಧಿಗಾಗಿ ಶ್ರಮಿಸುತ್ತಿರುವ ಕಾಂಗ್ರೆಸ್‌ಗೆ ಮತ ಕೊಡಿ ಎಂದು ಕೇಳಿಕೊಂಡರು.

ಇದಕ್ಕೂ ಮುನ್ನ ಮಂಡ್ಯ ವಿಧಾನಸಭಾ ಕ್ಷೇತ್ರದಿಂದ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದ ಎಂ.ಶ್ರೀನಿವಾಸ್ ರಾಹುಲ್‌ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಸೇರ್ಪಡೆಯಾದರು. ವೇದಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು), ಸಚಿವರಾದ ಎನ್.ಚಲುವರಾಯಸ್ವಾಮಿ, ಡಾ. ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಗಣಿಗ ರವಿಕುಮಾರ್, ದರ್ಶನ್ ಪುಟ್ಟಣ್ಣಯ್ಯ, ಕೆ.ಎಂ.ಉದಯ್‌ಗೌಡ, ರವಿಶಂಕರ್, ರಮೇಶ್‌ಬಾಬು ಬಂಡಿಸಿದ್ದೇಗೌಡ, ದಿನೇಶ್ ಗೂಳಿಗೌಡ, ರೋಜಿಜಾನ್, ಕೆಪಿಸಿಸಿ ಕಾರ್ಯಾಧ್ಯಕ್ಷ ತನ್ವೀರ್ ಸೇಠ್, ರಾಜ್ಯಸಭಾ ಸದಸ್ಯ ಜಿ.ಸಿ.ಚಂದ್ರಶೇಖರ್, ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ವಿನಯ್‌ಕುಮಾರ್ ಸೊರಕೆ, ಮಾಜಿ ಶಾಸಕರಾದ ಎಂ.ಎಸ್.ಆತ್ಮಾನಂದ, ಎಂ.ಶ್ರೀನಿವಾಸ್, ಎಚ್.ಎಂ. ರೇವಣ್ಣ, ಮಾಜಿ ರಾಜ್ಯಸಭಾ ಸದಸ್ಯ ಎಲ್.ಹನುಮಂತಯ್ಯ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಕಾರ್ಯಾಧ್ಯಕ್ಷ ಎಂ.ಎಸ್.ಚಿದಂಬರ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.



ಕುಮಾರಸ್ವಾಮಿ ಸೋಲಿಸಿ ಮನೆಗೆ ಕಳಿಸಿ: ಸಿದ್ದರಾಮಯ್ಯ

ಮಂಡ್ಯ, ಏ.17(ಮೋಹನ್‌ರಾಜ್)– ರಾಜ್ಯದಲ್ಲಿ ಬಿಜೆಪಿಯ 25 ಹಾಗೂ ಬೆಂಬಲಿತ ಇಬ್ಬರು ಸಂಸದರಿದ್ದರೂ ಕಾವೇರಿ, ಮಹದಾಯಿ ಸೇರಿ ರಾಜ್ಯದ ಒಂದೇ ಒಂದು ಸಮಸ್ಯೆಗೆ ಕಳೆದ ಐದು ವರ್ಷದಲ್ಲಿ ಸಂಸತ್‌ನಲ್ಲಿ ಧ್ವನಿ ಎತ್ತಿಲ್ಲ ಎಂದು ಆರೋಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಎನ್‌ಡಿಎ ಅಭ್ಯರ್ಥಿಗಳನ್ನು ಸೋಲಿಸಿ, ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಿ ಎಂದು ಮನವಿ ಮಾಡಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಕಳೆದ ಚುನಾವಣೆಯಲ್ಲಿ ಬಿಜೆಪಿಯಿಂದ 25 ಜನ ಸಂಸದರು ಆಯ್ಕೆಯಾಗಿದ್ದರೆ, ಹಾಸನದ ಪ್ರಜ್ವಲ್ ರೇವಣ್ಣ, ಮಂಡ್ಯದ ಸುಮಲತಾ ಸಹ ಬಿಜೆಪಿ ಬೆಂಬಲಕ್ಕೆ ನಿಂತಿದ್ದರು. 28 ಸಂಸದರ ಪೈಕಿ 27 ಸಂಸದರು ಅಧಿವೇಶನದಲ್ಲಿ ರಾಜ್ಯದಜನತೆಯ ಸಮಸ್ಯೆಗಳ ಬಗ್ಗೆ ಮಾತನಾಡಿದ್ದಾರೆಯೇ? ಎಂದು ಪ್ರಶ್ನಿಸಿದರು.

ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು ನೂರಕ್ಕೆ ನೂರರಷ್ಟು ಗೆಲ್ಲುತ್ತಾರೆ. ಹೆಚ್.ಡಿ.ಕುಮಾರಸ್ವಾಮಿ ಕಳೆದ ಬಾರಿ ತಮ್ಮ ಪುತ್ರ ನಿಖಿಲ್‌ನನ್ನು ಅಭ್ಯರ್ಥಿ ಮಾಡಿದ್ದರು. ಆದರೆ ಅವರು ಗೆಲ್ಲಲಿಲ್ಲ. ಇದೀಗ ಕುಮಾರಸ್ವಾಮಿ ಚನ್ನಪಟ್ಟಣ ಕ್ಷೇತ್ರದ ಶಾಸಕರಾಗಿದ್ದರೂ, ಆ ಕ್ಷೇತ್ರ ವ್ಯಾಪ್ತಿಯ ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸದೇ ಸೋಲಿನ ಭಯದಿಂದ ಮಂಡ್ಯಗೆ ಬಂದಿದ್ದಾರೆ. ಅಧಿಕಾರದ ವ್ಯಾಮೋಹಕ್ಕೆ ಇಲ್ಲಿಗೆ ಬಂದಿರುವ ಕುಮಾರಸ್ವಾಮಿ ಅವರನ್ನು ಸೋಲಿಸಿ ಮನೆಗೆ ಕಳುಹಿಸಿ ಎಂದು ಕರೆ ನೀಡಿದರು.

ಪ್ರಸ್ತುತ ಚುನಾವಣೆ ಸತ್ಯ ಹಾಗೂ ಸುಳ್ಳಿನ ನಡುವೆ ಸಂಘರ್ಷ ನಡೆಯುತ್ತಿದೆ. 2014ರಲ್ಲಿ ಪ್ರಧಾನಿ ಮೋದಿ ಕೊಟ್ಟ ಭರವಸೆಯನ್ನು ಈವರೆಗೂ ಈಡೇರಿಸಿಲ್ಲ. ರೈತರ ಆದಾಯ ದುಪ್ಪಟ್ಟು ಮಾಡುವ ಭರವಸೆಯೂ ಹುಸಿಯಾಗಿದೆ. ಸ್ವಾಮಿನಾಥನ್ ವರದಿ ಜಾರಿಯಾಗಿಲ್ಲ. ರೈತರ ಸಾಲಮನ್ನಾ ಆಗಿಲ್ಲ. ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೇರಿದೆ. ಬಡವರು ಜೀವನ ನಡೆಸಲು ಆಗುತ್ತಿಲ್ಲ. ಆದರೆ ರಾಜ್ಯದಲ್ಲಿ ನಾವು ಭರವಸೆ ಕೊಟ್ಟಂತೆ ಐದು ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ಜನರ ಮನೆ ಬಾಗಿಲಿಗೆ ತಲುಪಿಸುತ್ತಿದ್ದೇವೆ. ಮೋದಿ ಸರ್ಕಾರ ಅಭಿವೃದ್ಧಿಯನ್ನು ಬಿಟ್ಟು ಜನರ ನಡುವೆ ಜಾತಿ– ಧರ್ಮದ ಸಂಘರ್ಷವನ್ನು ಸೃಷ್ಟಿ ಮಾಡಿ ಸಮಾಜದಲ್ಲಿ ಅಶಾಂತಿ ಸೃಷ್ಟಿಸಿದ್ದಾರೆ ಎಂದು ಕಿಡಿಕಾರಿದರು.

ಇದೇ ವೇಳೆ ಶ್ರೀರಾಮನನ್ನು ಜಪಿಸಿದ ಸಿದ್ದರಾಮಯ್ಯ, ನಾಡಿನ ಸಮಸ್ತ ಜನತೆಗೆ ಶ್ರೀರಾಮನವಮಿಯ ಶುಭಾಶಯವನ್ನು ಅರ್ಪಿಸಿದರು.

ರಾಹುಲ್ ಕಾಲಿಟ್ಟಲ್ಲೆಲ್ಲಾ ಕಾಂಗ್ರೆಸ್ ಗೆಲ್ತದೆ: ಡಿಕೆಶಿ

ಮಂಡ್ಯ: ಡಬ್ಬಲ್ ಇಂಜಿನ್ ಸರ್ಕಾರ ಅಸ್ತಿತ್ವದಲ್ಲಿದ್ದರೂ ಹಳೇ ಮೈಸೂರು ಭಾಗದ ಮಹತ್ವದ ಮೇಕೆದಾಟು ಯೋಜನೆಯನ್ನು ಆರಂಭ ಮಾಡಲಿಲ್ಲ. ಆದರೆ ಸಿದ್ದರಾಮಯ್ಯ ಹಾಗೂ ನನ್ನ ನೇತೃತ್ವದ ಕಾಂಗ್ರೆಸ್ ಸರ್ಕಾರ ಮೇಕೆದಾಟು ಯೋಜನೆಗೆ ಶೀಘ್ರದಲ್ಲೇ ಚಾಲನೆ ನೀಡಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭರವಸೆ ನೀಡಿದರು. ಬುಧವಾರ ನಗರದ ಮಂಡ್ಯ ವಿಶ್ವವಿದ್ಯಾನಿಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಪರ ಚುನಾವಣಾ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ಜನರು ಕಾವೇರಿ ನೀರು ಸಿಗದೇ ಬವಣೆಪಡುತ್ತಿದ್ದಾರೆ. ಇದಕ್ಕೆ ಶಾಶ್ವತ ಯೋಜನೆಯೆಂದರೆ ಮೇಕೆದಾಟು ಬಳಿ ಡ್ಯಾಂ ನಿರ್ಮಾಣವಾಗುವುದು ಈ ಯೋಜನೆ ಶೀಘ್ರದಲ್ಲೇ ಕಾರ್ಯಗತವಾಗಲಿದೆ ಎಂದರು.

ಈ ಭಾಗದಲ್ಲಿ ರಾಹುಲ್‌ಗಾಂಧಿ ಯಶಸ್ವಿಯಾಗಿ ಭಾರತ್ ಜೋಡೋ ಯಾತ್ರೆ ನಡೆಸಿದ್ದರು. ರಾಜ್ಯದ ಗಡಿಭಾಗ ಗುಂಡ್ಲುಪೇಟೆಯಿಂದ ಆರಂಭವಾದ ಪಾದಯಾತ್ರೆ, ಬಳ್ಳಾರಿ ಮೂಲಕ ತೆಲಂಗಾಣಕ್ಕೆ ಸಾಗಿತು. ರಾಹುಲ್ ಕಾಲಿಟ್ಟ ಕಡೆಯಲ್ಲೆಲ್ಲಾ ಕಾಂಗ್ರೆಸ್ ಗೆದ್ದು ಬೀಗಿದೆ. ರಾಜ್ಯದಲ್ಲಿ ಕಾಂಗ್ರೆಸ್ ಗೆಲುವಿಗೆ ರಾಹುಲ್‌ಗಾಂಧಿ ಕಾಲ್ಗುಣ ಕಾರಣವಾಗಿದೆ ಎಂದು ಹೇಳಿದರು. ಮಂಡ್ಯ ಜಿಲ್ಲೆಗೆ ಬಿಜೆಪಿ ಮತ್ತು ಜೆಡಿಎಸ್ ಕೊಡುಗೆ ಶೂನ್ಯ ಎಂದ ಅವರು, ಕಾಂಗ್ರೆಸ್ ಪಕ್ಷ ಕುಮಾರಸ್ವಾಮಿ ಅವರ ತಂದೆಯನ್ನು ಪ್ರಧಾನಿ ಮಾಡಿತ್ತು. ಆದರೆ ಇಂದು ಅವರ ಕುಟುಂಬ ಕಾಂಗ್ರೆಸ್ ಪಕ್ಷದ ಬಗ್ಗೆ ಹಗುರವಾಗಿ ಮಾತನಾಡುತ್ತಿದೆ. ಹಿಂದಿನ ಚುನಾವಣೆ ಸಮಯದಲ್ಲಿ ರಾಹುಲ್‌ಗಾಂಧಿ ಬಾಯಲ್ಲಿ ಸಿದ್ದರಾಮಯ್ಯ ಜೆಡಿಎಸ್ ಅನ್ನು ಬಿಜೆಪಿಯ ಬಿ ಟೀಂ ಎಂದಿದ್ದರು. ಆದರೆ ಇಂದು ಬಿ ಟೀಂ ಎ ಟೀಂ ಜೊತೆಗೆ ಮೈತ್ರಿಯಾಗಿದೆ. ಸಿದ್ದರಾಮಯ್ಯ ಅವರ ಅಂದಿನ ಭಾಷಣದ ಮರ್ಮ ನನಗೆ ಈಗ ಅರ್ಥವಾಗುತ್ತಿದೆ ಎಂದರು. ಜನರು ಬದುಕಿಗಾಗಿ ಐದು ಗ್ಯಾರಂಟಿ ಯೋಜನೆಗಳನ್ನು ಕೊಡಲಾಗಿದೆ. ಇದರಿಂದ ಜನರಿಗೆ ವರದಾನವಾಗುತ್ತಿದ್ದು, ಸ್ಥಳೀಯ ಉದ್ಯಮಿ, ರೈತನ ಮಗ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಅವರನ್ನು ಸಂಸದರನ್ನಾಗಿ ಮಾಡಿದರೆ ಜಿಲ್ಲೆ ಮತ್ತಷ್ಟು ಅಭಿವೃದ್ಧಿಯಾಗಲಿದೆ ಎಂದು ಹೇಳಿದರು.

ಇಂದಿನಿಂದ ಸಿಇಟಿ

ಯಾವುದೇ ಅಕ್ರಮಕ್ಕೆ ಅವಕಾಶವಾಗದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗಿದ್ದು, ಆಯಾ ಜಿಲ್ಲಾ ವ್ಯಾಪ್ತಿಯಲ್ಲಿ ಜಿಲ್ಲಾಧಿಕಾರಿಗಳು ಮತ್ತು ಪೊಲೀಸ್ ವರಿಷ್ಠಾಧಿಕಾರಿಗಳು ಬಿಗಿಭದ್ರತೆಯ ಉಸ್ತುವಾರಿ ನೋಡಿಕೊಳ್ಳಲಿದ್ದಾರೆ. ಕಲಬುರಗಿ ಮುಂತಾದ ಉತ್ತರ ಕರ್ನಾಟಕದ ಭಾಗಗಳ ಕೆಲವು ವಿದ್ಯಾರ್ಥಿಗಳಿಗೆ ಪರೀಕ್ಷಾ ಕೇಂದ್ರದ ಗೊಂದಲ ಬಗೆಹರಿಸಿದ್ದು, ಸಾಧ್ಯವಾದಷ್ಟೂ ವಿದ್ಯಾರ್ಥಿಗಳಿಗೆ ಅವರ ಸಮೀಪದ ಕೇಂದ್ರಗಳಲ್ಲೇ ಪರೀಕ್ಷೆ ಬರೆಯಲು ವ್ಯವಸ್ಥೆ ಮಾಡಲಾಗಿದೆ.

ಬೇಸಿಗೆಯ ಝಳ ಇರುವುದರಿಂದ ಎಲ್ಲ ಪರೀಕ್ಷಾ ಕೇಂದ್ರಗಳಲ್ಲೂ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ, ಆಶಾ ಕಾರ್ಯಕರ್ತೆಯರು,

ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಕೆಡೆಟ್‌ಗಳು ಪರೀಕ್ಷೆ ಸುಗಮವಾಗಿ ನಡೆಯಲು ಸಹಕರಿಸಲಿದ್ದಾರೆ, ಸಿಇಟಿ ಕರ್ತವ್ಯಕ್ಕೆ ಒಟ್ಟಾರೆ 20,300 ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಕಳೆದ ವರ್ಷಕ್ಕಿಂತ ಈ ಬಾರಿ ಒಂದು ಲಕ್ಷದಷ್ಟು ಹೆಚ್ಚು ಅಭ್ಯರ್ಥಿಗಳು ಅಂದರೆ ಒಟ್ಟು 3,49,637 ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಬರೆಯುತ್ತಿದ್ದು, ವ್ಯಾಪಕ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ತಿಳಿಸಿದ್ದಾರೆ.

ಎಂಜಿನಿಯರಿಂಗ್, ಕೃಷಿ ವಿಜ್ಞಾನ, ವೆಟರಿನರಿ ಸೇರಿದಂತೆ ಹಲವು ವೃತ್ತಿಪರ ಕೋರ್ಸ್‌ಗಳಿಗೆ ಸೇರಬಯಸುವ ವಿದ್ಯಾರ್ಥಿಗಳು ಸಿಇಟಿ ಪರೀಕ್ಷೆ ಬರೆಯಲು ನೋಂದಣಿ ಮಾಡಿಕೊಂಡಿದ್ದಾರೆ.

ನಾಳೆ ಬೆಳಗ್ಗೆ 10.30ರಿಂದ 11.50 ರವರೆಗೆ ಜೀವಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50ರವರೆಗೆ ಗಣಿತ ಪರೀಕ್ಷೆಗಳು ನಡೆಯಲಿವೆ. ಏಪ್ರಿಲ್ 19ರಂದು ಬೆಳಗ್ಗೆ 10.30ರಿಂದ 11.50 ರವರೆಗೆ ಭೌತಶಾಸ್ತ್ರ, ಮಧ್ಯಾಹ್ನ 2.30 ರಿಂದ 3.50ರವರೆಗೆ ರಸಾಯನಶಾಸ್ತ್ರ ಪರೀಕ್ಷೆಗಳು ನಡೆಯಲಿವೆ.

ಏಪ್ರಿಲ್ 20ರಂದು ಬೆಂಗಳೂರು, ಮಂಗಳೂರು ಹಾಗೂ ಬೆಳಗಾವಿಯಲ್ಲಿ ಹೊರನಾಡು ಹಾಗೂ ಗಡಿನಾಡಿನ 1,545 ಕನ್ನಡ ಅಭ್ಯರ್ಥಿಗಳು ಬೆಳಗ್ಗೆ 11.30ರಿಂದ 12.30ರವರೆಗೆ ಪರೀಕ್ಷೆ ಬರೆಯಲಿದ್ದಾರೆ. ಇಂಗ್ಲಿಷ್ ಮತ್ತು ಕನ್ನಡ ಎರಡರಲ್ಲೂ ಪ್ರಶ್ನೆಪತ್ರಿಕೆ ಇರಲಿದೆ, ಒಂದು ವೇಳೆ ಅಭ್ಯರ್ಥಿಗಳಿಗೆ ಏನಾದರೂ ಗೊಂದಲ ಉಂಟಾದಲ್ಲಿ ಇಂಗ್ಲಿಷ್ ಆವೃತ್ತಿಯನ್ನೇ ಅಂತಿಮವೆಂದು ಪರಿಗಣಿಸಬೇಕು, ಈ ವಿಚಾರದಲ್ಲಿ ಪರೀಕ್ಷಾ ಕೇಂದ್ರದಲ್ಲಿ ಯಾವುದೇ ಪ್ರಶ್ನೆಗಳಿಗೆ ಅವಕಾಶ ಇರುವುದಿಲ್ಲ.

ಒಂದು ಪರೀಕ್ಷಾ ಕೊಠಡಿಯಲ್ಲಿ 16 ಆವೃತ್ತಿಗಳ ಪ್ರಶ್ನೆ ಪತ್ರಿಕೆಗಳು ಇರಲಿದ್ದು, ನಕಲು ಮಾಡಲು ಅವಕಾಶ ಆಗದಂತೆ ಯೋಜನೆ ರೂಪಿಸಲಾಗಿದೆ, ಪರೀಕ್ಷಾ ಕೇಂದ್ರಗಳಲ್ಲಿ ಸಿಸಿಟಿವಿ ಕಣ್ಗಾವಲು ಕೂಡ ಇರಲಿದೆ. ಪ್ರವೇಶಪತ್ರ ಮತ್ತು ಗುರುತಿನ ಪತ್ರದೊಂದಿಗೆ ಬರುವುದು ಕಡ್ಡಾಯ, ನೀಲಿ ಅಥವಾ ಕಪ್ಪು ಬಣ್ಣದ ಪೆನ್ ಮಾತ್ರ ಬಳಸತಕ್ಕದ್ದು, ತುಂಬುದೋಳಿನ ಅಂಗಿ ಧರಿಸಿಕೊಂಡು ಬರುವಂತಿಲ್ಲ, ಮೊಬೈಲ್, ಬ್ಲೂಟೂತ್, ಟ್ಯಾಬ್ಲೆಟ್, ಕೈಗಡಿಯಾರ, ಕ್ಯಾಲುಕುಲೇಟರ್, ನೋಟ್ ಪ್ಯಾಡ್, ಐ–ಪ್ಯಾಡ್, ಇಯರ್ ಫೋನ್ ಇತ್ಯಾದಿಗಳನ್ನು ತರುವಂತಿಲ್ಲ.

ಮೈಸೂರಲ್ಲಿ 29 ಸೇರಿ ಜಿಲ್ಲೆಯಲ್ಲಿ 39 ಪರೀಕ್ಷಾ ಕೇಂದ್ರ; 17,200 ವಿದ್ಯಾರ್ಥಿಗಳು ನೋಂದಣಿ

ಮೈಸೂರು, ಏ. 17(ಆರ್‌ಕೆ)– ಇಂದಿನಿಂದ (ಏ.18) ವೃತ್ತಿ ಕೋರ್ಸ್ ಪ್ರವೇಶಕ್ಕಾಗಿ ನಡೆಯಲಿರುವ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ವ್ಯವಸ್ಥೆ ಮಾಡಲಾಗಿದೆ. ಮೈಸೂರು ನಗರದ 29 ಸೇರಿದಂತೆ ಜಿಲ್ಲೆಯಾದ್ಯಂತ ಒಟ್ಟು 39 ಕೇಂದ್ರಗಳನ್ನು ಸಿದ್ಧಪಡಿಸಿದ್ದು, ಜಿಲ್ಲೆಯಲ್ಲಿ 17,200 ವಿದ್ಯಾರ್ಥಿಗಳು ನೋಂದಾಯಿಸಿ ಕೊಂಡಿದ್ದಾರೆ.



ಗುರುವಾರದಿಂದ ನಡೆಯುವ ಸಿಇಟಿಗೆ ಮೈಸೂರಿನ ಮರಿಮಲ್ಲಪ್ಪ ಕಾಲೇಜು ಕೇಂದ್ರದಲ್ಲಿ ಸಿಬ್ಬಂದಿ ವಿದ್ಯಾರ್ಥಿಗಳ ನೋಂದಣಿ ಸಂಖ್ಯೆ ನಮೂದಿಸುತ್ತಿರುವುದನ್ನು ಕಾಣಬಹುದು.

ಮೈಸೂರು ಜಿಲ್ಲೆಯ ಎಲ್ಲಾ ಪರೀಕ್ಷಾ ಕೇಂದ್ರಗಳಲ್ಲಿ ಕುಡಿಯುವ ನೀರು, ಶೌಚಾಲಯ, ಮಾರ್ಗಸೂಚಿ ಫಲಕ ಸೇರಿದಂತೆ ಸರ್ವ ಮೂಲ ಸೌಕರ್ಯ ಕಲ್ಪಿಸಲಾಗಿದೆ ಎಂದು ಪದವಿಪೂರ್ವ ಮತ್ತು ವೃತ್ತಿ ಶಿಕ್ಷಣ ಇಲಾಖೆ ಮೈಸೂರು ಜಿಲ್ಲಾ ಉಪನಿರ್ದೇಶಕ ಮರಿಸ್ವಾಮಿ ತಿಳಿಸಿದ್ದಾರೆ. ಜಿಪಿಎಸ್ ವಾಹನಗಳಲ್ಲಿ ಜಿಲ್ಲಾ ಖಜಾನೆಯಿಂದ ಪ್ರಶ್ನೆಪತ್ರಿಕೆ, ಬುಕ್‌ಲೆಟ್‌ಗಳನ್ನು ಪರೀಕ್ಷಾ ಕೇಂದ್ರಗಳಿಗೆ ಪೊಲೀಸ್ ಬೆಂಗಾವಲಿನಲ್ಲಿ ತಲುಪಿಸಲು ವ್ಯವಸ್ಥೆ ಮಾಡಲಾಗಿದೆ. ಸಿಸಿಟಿವಿ ಕ್ಯಾಮರಾಗಳ ಕಣ್ಗಾವಲಿನಲ್ಲಿ ನಡೆಯುವ ಪರೀಕ್ಷೆಗೆ ಮೊಬೈಲ್ ಫೋನ್, ಎಲೆಕ್ಟ್ರಾನಿಕ್ ಉಪಕರಣಗಳನ್ನು ಕೊಂಡೊಯ್ಯದಂತೆ ಸರ್ವ ರೀತಿಯಲ್ಲಿ ಸಿಇಟಿಗೆ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ತಿಳಿಸಿದರು.

ಮೈಸೂರು ಮಿತ್ರ ಗುರುವಾರ 18 ಏಪ್ರಿಲ್ 2024

ಮೈಸೂರಿನಾದ್ಯಂತ ವೈಭವದ ರಾಮನವಮಿ ಆಚರಣೆ

ಎಲ್ಲೆಲ್ಲೂ ಮಜ್ಜಿಗೆ, ಪಾನಕ, ಕೋಸಂಬರಿ ಪ್ರಸಾದ ವಿತರಣೆ



ಯದುವೀರ್ ಅವರು ಶ್ರೀರಾಂಪೇಟೆಯಲ್ಲಿನ ಶ್ರೀರಾಮಮಂದಿರದಲ್ಲಿ ರಾಮನವಮಿ ಪೂಜೆಯಲ್ಲಿ ಪಾಲ್ಗೊಂಡರು. ಚಿತ್ರದಲ್ಲಿ ಮಾಜಿ ಶಾಸಕ ಎಲ್.ನಾಗೇಂದ್ರ, ಮಾಜಿ ಮೇಯರ್ ರವಿಕುಮಾರ್ ಇನ್ನಿತರರನ್ನು ಕಾಣಬಹುದು.

ಮೈಸೂರು, ಏ.17(ಜಿಎ)-ಮೈಸೂರು ನಗರ ಸೇರಿದಂತೆ ಬುಧವಾರ ಜಿಲ್ಲೆಯಾದ್ಯಂತ ಅತ್ಯಂತ ವೈಭವದಿಂದ ಶ್ರೀರಾಮನವಮಿಯನ್ನು ಆಚರಿಸಲಾಯಿತು.

ಬೆಳಗ್ಗೆಯಿಂದಲೇ ಶ್ರೀರಾಮ ಮಂದಿರಗಳಲ್ಲಿ ಮಾತ್ರವಲ್ಲದೇ ಇರ್ವಿನ್ ರಸ್ತೆಯಲ್ಲಿರುವ ಪಂಚಮುಖಿ ಆಂಜನೇಯಸ್ವಾಮಿ ದೇವಸ್ಥಾನ, ಅರಮನೆ ಮುಂಭಾಗದಲ್ಲಿರುವ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಶ್ರೀರಾಮಪೇಟೆಯ ಶ್ರೀರಾಮಾಭ್ಯುದಯ ಸಭಾ, ರಾಮಕೃಷ್ಣನಗರದ ಶ್ರೀ ಪ್ರಸನ್ನ ಗಣಪತಿ ಮತ್ತು ಶ್ರೀ ಶಿರಡಿ ಸಾಯಿ ಶಕ್ತಿ ಸನ್ನಿಧಿ, ಮರಟಿ ಕ್ಯಾತನಹಳ್ಳಿ, ಕೇರ್ಗಳಿ ಸೇರಿದಂತೆ ಹಲವು ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳ ಮೂಲಕ ಅಯೋಧ್ಯೆ ಶ್ರೀರಾಮನ ಸ್ಮರಣೆ ಮಾಡಲಾಯಿತು. ಇದಲ್ಲದೆ, ವಿವಿಧ ಸಂಘ-ಸಂಸ್ಥೆಗಳು ವಿವಿಧೆಡೆ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ ಮತ್ತು ಕೋಸಂಬರಿಯನ್ನು ಪ್ರಸಾದವಾಗಿ ವಿತರಿಸಲಾಯಿತು.

ಎಲ್ಲಾ ರಾಮಮಂದಿರಗಳಲ್ಲಿ ಶ್ರೀರಾಮ, ಸೀತೆ ಮತ್ತು ಲಕ್ಷ್ಮಣ ಮೂರ್ತಿಗಳಿಗೆ ವಿವಿಧ ಅಭಿಷೇಕ ಮಾಡಿ, ಬಗೆ ಬಗೆಯ ಹೂವಿನ ಅಲಂಕಾರ ಮಾಡಲಾಗಿತ್ತು. ದೇವಾಲಯಗಳಲ್ಲಿ ನಡೆಯುತ್ತಿದ್ದ ರಾಮಾಯಣ ಪಾರಾಯಣ, ನವಗ್ರಹ ಜಪ, ರಾಮ ತಾರಕ ಹೋಮ, ಸೀತಾರಾಮ ಕಲ್ಯಾಣ ಮಹೋತ್ಸವವನ್ನು ಭಕ್ತರು ಕಣ್ತುಂಬಿಕೊಂಡರು.

ನಗರದಲ್ಲಿ ವಿವಿಧ ಸಂಘ-ಸಂಸ್ಥೆಗಳು ಕೆಲವು ಸ್ಥಳಗಳಲ್ಲಿ ಶಾಮಿಯಾನ ಹಾಕಿ ಶ್ರೀರಾಮನ ಭಾವಚಿತ್ರಕ್ಕೆ ವಿಶೇಷ ಪೂಜೆ ಸಲ್ಲಿಸಿ, ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಿದರು. ಮೈಸೂರಿನ ವಾರ್ಡ್ ನಂ.23ರಲ್ಲಿ ಸ್ನೇಹಿತರ ಬಳಗದ ವತಿಯಿಂದ ನಾರಾಯಣ ಶಾಸ್ತ್ರೀ ರಸ್ತೆಯಲ್ಲಿರುವ ಸದ್ವಿದ್ಯಾ ಶಿಕ್ಷಣ ಸಂಸ್ಥೆ ಆವರಣದಲ್ಲಿರುವ ವೀರಾಂಜನೇಯ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿ, ನಂತರ ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು. ಈ ವೇಳೆ ಆರ್.ಪರಮೇಶ್, ಕಿರಣ್, ಬೆಳಕು ಮಂಜು, ಸುರೇಂದ್ರ, ಶ್ರವಣ್ ಜೈನ್ ಮತ್ತಿತರರು ಇದ್ದರು.

ಅಂತರ ರಾಷ್ಟ್ರೀಯ ಹಿಂದೂ ಪರಿಷತ್ ರಾಷ್ಟ್ರೀಯ ಭಜರಂಗದಳದ ವತಿಯಿಂದ ಹೈವೇ ವೃತ್ತದಲ್ಲಿ ಆಯೋಜಿಸಿದ್ದ ರಾಮನವಮಿಯಲ್ಲಿ ಬಿಜೆಪಿ ಮುಖಂಡ ಜಯಪ್ರಕಾಶ್(ಜೆಪಿ) ಭಾಗವಹಿಸಿ, ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಿದರು. ನಗರದ ನಂಜರಾಜ ಬಹದ್ದೂರ್ ಛತ್ರದ ಬಳಿಯೂ ಪಾನಕದ ವ್ಯವಸ್ಥೆ ಮಾಡಲಾಗಿತ್ತು. ರಾಮನವಮಿ ಆಚರಣೆ ಸಂದರ್ಭದಲ್ಲಿ ಪ್ರತಿ ವರ್ಷವೂ ಕೆಲವೆಡೆ ಭಕ್ತರಿಗೆ ಪಾನಕ, ಕೋಸಂಬರಿ ಮತ್ತು ಅನ್ನ ಸಂತರ್ಪಣೆ ಏರ್ಪಡಿಸಲಾಗುತ್ತಿತ್ತು. ಆದರೆ, ಈ ಬಾರಿ ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನೀತಿ ಸಂಹಿತೆ ಜಾರಿ ಇರುವ ಕಾರಣ ತಪ್ಪು ಸಂದೇಶ ಹೋಗಬಾರದು ಎಂಬ ಸದುದ್ದೇಶದಿಂದ ರಾಮನವಮಿಯನ್ನು ಸರಳವಾಗಿ ಆಚರಿಸಲಾಯಿತು. ಅಯೋಧ್ಯೆಯ ಶ್ರೀರಾಮಮಂದಿರದಲ್ಲಿ ಮಧ್ಯಾಹ್ನ 12 ಗಂಟೆಗೆ ಸರಿಯಾಗಿ ಸರ್ವಾಲಂಕೃತ ಬಾಲರಾಮನ ಹಣೆಯನ್ನು ಸೂರ್ಯ ರಶ್ಮಿ ಸ್ಪರ್ಶಿಸಿದ್ದು, ಸುಮಾರು 4 ನಿಮಿಷಗಳ ಕಾಲ ಸೂರ್ಯ ರಶ್ಮಿ ತಿಲಕದಂತೆ ರಾಮನ ಹಣೆ ಮೇಲೆ ಕಂಗೊಳಿಸಿದ್ದನ್ನು ದೃಶ್ಯ ಮಾಧ್ಯಮಗಳಲ್ಲಿ ಕಂಡು ಪುಳಕಿತಗೊಂಡ ಭಕ್ತಾಧಿಗಳು ಜೈ ಶ್ರೀರಾಮ್... ಜೈ ಶ್ರೀರಾಮ್... ಎಂದು ಘೋಷಣೆ ಕೂಗಿದರು.

ಕಳೆದ ವಾರ ಬಾಲರಾಮನ ಹಣೆಗೆ ಸೂರ್ಯ ತಿಲಕವಿಡುವ ಪ್ರಯೋಗ ಮಾಡಲಾಗಿತ್ತು. ಇದು ಯಶಸ್ವಿಯಾಗಿತ್ತು. ಇಂದು ರಾಮ ಜನಿಸಿದ ಸಮಯಕ್ಕೆ ಸರಿಯಾಗಿ ಸೂರ್ಯನ ಕಿರಣ ಹಣೆಯನ್ನು ಸ್ಪರ್ಶಿಸಿದೆ. 58 ಮಿ.ಮೀ. ಗಾತ್ರದ ಸೂರ್ಯ ರಶ್ಮಿಯು ಬಾಲರಾಮನ ಹಣೆಯ ಕೇಂದ್ರದಲ್ಲಿ ಸುಮಾರು ಮೂರರಿಂದ ಮೂರೂವರೆ ನಿಮಿಷಗಳ ಕಾಲ ಬೆಳಗಿದೆ.

ರಾಮ ಮಂದಿರದ ಮೂರನೇ ಮಹಡಿಯಲ್ಲಿ ಆಪ್ಟಿಕಲ್ ಲೆನ್ಸ್‌ವೊಂದನ್ನು ಅಳವಡಿಸಲಾಗಿದ್ದು, ಅದು ಪೈಪ್‌ಗಳಲ್ಲಿ ಅಳವಡಿಸಿರುವ ರಿಫ್ಲೆಕ್ಟರ್‌ಗಳ ಮೂಲಕ ಬೆಳಕನ್ನು ವಿಗ್ರಹದ ಹಣೆಯ ಮೇಲೆ ಮೂಡಿಸಿದೆ. ಭಾರತೀಯ ಭೌತವಿಜ್ಞಾನ ಸಂಸ್ಥೆಯ ನೆರವಿನಿಂದ ಈ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದ್ದು, ಸೂರ್ಯನು ನಿರ್ದಿಷ್ಟ ದಿನದಂದು ಯಾವ ಜಾಗದಲ್ಲಿ ಇರುವನು ಎಂಬುದನ್ನು ನೋಡಿಕೊಂಡು ಸೂರ್ಯ ತಿಲಕಕ್ಕೆ ಅಗತ್ಯವಿರುವ ಮಸೂರಗಳನ್ನು ರಾಮಮಂದಿರದಲ್ಲಿ ಅಳವಡಿಸಲಾಗಿದ್ದು, ಈ ಮೂಲಕ ಶ್ರೀರಾಮನ ಹಣೆ ಸ್ಪರ್ಶಿಸಿದೆ. ಈ ಮುಖ್ಯ ಆಕರ್ಷಣೆಯನ್ನು ರಾಮನವಮಿ ಹಿನ್ನೆಲೆ ಅಯೋಧ್ಯೆಯಲ್ಲಿ ಸಾವಿರಾರು ಭಕ್ತರು ಕಣ್ತುಂಬಿಕೊಡಿದ್ದಾರೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ.



ಪಡುವಾರಹಳ್ಳಿ ಜೋಡಿ ಮಾರಮ್ಮ ಜನಪರ ವೇದಿಕೆಯಿಂದ ಶ್ರೀ ರಾಮಮಂದಿರದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜೆ ಸಲ್ಲಿಸಿ, ನಂತರ ಸಾರ್ವಜನಿಕರಿಗೆ ಪಾನಕ ಮತ್ತು ಮಜ್ಜಿಗೆಯನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ನಟರಾಜ್, ಜೆ. ಯೋಗೇಶ್, ಎನ್.ಬೆಟ್ಟೇಗೌಡ, ವೈರಮುಡಿ, ಗಿರೀಶ, ದಿನೇಶಗೌಡ, ಮಾಯಣ್ಣ, ಡ್ರಾಮಾ ಮಾಸ್ಟರ್ ಕುಮಾರ್, ತಬಲಾ ರಾಮಣ್ಣ, ಕಿಟ್ಟಿ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಇರ್ವಿನ್ ರಸ್ತೆಯ ಶ್ರೀ ಪಂಚಮುಖಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ವಿಶೇಷ ಪೂಜಾ ವಿಧಿ ವಿಧಾನ ನಡೆಯಿತು. ಮಹಾ ಸಂಕಲ್ಪ ಪುಣ್ಯಾಹ ವಿಶ್ವ ಕ್ಷಮಾರಾಧನೆ, ಗಣಪತಿ ಪೂಜೆ, ಶ್ರೀರಾಮ ತಾರಕ ಹೋಮ, ಶನಿ ಶಾಂತಿ, ನವಗ್ರಹ ಹೋಮ, ತದನಂತರ ಪೂರ್ಣಾಹುತಿ ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಎಸ್. ಕೃಷ್ಣಮೂರ್ತಿ ನೇತೃತ್ವದಲ್ಲಿ ನೆರವೇರಿತು. ಬಳಿಕ ಭಕ್ತಾದಿಗಳಿಗೆ ಶ್ರೀರಾಮಚಂದ್ರ ಪ್ರಭು ಭಾವಚಿತ್ರ ಹಾಗೂ ಕೋಸಂಬರಿ ಪಾನಕ ಮಜ್ಜಿಗೆ ವಿತರಿಸಲಾಯಿತು. ಈ ಸಂದರ್ಭದಲ್ಲಿ ನೂರಾರು ಭಕ್ತರು ಹಾಜರಿದ್ದರು.



ಮೈಸೂರಿನ 23ನೇ ವಾರ್ಡಿನ ಸ್ನೇಹಿತರ ಬಳಗದ ವತಿಯಿಂದ ಶ್ರೀ ರಾಮನವಮಿ ಪ್ರಯುಕ್ತ ಸದ್ವಿದ್ಯಾ ವೃತ್ತದಲ್ಲಿರುವ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಮತ್ತು ಸಾರ್ವಜನಿಕರಿಗೆ ಪಾನಕ ಮತ್ತು ಮಜ್ಜಿಗೆಯನ್ನು ವಿತರಿಸಲಾಯಿತು. ಮುಡಾ ಮಾಜಿ ಅಧ್ಯಕ್ಷ ಯಶಸ್ವಿನಿ ಸೋಮಶೇಖರ್, ಮಾಧ್ಯಮ ವಕ್ತಾರ ಎಂ.ಎ.ಮೋಹನ್, ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಆರ್.ಪರಮೇಶ, ಸುರೇಂದ್ರ, ಪ್ರಮೋದ್, ಸಂದೀಪ್, ಕಿರಣ್, ಶ್ರವಣ್, ಸಂದೇಶ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರಿನ ಹೈವೆ ಸರ್ಕಲ್‌ನಲ್ಲಿ ಭಜರಂಗದಳದ ಘಟಕವು ಏರ್ಪಡಿಸಿದ್ದ ಶ್ರೀರಾಮನವಮಿ ಕಾರ್ಯಕ್ರಮದಲ್ಲಿ ಬಿಜೆಪಿ ಮುಖಂಡ, ನಟ ಜಯಪ್ರಕಾಶ್ (ಜೆಪಿ) ಪಾಲ್ಗೊಂಡು ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಿದರು. ಅಶೋಕ, ಮಹದೇವಪ್ರಸಾದ್, ಮನೋಹರ, ಸಂಜು, ವಿಶ್ವನಾಥ್, ವಿನಯ್, ಅನಂತ, ಸುರೇಶ್, ರಾಜೇಶ್, ಮೂರ್ತಿ ಹಾಗೂ ನಿರ್ಮಾಪಕ ರಮೇಶ್‌ಗೌಡ ಇನ್ನು ಮುಂತಾದವರು ಈ ವೇಳೆ ಉಪಸ್ಥಿತರಿದ್ದರು.

ಪಿಜಿ ವಾಸಿಗಳ ಸ್ನೇಹ ಸಂಪಾದಿಸಿ ವಂಚನೆ; ಅಂತಾರಾಜ್ಯ ಸೈಬರ್ ಆರೋಪಿ ಬಂಧನ

ಕ್ರೆಡಿಟ್ ಕಾರ್ಡ್, ಸಿಮ್ ಕಾರ್ಡ್ ಕದ್ದು ಬ್ಯಾಂಕ್ ಖಾತೆಯ ಹಣ ವರ್ಗಾವಣೆ

ಮೈಸೂರು, ಏ.17-ಪಿಜಿಗಳಲ್ಲಿ ವಾಸ್ತವ್ಯ ಹೂಡಿರುವವರ ಸ್ನೇಹ ಸಂಪಾದಿಸಿ, ಅವರ ಕ್ರೆಡಿಟ್ ಕಾರ್ಡ್ ಮತ್ತು ಸಿಮ್ ಕಾರ್ಡ್‌ಗಳನ್ನು ಕದ್ದು, ಬ್ಯಾಂಕ್ ಖಾತೆಯಲ್ಲಿನ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿಕೊಳ್ಳುತ್ತಿದ್ದ ಅಂತರರಾಜ್ಯ ಸೈಬರ್ ಆರೋಪಿಯೋರ್ವನನ್ನು ಮೈಸೂರಿನ ಸೆನ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ತಿ.ನರಸೀಪುರ ತಾಲೂಕು ಮುದ್ದಬೀರನಹುಂಡಿ ಗ್ರಾಮದ ಪ್ರದೀಪ್(31) ಬಂಧಿತನಾಗಿದ್ದು, ಈತ ರಾಜ್ಯದ ವಿವಿಧೆಡೆ ಮಾತ್ರವಲ್ಲದೆ, ತಮಿಳುನಾಡಿನಲ್ಲೂ ಕೂಡ ಸೈಬರ್ ಅಪರಾಧಗಳನ್ನು ಎಸಗಿರುವುದು ಪತ್ತೆಯಾಗಿದೆ.

ವಿವರ: ಮೈಸೂರಿನ ಸರಸ್ವತಿಪುರಂ ಕಾಮಾಕ್ಷಿ ಆಸ್ಪತ್ರೆ ಹಿಂಭಾಗದ ವೀವ್ ಪಿಜಿಯಲ್ಲಿದ್ದ ಓರ್ವರ ಸ್ನೇಹ ಸಂಪಾದಿಸಿದ್ದ ಈತ ಅವರೊಂದಿಗೆ ಒಂದು ದಿನ ವಾಸ್ತವ್ಯ ಹೂಡಿ, ಅವರು ನಿದ್ದೆ ಮಾಡುತ್ತಿದ್ದ ವೇಳೆ ಅವರ ಕ್ರೆಡಿಟ್ ಕಾರ್ಡ್ ಮತ್ತು ಸಿಮ್ ಕಾರ್ಡ್‌ಗಳನ್ನು ಕದ್ದು ಅವರ ಬ್ಯಾಂಕ್ ಖಾತೆಯ 87 ಸಾವಿರ ರೂ.ಗಳನ್ನು ರಮ್ಮಿ ಟೈಂ ಗೇಮ್‌ಗೆ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ. ಅದೇ ರೀತಿ ವಿಜಯನಗರದ ಬಿಳಿಗಿರಿ ಪಿಜಿಯಲ್ಲಿ ವಾಸ್ತವ್ಯವಿದ್ದ ಒಬ್ಬನ ಸ್ನೇಹ ಸಂಪಾದಿಸಿ ಅವರ ಕೊಠಡಿಯಲ್ಲಿ ಒಂದು ದಿನ ವಾಸ್ತವ್ಯ ಹೂಡಿ ಅವರ ಕ್ರೆಡಿಟ್ ಕಾರ್ಡ್ ಮತ್ತು ಸಿಮ್ ಕಾರ್ಡ್ ಕದ್ದು, ಬ್ಯಾಂಕ್ ಖಾತೆಯಲ್ಲಿದ್ದ 2,21,800 ರೂ.ಗಳನ್ನು ಆನ್‌ಲೈನ್ ಮೂಲಕ ರಮ್ಮಿ ಟೈಂ ಗೇಮ್‌ಗೆ ಅಕ್ರಮವಾಗಿ ವರ್ಗಾವಣೆ ಮಾಡಿಕೊಂಡಿದ್ದಾನೆ. ಈ ಎರಡೂ ಪ್ರಕರಣಗಳು ಮೈಸೂರು ನಗರ ಸೆನ್ ಠಾಣೆಯಲ್ಲಿ ದಾಖಲಾಗಿತ್ತು.

ನಗರ ಕಾನೂನು ಮತ್ತು ಸುವ್ಯವಸ್ಥೆ ಡಿಸಿಪಿ ಎಂ.ಮುತ್ತುರಾಜ್ ನಿರ್ದೇಶನದಂತೆ ದೇವರಾಜ ಉಪ ವಿಭಾಗದ ಎಸಿಪಿ ಶಾಂತಮಲ್ಲಪ್ಪ ಮಾರ್ಗದರ್ಶನದಲ್ಲಿ ಸೆನ್ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಕುಮಾರ್, ಸಬ್ ಇನ್ಸ್‌ಪೆಕ್ಟರ್ ಎಂ.ಎಲ್. ಸಿದ್ದೇಶ್, ಸಿಬ್ಬಂದಿಗಳಾದ ಸಿ.ಸಂದೇಶ್ ಕುಮಾರ್ ಮತ್ತು ಅನಿಲ್ ಆರೋಪಿಯನ್ನು ಬಂಧಿಸಿ ವಿಚಾರಣೆಗೊಳಪಡಿಸಿದ ವೇಳೆ ಈತ ಮೈಸೂರಿನ ಸರಸ್ವತಿಪುರಂ ಠಾಣೆ, ಬೆಂಗಳೂರಿನ ವಿಜಯನಗರ ಠಾಣೆ, ಕಲಾಸಿಪಾಳ್ಯಂ ಠಾಣೆ ಮತ್ತು ಜೆ.ಸಿ.ನಗರ ಠಾಣೆ ವ್ಯಾಪ್ತಿಯಲ್ಲಿ ತಲಾ ಒಂದು ಪ್ರಕರಣದಲ್ಲಿ ಭಾಗಿಯಾಗಿ ಒಟ್ಟು 5,37,560 ರೂ. ವಂಚಿಸಿರುವುದು ಪತ್ತೆಯಾಗಿದೆ. ಅಲ್ಲದೇ ಈತ ಮಂಡ್ಯ ಪಶ್ಚಿಮ ಠಾಣೆ, ನಂಜನಗೂಡು ಠಾಣೆ, ಬೆಂಗಳೂರಿನ ಯಶವಂತಪುರ ಠಾಣೆ ಹಾಗೂ ತಮಿಳುನಾಡಿನ ದಿಂಡಿಗಲ್ ಪೊಲೀಸ್ ಠಾಣಾ ವ್ಯಾಪ್ತಿಗಳಲ್ಲಿ ಸೈಬರ್ ಅಪರಾಧ ಎಸಗಿರುವ ಬಗ್ಗೆ ಮಾಹಿತಿ ಇದೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.

ಕ್ರಿಕೆಟ್ ಬೆಟ್ಟಿಂಗ್: ಮೈಸೂರಿನ ಮೇಟಗಳ್ಳಿ ಠಾಣೆ ವ್ಯಾಪ್ತಿಯ ಮಥುರಾ ನಗರ ಒಂದನೇ ಮುಖ್ಯ ರಸ್ತೆಯಲ್ಲಿ ಐಪಿಎಲ್ ಕ್ರಿಕೆಟ್ ಬೆಟ್ಟಿಂಗ್ ನಡೆಸುತ್ತಿದ್ದ ವ್ಯಕ್ತಿಯನ್ನು ಮೇಟಗಳ್ಳಿ ಠಾಣೆ ಪೊಲೀಸರು ಬಂಧಿಸಿ, ಆತನಿಂದ ಮೊಬೈಲ್ ಮತ್ತು 15 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ.



ಮೈಸೂರಿನ ಚಾಮುಂಡಿಪುರಂ ಬಸವ ಬಳಗದ ವತಿಯಿಂದ ಚಾಮುಂಡಿಪುರಂ ವೃತ್ತದಲ್ಲಿ ಶ್ರೀ ರಾಮನವಮಿ ಪ್ರಯುಕ್ತ ಶ್ರೀ ರಾಮನ ಭಾವಚಿತ್ರಕ್ಕೆ ಮಡಿವಾಳ ಸ್ವಾಮಿ ಮಠದ ಅಡವಿ ಸ್ವಾಮೀಜಿಯವರು ಪುಷ್ಪಾರ್ಚನೆ ಮಾಡಿದರು. ನಂತರ ಬಸವ ಬಳಗ ಚಾಮುಂಡಿಪುರಂ ಸಂಘದ ಪದಾಧಿಕಾರಿಗಳು ಮಜ್ಜಿಗೆ ಮತ್ತು ಪಾನಕ ವಿತರಣೆ ಮಾಡಿದರು. ಈ ವೇಳೆ ಸಂಘದ ಅಧ್ಯಕ್ಷ ಸಿ.ಸಂದೀಪ್, ಉಪಾಧ್ಯಕ್ಷ ಎಂ.ಬಸವರಾಜು, ಖಜಾಂಚಿ ವಿ.ಬಸವರಾಜು, ಸಹ ಕಾರ್ಯದರ್ಶಿ ಮಹದೇವಪ್ಪ, ನಿರ್ದೇಶಕ ಬಸವರಾಜು, ಮಂಜುನಾಥ್, ಸೋಮೇಶ್, ಮುಖಂಡರಾದ ಮೋಹನ್, ಮಹೇಶ್, ಸುರೇಶ್, ರಾಜೇಂದ್ರ, ವಿಜಯ್ ಕುಮಾರ್, ಮಹೇಶ್ ಅರಸ್, ಗುರುಮಲ್ಲಪ್ಪ, ನಾಗರಾಜ್, ತಿಪ್ಪೇಶ್, ಸುರೇಂದರ್, ಕುಶಲ್, ಪವನ್, ಧನುಷ್ ಉಪಸ್ಥಿತರಿದ್ದರು.

ಒಂದನೇ ಪುಟದಿಂದ

ಭರ್ಜರಿ ರೋಡ್ ಶೋ

ನವಮಿಯು ಭಾರತೀಯರಿಗೆ ಅತೀ ವಿಶೇಷವಾಗಿದ್ದು, 5 ಶತಮಾನಗಳ ಭಾರತೀಯರ ಕನಸು ನನಸಾಗಿದೆ. ಲಕ್ಷಾಂತರ ಜನರ ತ್ಯಾಗ-ಬಲಿದಾನಗಳಿಂದ ಭಾರತೀಯರ ಅಸ್ಮಿತೆಯಾಗಿ ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣವಾಗಿದ್ದು, ಇದಕ್ಕಾಗಿ ದೇಶವಾಸಿಗಳ ಪರವಾಗಿ ನಮ್ಮ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿಯವರನ್ನು ಅಭಿನಂದಿಸುವುದಾಗಿ ತಿಳಿಸಿದರು.

ಶ್ರೀರಾಮನ ಆದರ್ಶ, ಪ್ರಜಾಸೇವೆಯ ಪರಂಪರೆಯನ್ನು ಮೈಸೂರಿನ ಯದುವಂಶದ ಅರಸರು ಮುಂದುವರೆಸಿಕೊಂಡು ಬಂದಿದ್ದು, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಆಶೀರ್ವಾದದೊಂದಿಗೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರ ಮಾರ್ಗದರ್ಶನದಲ್ಲಿ ತಾವೂ ಪ್ರಜಾಸೇವೆಗೆ ಅವಕಾಶ ಬಯಸಿದ್ದು, ತಮ್ಮನ್ನು ಆಶೀರ್ವದಿಸಬೇಕಾಗಿ ಯದುವೀರ್ ಮನವಿ ಮಾಡಿದರು. ನಂತರ ನಜರ್‌ಬಾದ್ ಸರ್ಕಲ್‌ನಿಂದ ತೆರೆದ ವಾಹನದಲ್ಲಿ ಆರಂಭವಾದ ರೋಡ್ ಶೋನಲ್ಲಿ ನಗರ ಬಿಜೆಪಿ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್. ನಾಗೇಂದ್ರ, ಮಾಜಿ ಮೇಯರ್ ರವಿಕುಮಾರ್ (ಚಿನ್ನಿ ರವಿ), ಮಾಜಿ ಪಾಲಿಕೆ ಸದಸ್ಯ ಸತೀಶ್, ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರೊಂದಿಗೆ ಪ್ರಮುಖ ರಸ್ತೆಗಳಲ್ಲಿ ತೆರಳಿದ ಯದುವೀರ್ ಅವರನ್ನು ಜನರು, ಯುವ ಸಮೂಹ ಹೂಮಳೆಗರೆದು ಬರಮಾಡಿಕೊಂಡರು. ಜನರತ್ತ ಕೈ ಮುಗಿದು ದೇಶದ ರಕ್ಷಣೆ, ಸುಭದ್ರತೆಗಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಬೆಂಬಲಿಸಬೇಕಾಗಿರುವುದರಿಂದ ಈ ಭಾರಿ ಬಿಜೆಪಿ ಅಭ್ಯರ್ಥಿಯಾದ ತಮಗೆ ಮತ ನೀಡಿ ಬೆಂಬಲಿಸಬೇಕೆಂದು ಯದುವೀರ್ ಮನವಿ ಮಾಡಿದರು. ನಂತರ ರಾಮವಿಲಾಸ, ಸೀತಾ ವಿಲಾಸ ರಸ್ತೆ, ಡಿ. ಸುಬ್ಬಯ್ಯ ರಸ್ತೆ, ಬೋಟಿ ಬಜಾರ್, ದೇವರಾಜ ಮೊಹಲ್ಲಾ, ನಾರಾಯಣಶಾಸ್ತ್ರಿ ರಸ್ತೆ, ಕೈಲಾಸಪುರಂಗಳಲ್ಲೂ ರೋಡ್ ಶೋ ನಡೆಸಿದ ಯದುವೀರ್ ಅವರಿಗೆ ಜನರು ಗೌರವ ಸೂಚಿಸಿ ಬರಮಾಡಿಕೊಂಡರು.

ಹಳೇ ಬಡಾವಣೆಗಳಲ್ಲಿ ಹಿರಿಯರು, ಮಹಿಳೆಯರು ರಾಜವಂಶಸ್ಥ ಒಡೆಯರ್ ದರ್ಶನ ಮಾಡಿ ಭಕ್ತಿಭಾವದಿಂದ ನಮಿಸುತ್ತಿದ್ದದ್ದು ಕಂಡು ಬಂತು. ಎಲ್ಲೆಲ್ಲೂ ಜೈಕಾರ, 'ರಾಜಮನೆತನದ ಯದುವೀರ್‌ಗೆ ತಮ್ಮ ಬೆಂಬಲ' ಎಂದು ಘೋಷಣೆ ಕೂಗುತ್ತಿದ್ದ ಜನರಿಗೆ ಕೈಮುಗಿದು ಒಡೆಯರ್ ಕೃತಜ್ಞತೆ ಸಲ್ಲಿಸಿದರು.

ಉರಿಬಿಸಿಲನ್ನೂ ಲೆಕ್ಕಿಸದೇ ಬಿಜೆಪಿ-ಜೆಡಿಎಸ್ ಮುಖಂಡರೊಂದಿಗೆ ರೋಡ್ ಶೋ ನಡೆಸಿದ ಯದುವೀರ್ ಅವರನ್ನು ಅಲ್ಲಲ್ಲಿ ನಿಲ್ಲಿಸಿ ಕೆಲ ಯುವಕ-ಯುವತಿಯರು ಸೆಲ್ಫಿ ತೆಗೆದುಕೊಳ್ಳಲು ಬಯಸಿದರೂ, ಸಮಯದ ಅಭಾವದಿಂದಾಗಿ ಅವರು ತೆರೆದ ವಾಹನದಿಂದ ಕೆಳಗಿಳಿಯಲು ಸಾಧ್ಯವಾಗದೇ ರೋಡ್ ಶೋನಲ್ಲಿ ಸಾಗಬೇಕಾಯಿತು.

ಮಧ್ಯಾಹ್ನದ ನಂತರವೂ ಮಾಜಿ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಬಂಬೂ ಬಜಾರ್, ತಿಲಕ್‌ನಗರ, ಯಾದವಗಿರಿ, ಮಂಜುನಾಥಪುರ, ಬೃಂದಾವನ ಬಡಾವಣೆಗಳಲ್ಲೂ ಯದುವೀರ್ ರೋಡ್ ಶೋ ಮೂಲಕ ಚುನಾವಣಾ ಪ್ರಚಾರ ನಡೆಸಿದರು. ಪಿ. ಪ್ರಶಾಂತ್‌ಗೌಡ, ಸಂಜಯ್, ಪ್ರಮೀಳಾ ಭರತ್, ಹರ್ಷ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಮುಖಂಡರು ಕಾರ್ಯಕರ್ತರು ರೋಡ್ ಶೋದಲ್ಲಿ ಪಾಲ್ಗೊಂಡು ಯದುವೀರ್ ಅವರಿಗೆ ಸಾಥ್ ನೀಡಿದರು.

ಸಂಜೆ ಯದುವೀರ್ ಅವರು ಸಂತೆಪೇಟೆ ಸುತ್ತಮುತ್ತಲಿನ ರಸ್ತೆಗಳಲ್ಲಿ ರೋಡ್ ಶೋ ನಡೆಸಿದ ನಂತರ ಮೇದರ್‌ಬ್ಲಾಕ್‌ನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಮೇದರ್ ಬ್ಲಾಕ್, ಬಂಬೂಬಜಾರ್, ಯಾದವಗಿರಿಗೆ ತೆರಳಿ ಅಲ್ಲಿನ ಗಣಪತಿ ದೇವಸ್ಥಾನದಲ್ಲಿ ಪೂಜೆ ಸಲ್ಲಿಸಿ, ಪಡುವಾರಹಳ್ಳಿ ಅಂಬೇಡ್ಕರ್ ಪ್ರತಿಮೆಗೆ ಮಾಲಾರ್ಪಣೆ ಮಾಡಿ, ರೋಡ್ ಶೋ ನಡೆಸಿದರು. ಈ ವೇಳೆ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹೇಮಂತ್‌ಕುಮಾರ್‌ಗೌಡ ಇನ್ನಿತರ ಮುಖಂಡರು ಸಾಥ್ ನೀಡಿದರು.

ಬಿಜೆಪಿ ಸಂಸದ ಕರಡಿ ಸಂಗಣ್ಣ ಸೇರಿ ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆ

ಕಾಂಗ್ರೆಸ್ ಗ್ಯಾರಂಟಿ ಮುಟ್ಟುವುದೂ ಬಿಜೆಪಿ-ಜೆಡಿಎಸ್ ಹಣೆಯಲ್ಲೂ ಬರೆದಿಲ್ಲ: ಡಿಕೆಶಿ



ಬೆಂಗಳೂರು, ಏ.17(ಕೆಎಂಶಿ)- ಬಿಜೆಪಿ ಸಂಸದ ಕರಡಿ ಸಂಗಣ್ಣ ಸೇರಿದಂತೆ ಹಲವು ಮುಖಂಡರು ಕಮಲ ತೊರೆದು ಹಸ್ತ ವಶವಾಗಿದ್ದಾರೆ.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಕರಡಿ ಸಂಗಣ್ಣ ಅಲ್ಲದೆ, ಅರಕಲಗೂಡಿನ ಪುಟ್ಟಸ್ವಾಮಿ, ಮಾಜಿ ಶಾಸಕ ಶಿವಪುತ್ರ ಮಾಳಗಿ, ಕೃಷ್ಣಮೂರ್ತಿ ಹಾಗೂ ಪತ್ರಕರ್ತೆ ಸ್ವಾತಿ ಚಂದ್ರಶೇಖರ್ ಕಾಂಗ್ರೆಸ್ ಸೇರಿದರು.

ಇವರ ಸೇರ್ಪಡೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾಂಗ್ರೆಸ್ ಗ್ಯಾರಂಟಿಗಳನ್ನು ಮುಟ್ಟುವುದು ಬಿಜೆಪಿ-ದಳದ ಹಣೆಯಲ್ಲಿ ಬರೆದಿಲ್ಲ. ಇದಕ್ಕೆ ಪಕ್ಷ ಅವಕಾಶ ಕೊಡುವುದಿಲ್ಲ. ರಾಜ್ಯದಲ್ಲಿ ನಾವು 20ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಲಿದ್ದೇವೆ ಎಂದರು.

ಕೇಂದ್ರದಲ್ಲಿ ಎನ್‌ಡಿಎ ಅಧಿಕಾರಕ್ಕೆ ಬಂದರೆ ಗ್ಯಾರಂಟಿಗಳನ್ನು ತೆಗೆದು ಹಾಕುತ್ತೇವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ವಿಜಯೇಂದ್ರ ಹೇಳಿದ್ದಾರೆ. ಆದರೆ ಯಡಿಯೂರಪ್ಪ, ಕುಮಾರಸ್ವಾಮಿ, ಅಶೋಕ ಅವರಿಗೆ ಗ್ಯಾರಂಟಿಗಳನ್ನು ಮುಟ್ಟಲು ರಾಜ್ಯದ ಜನ ಅವಕಾಶ ನೀಡುವುದಿಲ್ಲ. ಕಾಂಗ್ರೆಸ್ ಪಕ್ಷದ ಮೇಲಿನ ಜನರ ಪ್ರೀತಿ ಕಂಡು ಅವರಿಗೆ ಅಸೂಯೆ ಆಗಿದೆ. ಆದ ಕಾರಣ ನಮ್ಮ ತಾಯಂದಿರ ಬಗ್ಗೆ ಮಾತನಾಡುತ್ತಿದ್ದಾರೆ. ತಾಯಂದಿರು ದಾರಿ ತಪ್ಪಿದ್ದಾರೆ ಎಂದು ಹೇಳಿಕೆ ನೀಡಿರುವ ಅವರಿಗೆ ರಾಜ್ಯದ ಜನರೇ ಉತ್ತರ ನೀಡಲಿದ್ದಾರೆ ಎಂದರು. ಇಡೀ ರಾಜ್ಯದಲ್ಲಿ ಕಾಂಗ್ರೆಸ್ ಹಾಗೂ ಗ್ಯಾರಂಟಿಗಳ ಅಲೆಯಿದೆ. ಇಡೀ ದೇಶವೇ ಕರ್ನಾಟಕದ ಕಡೆಗೆ ತಿರುಗಿ ನೋಡುತ್ತಿದೆ.

ನಿರುದ್ಯೋಗ, ಬೆಲೆ ಏರಿಕೆ ಸಮಸ್ಯೆಯ ಬಗ್ಗೆ ಜನರು ಚಿಂತನೆ ಮಾಡುತ್ತಿದ್ದಾರೆ. ಧರ್ಮ, ಜಾತಿ ಆಧಾರದ ಮೇಲೆ ನಡೆಯುತ್ತಿರುವ ರಾಜಕಾರಣದ ಬಗ್ಗೆ ಜನರಲ್ಲಿ ಜಾಗೃತಿ ಮೂಡಿದೆ. ಪ್ರಧಾನಿ ಮೋದಿ ಅವರು ಸಂವಿಧಾನ ಬದಲಾವಣೆ ಮಾಡುವುದಿಲ್ಲ ಎಂದು ಬಹಿರಂಗವಾಗಿ ಹೇಳಿಕೆ ಕೊಡುತ್ತಿದ್ದಾರೆ.

ಬಿಜೆಪಿಯ ಹಾಲಿ ಸಂಸದರೊಬ್ಬರು 400 ಸ್ಥಾನಗಳನ್ನು ಕೊಡಿ, ಸಂವಿಧಾನ ಬದಲಾವಣೆ ಮಾಡುತ್ತೇವೆ ಎಂದು ಎರಡು ಮೂರು ಬಾರಿ ಹೇಳಿದರೂ ಅವರನ್ನು ಪಕ್ಷದಿಂದ ಉಚ್ಚಾಟಿಸುವುದಕ್ಕೆ ಬಿಜೆಪಿ ಏಕೆ ಮುಂದಾಗಿಲ್ಲ, ಸಂವಿಧಾನ ಬದಲಾವಣೆ ಹೇಳಿಕೆಯ ನಂತರ ಉತ್ತರ ಭಾರತದಲ್ಲಿ ಜನ ದಂಗೆ ಎದ್ದಿದ್ದಾರೆ, ಆದ ಕಾರಣ ಈಗ ಬದಲಾವಣೆ ಮಾಡುವುದಿಲ್ಲ ಎಂದು ಹೇಳುತ್ತಿದ್ದಾರೆ. ತೆಲಂಗಾಣ ಮತ್ತು ಕರ್ನಾಟಕದಲ್ಲಿ ಗ್ಯಾರಂಟಿಗಳನ್ನು ಯಶಸ್ವಿಯಾಗಿ ಅನುಷ್ಠಾನಕ್ಕೆ ತಂದ ಮೇಲೆ ಗ್ಯಾರಂಟಿ ವಿರುದ್ಧ ಮಾತನಾಡುತ್ತಿದ್ದವರು, ಈಗ ಅದರ ಪರವಾಗಿ ಮಾತನಾಡುತ್ತಿದ್ದಾರೆ, ಮೋದಿ ಗ್ಯಾರಂಟಿ ಎಂದು ಕರೆಯುತ್ತಿದ್ದಾರೆ.

ಬಿಜೆಪಿಗೆ ಸೋಲು ಗ್ಯಾರಂಟಿ ಎಂದು ಗೊತ್ತಾದ ಮೇಲೆ ಮೈತ್ರಿ ಮಾಡಿಕೊಂಡಿದ್ದಾರೆ. ಆಂಧ್ರ ಪ್ರದೇಶದಲ್ಲಿ ಸಂಬಂಧವೇ ಇಲ್ಲದ ಚಂದ್ರಬಾಬು ನಾಯ್ಡು ಜೊತೆ ಸೇರಿಕೊಂಡಿದ್ದಾರೆ, ಕರ್ನಾಟಕದಲ್ಲಿ ದಳದೊಟ್ಟಿಗೆ ಸೇರಿಕೊಂಡಿದ್ದಾರೆ.

ಕಾಂಗ್ರೆಸ್ ಪಕ್ಷದ ಕಾರ್ಯಕ್ರಮಗಳು ಬಿಜೆಪಿಯನ್ನು ರಾಜ್ಯದಲ್ಲಿ ತೊಳೆದು ಹಾಕುತ್ತಿವೆ. ಬೆಳಗಾವಿಯ ಗಾಂಧಿ ಬಾವಿಯಿಂದ ನೀರನ್ನು ತೆಗೆದು ಕೊಳೆ ತೊಳೆದಂತೆ, ರಾಜ್ಯದ ಜನತೆ ಬಿಜೆಪಿಯನ್ನು ಗುಡಿಸಿ ಹಾಕುತ್ತಾರೆ ಎಂದರು.

ಕಾಂಗ್ರೆಸ್ ಪ್ರಣಾಳಿಕೆ ಬಿಡುಗಡೆ

• ಕೊಡಗು-ಮೈಸೂರು ಜಿಲ್ಲೆಗೆ ವಿವಿಧ ಯೋಜನೆ • ಕೈ ಅಭ್ಯರ್ಥಿ ಎಂ.ಲಕ್ಷ್ಮಣ್ ಭರವಸೆ

ಮಡಿಕೇರಿ, ಏ.17–ಕೊಡಗು ಮತ್ತು ಮೈಸೂರು ಜಿಲ್ಲೆಗೆ ಸಂಬಂಧಿಸಿದಂತೆ ಈ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಬುಧವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಪ್ರಣಾಳಿಕೆ ಬಿಡುಗಡೆಗೊಳಿಸಿದರು.

ಕೊಡಗು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ, ಮೈಸೂರು–ಕೊಡಗು ರೈಲು ಸಂಪರ್ಕ, ಐಟಿ–ಬಿಟಿ ಕಂಪನಿಗಳಲ್ಲಿ ಕೊಡಗಿನವರಿಗೆ ಆದ್ಯತೆ, ಸಮಗ್ರ ನೀರು ಸರಬರಾಜು ವ್ಯವಸ್ಥೆ, ಪಿರಿಯಾಪಟ್ಟಣದಲ್ಲಿ ಕೃಷಿ ಸಂಶೋಧನಾ ಕೇಂದ್ರ, ಮಡಿಕೇರಿಯಲ್ಲಿ ಟ್ರಾಮಾ ಕೇಂದ್ರ ಸ್ಥಾಪನೆ, ಸೋಮವಾರಪೇಟೆಯಲ್ಲಿ ಟೆಕ್ನಾಲಜಿ ಪಾರ್ಕ್, ಕಾಫಿ ಮತ್ತು ಕರಿಮೆಣಸು ಬೆಳೆಗಾರರ ಸಮಸ್ಯೆಗೆ ಪರಿಹಾರ, ಮಡಿಕೇರಿಯಲ್ಲಿ ಮಿನಿ ಏರ್‌ಪೋರ್ಟ್, ಯೋಗ ಶಾಲೆಗಳ ಸ್ಥಾಪನೆ, ಕ್ರೀಡಾಭಿವೃದ್ಧಿ ಪ್ರಾಧಿಕಾರ ಪ್ರಾರಂಭ, ಹುಣಸೂರಿನಲ್ಲಿ ಸೆಂಟ್ರಲ್ ಯೂನಿವರ್ಸಿಟಿ ಸ್ಥಾಪನೆ, ವಿರಾಜಪೇಟೆಯಲ್ಲಿ ಕಂಪ್ಯೂಟರ್ ಹಾರ್ಡ್‌ವೇರ್ ಕೇಂದ್ರ ಆರಂಭ, ಗೋಣಿಕೊಪ್ಪಲುವಿನಲ್ಲಿ ಕಾಫಿ ರಫ್ತು ಕೇಂದ್ರ ಸೇರಿದಂತೆ ವಿವಿಧ ಯೋಜನೆಗಳ ಭರವಸೆಯನ್ನು ಪ್ರಣಾಳಿಕೆಯಲ್ಲಿ ನೀಡಲಾಗಿದೆ ಎಂದು ಎಂ.ಲಕ್ಷ್ಮಣ್ ತಿಳಿಸಿದರು.

ರಾಜ್ಯದಲ್ಲೇ ಪ್ರಥಮ ಬಾರಿಗೆ ಕಾಂಗ್ರೆಸ್‌ನಿಂದ ಪ್ರಣಾಳಿಕೆ ಲೋಕಾರ್ಪಣೆಗೊಳಿಸಲಾಗಿದೆ ಈ ಬಾರಿ ಕಾಂಗ್ರೆಸ್ 25 ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಭರವಸೆ ನೀಡಿದ್ದು, ಕಾಂಗ್ರೆಸ್ ನುಡಿದಂತೆ ನಡೆಯುವ ಮೂಲಕ ಬದ್ಧತೆ ಮೆರೆಯಲಿದೆ. ಸಂಸದ ಪ್ರತಾಪ ಸಿಂಹ ಈ ಕ್ಷೇತ್ರಕ್ಕೆ ನೀಡಿದ ಕೊಡುಗೆ ಏನೆಂದು ಬಹಿರಂಗಪಡಿಸಲಿ. ಪ್ರತಾಪ್ ಸಿಂಹಗೆ ಮತ್ತೊಮ್ಮೆ ಸ್ಪರ್ಧಿಸಲು ಟಿಕೆಟ್ ಸಿಗದಿರುವುದಕ್ಕೆ ಕಾರಣವೇನು? ಎಂದು ಪ್ರಶ್ನಿಸಿದರು. ನಾನು ಮತ್ತು ಪ್ರತಾಪ್ ಸಿಂಹ ರಾಜಕೀಯವಾಗಿ ಮಾತ್ರ ವೈರಿಗಳೇ ವಿನಾಃ ಉಳಿದಂತೆ ನಾವಿಬ್ಬರೂ ಸ್ನೇಹಿತರಾಗಿದ್ದೇವೆ. ಇತ್ತೀಚಿಗೆ ಬೆಂಗಳೂರಿನಲ್ಲಿ ನಾವಿಬ್ಬರು ಒಟ್ಟಿಗೆ ಕಾಫಿ ಸೇವಿಸಿದ್ದೇವು. ನನ್ನ ಗೆಲುವಿಗೆ ಹಾರೈಸುವಂತೆ ಪ್ರತಾಪ್ ಸಿಂಹ ಸೇರಿದಂತೆ ಬಿಜೆಪಿಯ ಕೆಲ ನಾಯಕರನ್ನೂ ಕೇಳಿರುವುದಾಗಿ ಹೇಳಿದರು.

ಮಡಿಕೇರಿ ಶಾಸಕ ಡಾ.ಮಂತರ್‌ಗೌಡ ಮಾತನಾಡಿ, ಕಾಂಗ್ರೆಸ್‌ನ ಗ್ಯಾರಂಟಿ ಯೋಜನೆಗಳು ಮತದಾರರ ಮನ ಗೆದ್ದಿವೆ. ಈ ಬಾರಿ ಕಾಂಗ್ರೆಸ್ ಅಧಿಕ ಮತಗಳಿಂದ ಗೆಲುವು ಸಾಧಿಸಲಿದೆ ಎಂದರು.

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ದೂರದೃಷ್ಟಿಯುಳ್ಳ ಉತ್ತಮ ಅಭ್ಯರ್ಥಿ ಲಕ್ಷ್ಮಣ್ ಅವರನ್ನು ಗೆಲ್ಲಿಸುವ ಮೂಲಕ ಮತದಾರರು ಯೋಗ್ಯರನ್ನು ಸಂಸತ್ತಿಗೆ ಕಳುಹಿಸಬೇಕೆಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯೆ ವೀಣಾ ಅಚ್ಚಯ್ಯ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಪ್ರಚಾರ ಸಮಿತಿ ಪ್ರಮುಖರಾದ ಟಿ.ಪಿ.ರಮೇಶ್ ಹಾಜರಿದ್ದರು.



ಮಡಿಕೇರಿಯ ಖಾಸಗಿ ಹೋಟೆಲ್‌ನಲ್ಲಿ ಕೊಡಗು ಮತ್ತು ಮೈಸೂರು ಜಿಲ್ಲೆಗೆ ಸಂಬಂಧ ಪ್ರಣಾಳಿಕೆಯನ್ನು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಬಿಡುಗಡೆಗೊಳಿಸಿದರು. ಶಾಸಕರಾದ ಎ.ಎಸ್.ಪೊನ್ನಣ್ಣ, ಮಂತರ್‌ಗೌಡ ಮತ್ತಿತರರು ಇದ್ದರು.

> ಕೊಡಗಿಗೆ ಯಾವ ಯೋಜನೆ ಕೊಡುತ್ತೀರಿ ಎಂಬ ಪ್ರಶ್ನೆಗೆ ಬಿಜೆಪಿಯವರಲ್ಲಿ ಉತ್ತರವಿಲ್ಲ. ಜನ ಸಾಮಾನ್ಯರೊಂದಿಗೆ ಬೆರೆಯುವ ಗುಣವಿರುವ ಲಕ್ಷ್ಮಣ್ ಗೆಲ್ಲಿಸುವ ಮೂಲಕ ಮತದಾರರು ಮತ್ತೊಮ್ಮೆ ಕಾಂಗ್ರೆಸ್ ಕೈ ಹಿಡಿಯಲಿದ್ದಾರೆ.
> –ಎ.ಎಸ್.ಪೊನ್ನಣ್ಣ, ವಿರಾಜಪೇಟೆ ಶಾಸಕ

ಜಲಕ್ರೀಡೆ ಸ್ಥಗಿತಗೊಳಿಸದಿದ್ದರೆ ಚುನಾವಣೆ ಬಹಿಷ್ಕಾರದ ಎಚ್ಚರಿಕೆ

ಮಡಿಕೇರಿ, ಏ.17–ಹಾರಂಗಿ ಹಿನ್ನೀರಿನಲ್ಲಿ ಆರಂಭಿಸಿರುವ ಸಾಹಸ ಜಲಕ್ರೀಡೆಯಿಂದ ಕುಡಿಯುವ ನೀರು ಕಲುಷಿತವಾಗುತ್ತಿದೆ. ಕೂಡಲೇ ಈ ಜಲಕ್ರೀಡೆಯನ್ನು ಸ್ಥಗಿತಗೊಳಿಸಬೇಕು. ಇಲ್ಲದಿದ್ದಲ್ಲಿ ಲೋಕಸಭಾ ಚುನಾವಣೆ ಬಹಿಷ್ಕರಿಸುವುದಾಗಿ ಎಚ್ಚರಿಸಿ ಹಾರಂಗಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಕೂಡುಮಂಗಳೂರು ಗ್ರಾಪಂ ಅಧ್ಯಕ್ಷ ಭಾಸ್ಕರ್ ನಾಯಕ್ ನೇತೃತ್ವದಲ್ಲಿ ಅಣೆಕಟ್ಟೆ ಮುಂಭಾಗ ನಿವಾಸಿಗಳು, ಕುಡಿಯುವ ನೀರಿಗಾಗಿ ಚುನಾವಣೆ ಬಹಿಷ್ಕಾರ ಎಂಬ ಘೋಷಣೆಯ ಪೋಸ್ಟರ್‌ಗಳನ್ನು ಹಿಡಿದು ಪ್ರತಿಭಟನೆ ನಡೆಸಿದರು.

ಭಾಸ್ಕರ್ ನಾಯಕ್ ಮಾತನಾಡಿ, ವಿರೋಧಗಳ ನಡುವೆ ಹಾರಂಗಿ ಹಿನ್ನೀರಿನಲ್ಲಿ ಸಾಹಸ ಜಲಕ್ರೀಡೆ ಆರಂಭಿಸಲಾಗಿದೆ. ಈಗಾಗಲೇ ಬರದ ಛಾಯೆಯಿಂದ ಎಲ್ಲರೂ ತತ್ತರಿಸಿದ್ದು, ಬೋಟ್‌ಗಳ ಓಡಾಟದಿಂದ ಹಾರಂಗಿ ನೀರು ಕಲುಷಿತವಾಗುತ್ತಿದೆ. ಕುಡಿಯಲು ಹಾರಂಗಿ ಜಲಾಶಯದ ನೀರನ್ನು ಬಳಸುವ ಅತ್ತೂರು, ಹಾರಂಗಿ, ಸೋಮವಾರಪೇಟೆ ಭಾಗದ ನಿವಾಸಿಗಳಿಗೆ ಸಮಸ್ಯೆ ಎದುರಾಗುತ್ತಿದೆ ಎಂದು ಆರೋಪಿಸಿದರು. ಸಾಹಸ ಜಲಕ್ರೀಡೆಗೆ ಬಳಸುವ ಬೋಟ್‌ಗಳ ಆಯಿಲ್, ಡೀಸೆಲ್ ಸೋರಿಕೆಯಿಂದ ನೀರು ಕಲುಷಿತವಾಗುತ್ತಿದೆ. ಆದರೆ, ಈ ನೀರನ್ನೇ ಕುಡಿಯಬೇಕಾದ ದುಸ್ಥಿತಿ ಎದುರಾಗಿದೆ. ಈ ನಿಟ್ಟಿನಲ್ಲಿ ಜಿಲ್ಲಾಡಳಿತ ಗಮನಹರಿಸಿ ಕೂಡಲೇ ಶಾಶ್ವತವಾಗಿ ಈ ಜಲಕ್ರೀಡೆಯನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಗ್ರಾಪಂ ಸದಸ್ಯ ಮಣಿಕಂಠ, ನಿವಾಸಿಗಳಾದ ಗಂಗಮ್ಮ, ಮಾಲತೇಶ್, ರಘು, ಅಣ್ಣಾಮಲೈ, ನಾಗರಾಜ, ಮಧು, ಮಂಜು, ಸೆಂದಿಲ್ ಭಾಗವಹಿಸಿದ್ದರು.



ಹಾರಂಗಿ ಹಿನ್ನೀರಿನ ಜಲಕ್ರೀಡೆ ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿ ಹಾರಂಗಿ ನಿವಾಸಿಗಳು ಬುಧವಾರ ಪ್ರತಿಭಟನೆ ನಡೆಸಿದರು.

ಪೊನ್ನಂಪೇಟೆಯಲ್ಲಿ ಅಂಬೇಡ್ಕರ್ ಜಯಂತಿ



ಪೊನ್ನಂಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ವಿರಾಜಪೇಟೆ: ಪೊನ್ನಂಪೇಟೆ ತಹಶೀಲ್ದಾರ್ ಕಚೇರಿ ಸಭಾಂಗಣದಲ್ಲಿ ತಾಲೂಕು ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಹಾಗೂ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ಡಾ.ಬಿ.ಆರ್. ಅಂಬೇಡ್ಕರ್ ಜಯಂತಿ ಆಚರಿಸಲಾಯಿತು.

ತಹಶೀಲ್ದಾರ್ ಕೆ.ಎನ್. ಮೋಹನ್ ಕುಮಾರ್ ಮಾತನಾಡಿ, ಸಾಮಾಜಿಕ ಸಮಾನತೆ ಸಾಧಿಸಲು ಶಿಕ್ಷಣದ ಪಾತ್ರ ಬಹು ಮುಖ್ಯವಾಗಿದ್ದು, ಡಾ.ಅಂಬೇಡ್ಕರ್ ಸಮಾಜಕ್ಕೆ ನೀಡಿರುವ ಕೊಡುಗೆ ಅಪಾರ ಎಂದರು.

ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕಿ ಪ್ರೀತಿ ಚಿಕ್ಕಮಾದಯ್ಯ ಮಾತನಾಡಿ, ಅಂಬೇಡ್ಕರ್ ಜೀವನ ಚರಿತ್ರೆ ಮತ್ತು ಸಾಧನೆಗಳನ್ನು ಎಲ್ಲರೂ ತಿಳಿದುಕೊಳ್ಳಬೇಕು. ಜೊತೆಗೆ ಅವರ ಆದರ್ಶ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವ ಮೂಲಕ ಅವರಿಗೆ ಗೌರವ ಸಲ್ಲಿಸುವಂತಾಗಬೇಕು ಎಂದರು. ಕಾರ್ಯಕ್ರಮದಲ್ಲಿ ತಾಪಂ ಇಓ ಮಹೇಶ್ ಹೊಳ್ಳ, ತಾಪಂ ಅಧಿಕಾರಿಗಳು, ಸಿಬ್ಬಂದಿ ಭಾಗವಹಿಸಿದ್ದರು.

ಕಾಡಾನೆ ದಾಳಿಗೆ ಅಪಾರ ಬೆಳೆ ನಾಶ

ಮಡಿಕೇರಿ, ಏ.17–ಕರಡಿಗೋಡು ಗ್ರಾಮದಲ್ಲಿ ಕಾಡಾನೆಗಳು ದಾಳಿ ನಡೆಸಿ, ಅಪಾರ ಪ್ರಮಾಣದ ಬೆಳೆ ನಾಶಪಡಿಸಿವೆ.

ಸಿದ್ದಾಪುರ ಕರಡಿಗೋಡು ರಸ್ತೆಯ ಸರಳ ಎಂಬವರಿಗೆ ಸೇರಿದ ಒಂದು ಎಕರೆಯ ಬಾಳೆ, ತೆಂಗು, ಅಡಕೆ, ಗೇಣಸು ಸೇರಿದಂತೆ ಇತರ ಕೃಷಿ ಫಸಲುಗಳನ್ನು ಕಾಡಾನೆಗಳ ಹಿಂಡು ಫಸಲುಗಳನ್ನ ನಾಶಪಡಿಸಿದೆ. ಸ್ಥಳಕ್ಕೆ ಅರಣ್ಯ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ಈ ಭಾಗದಲ್ಲಿ ಹಾಗಲಿನಲ್ಲೇ ಕಾಣಿಸಿಕೊಳ್ಳುತ್ತಿರುವ ಕಾಡಾನೆಗಳ ಹಾವಳಿಯಿಂದ ರೈತರು, ಕಾರ್ಮಿಕರು ತೋಟಕ್ಕೆ ತೆರಳಲು ಸಾಧ್ಯವಾಗದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ದುಬಾರೆ, ಅವರೆಗುಂದ, ಚಿಕ್ಕನಹಳ್ಳಿ ವ್ಯಾಪ್ತಿಯಲ್ಲಿ ಯಾವುದೇ ಅಡೆತಡೆ ಇಲ್ಲದೆ ಬರುವ ಕಾಡಾನೆಗಳು, ಕಾಫಿ ತೋಟಗಳಲ್ಲೇ ಬೀಡುಬಿಟ್ಟು ಅಪಾರ ಫಸಲನ್ನು ನಾಶ ಮಾಡುತ್ತಿವೆ.

ಕಾಡುಪ್ರಾಣಿಗಳ ಹಾವಳಿ ತಡೆಗೆ ಅರಣ್ಯಾಧಿಕಾರಿಗಳು ಶಾಶ್ವತ ಯೋಜನೆ ರೂಪಿಸದೆ ನಿರ್ಲಕ್ಷ್ಯ ತೋರುತ್ತಿರುವ ಹಿನ್ನೆಲೆಯಲ್ಲಿ ಕಾಡಾನೆಗಳು ಕಾಫಿ ತೋಟ ಹಾಗೂ ಗ್ರಾಮಗಳತ್ತ ಮುಖ ಮಾಡುತ್ತಿವೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕಣಿವೆಯಲ್ಲಿ ರಾಮಲಿಂಗೇಶ್ವರ ರಥೋತ್ಸವ



ಕಣಿವೆ ಗ್ರಾಮದಲ್ಲಿ ರಾಮನವಮಿ ಅಂಗವಾಗಿ ಬುಧವಾರ ರಾಮಲಿಂಗೇಶ್ವರ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ಕುಶಾಲನಗರ, ಏ.17–ತಾಲೂಕಿನ ಕಾವೇರಿ ನದಿ ದಂಡೆಯ ರಾಮಸ್ವಾಮಿ ಕಣಿವೆ ಗ್ರಾಮದಲ್ಲಿ ರಾಮನವಮಿ ಅಂಗವಾಗಿ ಬುಧವಾರ ಶ್ರೀ ರಾಮಲಿಂಗೇಶ್ವರ ಬ್ರಹ್ಮ ರಥೋತ್ಸವ ಅದ್ದೂರಿಯಾಗಿ ನಡೆಯಿತು.

ಕೊಡಗು, ಹಾಸನ ಮತ್ತು ಮೈಸೂರು ಜಿಲ್ಲೆಯ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಜಾತ್ರೆಯಲ್ಲಿ ಪಾಲ್ಗೊಂಡು ತೇರು ಎಳೆದರು. ಕಾಶಿಯಿಂದ ಅಂಚೆ ಮೂಲಕ ತರಿಸಿದ್ದ ತೀರ್ಥವನ್ನು ಹೆಬ್ಬಾಲೆ ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ದೇವಸ್ಥಾನ ಸಮಿತಿ ಅಧ್ಯಕ್ಷ ಎಚ್.ಎನ್. ಬಸವರಾಜು, ಕಾರ್ಯದರ್ಶಿ ಎಚ್.ಪಿ. ರಾಜು ನೇತೃತ್ವದಲ್ಲಿ ಮಂಗಳ ವಾದ್ಯದೊಂದಿಗೆ ಮೆರವಣಿಗೆ ಮೂಲಕ ರಾಮಲಿಂಗೇಶ್ವರ ದೇವಸ್ಥಾನಕ್ಕೆ ತರಲಾಯಿತು.

ನಂತರ ದೇವರಿಗೆ ಅಭಿಷೇಕ, ಮಹಾ ಮಂಗಳಾರತಿ ನೆರವೇರಿಸಲಾಯಿತು. ವಿವಿಧ ಪುಷ್ಪ ಧ್ವಜಗಳಿಂದ ಅಲಂಕೃತಗೊಂಡಿದ್ದ ರಥದಲ್ಲಿ ರಾಮ, ಲಕ್ಷ್ಮಣ, ಆಂಜನೇಯಸ್ವಾಮಿ ವಿಗ್ರಹಗಳನ್ನು ಕುಳ್ಳಿರಿಸಿ ರಥಕ್ಕೆ ಪೂಜೆ ಸಲ್ಲಿಸಲಾಯಿತು. ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಕಣಿವೆ ರಾಮಲಿಂಗೇಶ್ವರ ದೇವಸ್ಥಾನ ಸಮಿತಿ ಅಧ್ಯಕ್ಷ ಕೆ.ಎನ್.ಸುರೇಶ್, ಕಾರ್ಯದರ್ಶಿ ಮಾಧವ ನೇತೃತ್ವದಲ್ಲಿ ಉತ್ಸವಗಳು ಜರುಗಿದವು. ಸಮಿತಿ ಮುಖಂಡರಾದ ಆರ್.ಎಸ್.ಲೋಕೇಶ್, ಚಂದ್ರು, ಕೆ.ಎ.ಪದ್ಮಾವತಿ, ಸುಧಾ ಜಯರಾವ್, ಹೇಮರಾಜು, ಕೆ.ಆರ್. ಲೋಕೇಶ್, ಶಿರಗಜೆ ನವೀನ್, ಸಂಪತ್ತು, ರಾಜೇಗೌಡ, ಭಾರದ್ವಾಜ್, ಕೆ.ಸಿ.ನಂಜಂಡಸ್ವಾಮಿ ಇತರರು ಇದ್ದರು.

ದೊಡ್ಡಮೋಳೆ ವ್ಯಾಪ್ತಿ ಶಾಸಕ ಮತಯಾಚನೆ



ಚಾಮರಾಜನಗರ ತಾಲೂಕಿನ ಹೆಬ್ಬಸೂರು ಗ್ರಾಮದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಪರ ಶಾಸಕ ಸಿ.ಪುಟ್ಟರಂಗಶೆಟ್ಟಿ ಮಾತಯಾಚಿಸಿದರು.

ಚಾಮರಾಜನಗರ, ಏ.17–ತಾಲೂಕಿನ ದೊಡ್ಡಮೋಳೆ, ಹೆಬ್ಬಸೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್‌ಬೋಸ್ ಪರ ಶಾಸಕ ಸಿ.ಪುಟ್ಟರಂಗಶೆಟ್ಟಿ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಮನೆ ಮನೆಗೆ ತೆರಳಿ ಮತಯಾಚಿಸಿದರು.

ಇದೇ ವೇಳೆ ಮಾತನಾಡಿದ ಶಾಸಕರು, 2013ರಿಂದ 2018ರವರಗೆ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ನೀಡಿದ್ದಾರೆ. ಕಳೆದ ಬಾರಿ ಆಯ್ಕೆ ಮಾಡಿದ ಬಿಜೆಪಿ ಸಂಸದರು ರಾಜ್ಯದ ಅಭಿವೃದ್ಧಿ ಕುರಿತು ಪ್ರಧಾನಿ ನರೇಂದ್ರ ಮೋದಿ ಮುಂದೆ ಮಾತನಾಡಲಿಲ್ಲ. ಇನ್ನು ದೇಶ ಅಭಿವೃದ್ಧಿ ಆಗುವುದಾದರೆ ಹೇಗೆ? ಎಂದರು.

ಸಂವಿಧಾನ ಹಾಗೂ ಪ್ರಜಾಪ್ರಭುತ್ವ ಉಳಿವು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ. ಕ್ಷೇತ್ರದ ಮತದಾರರು ಕಾಂಗ್ರೆಸ್ ಅಭ್ಯರ್ಥಿಯನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸಿ, ತಮ್ಮ ಸೇವೆಗೆ ಅವಕಾಶ ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳಾದ ಚಿಕ್ಕಮಹದೇವ್, ಆರ್.ಮಹದೇವ್, ಚಾಮರಾಜನಗರ ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಕಾಗಲವಾಡಿ ಚಂದ್ರು, ಮರಿಸ್ವಾಮಿ, ವೀರಭದ್ರಸ್ವಾಮಿ, ಕೋಡಿಮೋಳೆ ಪ್ರಕಾಶ್, ಗೋವಿಂದಶೆಟ್ಟಿ, ಅಸಂಘಟಿತ ಕಾರ್ಮಿಕ ಸಂಘದ ಅಧ್ಯಕ್ಷ ಸ್ವಾಮಿ, ನಂಜುಂಡಸ್ವಾಮಿ, ಜಿಪಂ ಮಾಜಿ ಉಪಾಧ್ಯಕ್ಷ ಅಯ್ಯನಪುರ ಶಿವಕುಮಾರ್, ಹೆಬ್ಬಸೂರು ಉಮೇಶ್, ಬ್ಯಾಡಮೂಡ್ಲು ನಾಗರಾಜು, ರಾಜಣ್ಣ ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ದೊರೆಸ್ವಾಮಿ, ರವಿಗೌಡ ಹಾಜರಿದ್ದರು.

ಏ.23ರಂದು ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ

ಅಗತ್ಯ ಸಿದ್ಧತೆ ಕೈಗೊಳ್ಳಲು ಅಧಿಕಾರಿಗಳಿಗೆ ಡಿಸಿ ಶಿಲ್ಪನಾಗ್ ಸೂಚನೆ

ಚಾಮರಾಜನಗರ, ಏ.17–ಏ.23ರಂದು ನಡೆಯಲ್ಲಿರುವ ಯಳಂದೂರು ತಾಲೂಕಿನ ಇತಿಹಾಸ ಪ್ರಸಿದ್ಧ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮರಥೋತ್ಸವಕ್ಕೆ ಅಗತ್ಯ ಸಿದ್ಧತೆ ಕೈಗೊಳ್ಳಬೇಕು ಎಂದು ಜಿಲ್ಲಾಧಿಕಾರಿ ಶಿಲ್ಪನಾಗ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬುಧವಾರ ನಡೆದ ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ ಸಿದ್ಧತಾ ಸಭೆಯಲ್ಲಿ ಮಾತನಾಡಿದ ಅವರು, ದೇವಾಲಯ ಆವರಣ, ರಥದ ಬೀದಿ, ಕಲ್ಯಾಣಿ ಬಳಿ, ಕಮರಿ ಹಾಗೂ ದಾಸೋಹ ಆವರಣ ಹಾಗೂ ಪಾರ್ಕಿಂಗ್ ವ್ಯವಸ್ಥೆ ಮತ್ತಿತರ ಜನನಿಬಿಡ ಸ್ಥಳಗಳಲ್ಲಿ ಬಿಗಿಬಂದೋಬಸ್ತ್ ಸಮರ್ಪಕವಾಗಿರಬೇಕು. ಯಾವುದೇ ಲೋಪಗಳಿಗೆ ಆಸ್ಪದವಾಗದಂತೆ ಎಚ್ಚರ ವಹಿಸಬೇಕು. ಸಾರ್ವಜನಿಕರಿಂದ ಯಾವುದೇ ದೂರುಗಳು ಬರದಂತೆ ಅಧಿಕಾರಿಗಳು ಕ್ರಮವಹಿಸಬೇಕು ಎಂದು ತಿಳಿಸಿದರು.

ಚುನಾವಣಾ ಮಾದರಿ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ಪಾರ್ಕಿಂಗ್ ಸ್ಥಳ ಸೇರಿದಂತೆ ಇತರೆಡೆ ರಾಜಕೀಯ ಪ್ರೇರಿತವಾದ ಯಾವುದೇ ಬ್ಯಾನರ್, ಭಿತ್ತಿಪತ್ರಗಳ ಅಳವಡಿಕೆಗೆ ಅವಕಾಶ ನೀಡಬಾರದು. ಪ್ರವಾಸಿ ಮಂದಿರದಲ್ಲೂ ಯಾವುದೇ ರಾಜಕೀಯ ವ್ಯಕ್ತಿಗಳಿಗೆ ಪ್ರವೇಶಕ್ಕೆ ಅವಕಾಶವಿಲ್ಲ. ರಥೋತ್ಸವ ಸಂದರ್ಭದಲ್ಲಿ ಭಕ್ತರಿಗೆ ವಿತರಿಸುವ ಪಾನಕ, ಪ್ರಸಾದ ಹಂಚಿಕೆ ಹಾಗೂ ವಿತರಣೆಗೆ ಸಂಬಂಧಪಟ್ಟ ಸಹಾಯಕ ಚುನಾವಣಾಧಿಕಾರಿಗಳಿಂದ ಅನುಮತಿ ಪತ್ರ ಪಡೆಯುವುದು ಕಡ್ಡಾಯ ಎಂದರು.

ರಥೋತ್ಸವ ಹಿನ್ನೆಲೆಯಲ್ಲಿ ಏ.21ರಿಂದ 25ರವರೆಗೆ ಭಕ್ತರು ಕ್ಷೇತ್ರಕ್ಕೆ ಹೋಗಿಬರಲು ಕೆಎಸ್‌ಆರ್‌ಟಿಸಿಯಿಂದ ಹೆಚ್ಚಿನ ಬಸ್‌ಗಳ ನಿಯೋಜಿಸಬೇಕು. ವಿದ್ಯುತ್ ವ್ಯತ್ಯಯವಾಗದಂತೆ ನೋಡಿಕೊಳ್ಳಬೇಕು. ಸ್ವಚ್ಛತಾ ಕಾರ್ಯಗಳಿಗೆ ವಿಶೇಷ ಗಮನ ಹರಿಸಬೇಕು. ಹಳ್ಳಗಳಿಂದ ಕೂಡಿದ ರಸ್ತೆಗಳನ್ನು ಗ್ರಾವೆಲ್ ತುಂಬಿಸಿ ವಾಹನಗಳ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು. ಯಾವುದೇ ಪ್ಲಾಸ್ಟಿಕ್ ಬಳಕೆಗೆ ಅವಕಾಶ ನೀಡಬಾರದು ಎಂದು ಸೂಚಿಸಿದರು.

ಈ ಬಾರಿ ಬಿಸಿಲಿನ ತಾಪ ಹೆಚ್ಚಿರುವುದರಿಂದ ಭಕ್ತರಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕೈಗೊಳ್ಳಬೇಕು. ಕುಡಿಯುವ ನೀರಿನ ಪರಿಶುದ್ಧತೆ ತಪಾಸಣೆ ಕೈಗೊಂಡು ಜಾತ್ರೆಗೆ ಒಂದು ದಿನ ಮೊದಲೇ ನೀರಿನ ಮಾದರಿಯನ್ನು ಪರೀಕ್ಷೆಗೆ ಕಳುಹಿಸಬೇಕು. ಲಭ್ಯವಿರುವ ಬೋರ್‌ವೆಲ್‌ಗಳನ್ನು ಸುಸ್ಥಿತಿಯಲ್ಲಿಟ್ಟುಕೊಳ್ಳಬೇಕು. ಮಜ್ಜಿಗೆ ಹಾಗೂ ಪಾನಕಕ್ಕೆ ಶುದ್ಧ ನೀರು ಬಳಸುವಂತೆ ತಿಳಿಹೇಳಬೇಕು ಎಂದು ಹೇಳಿದರು.

ಸಭೆಯಲ್ಲಿ ಜಿಪಂ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉದ್ದೇಶ, ಉಪವಿಭಾಗಾಧಿಕಾರಿ ಶಿವಮೂರ್ತಿ, ತಹಶೀಲ್ದಾರ್ ನಿಸರ್ಗಪ್ರಿಯ, ಜಿಲ್ಲಾ ಆರೋಗ್ಯಾಧಿಕಾರಿ ಡಾ.ಚಿದಂಬರ, ಪ್ರಾದೇಶಿಕ ಸಾರಿಗೆ ಅಧಿಕಾರಿ ಗಾಯತ್ರಿ, ವಲಯ ಅರಣ್ಯಾಧಿಕಾರಿ ನಾಗೇಂದ್ರ ನಾಯಕ್, ದೇವಾಲಯ ಅರ್ಚಕ ರವಿಕುಮಾರ್, ಕಾರ್ಯನಿರ್ವಾಹಕಾಧಿಕಾರಿ ಮೋಹನ್ ಕುಮಾರ್, ಕೆಎಸ್‌ಆರ್‌ಟಿಸಿ, ಅಗ್ನಿಶಾಮಕ ದಳದ ಅಧಿಕಾರಿಗಳು ಉಪಸ್ಥಿತರಿದ್ದರು.



ಚಾಮರಾಜನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಬಿಳಿಗಿರಿರಂಗನಾಥಸ್ವಾಮಿ ರಥೋತ್ಸವ ಸಿದ್ಧತಾ ಸಭೆ ಜಿಲ್ಲಾಧಿಕಾರಿ ಶಿಲ್ಪನಾಗ್ ಅಧ್ಯಕ್ಷತೆಯಲ್ಲಿ ನಡೆಯಿತು.

ತಾತ್ಕಾಲಿಕ ಆರೋಗ್ಯ ಕೇಂದ್ರ

ಆರೋಗ್ಯ ಇಲಾಖೆ ವತಿಯಿಂದ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆದು, ವೈದ್ಯರು, ಸಿಬ್ಬಂದಿ ತುರ್ತು ವಾಹನ ನಿಯೋಜಿಸಬೇಕು. ಕ್ಷೇತ್ರದಲ್ಲಿ ಪ್ಲಾಸ್ಟಿಕ್ ಬಳಕೆ ನಿಷೇಧವಿರುವುದರಿಂದ ಪರಿಸರ ಸ್ನೇಹಿ ವಸ್ತುಗಳ ಬಳಕೆ ಮಾಡಬೇಕು. ಅರಣ್ಯ ಅಧಿಕಾರಿಗಳು ಈ ಬಗ್ಗೆ ವಿಶೇಷ ಕಾಳಜಿ ವಹಿಸಬೇಕು. ರಥೋತ್ಸವದಂದು ದ್ವಿಚಕ್ರ ವಾಹನವನ್ನು ಬೆಟ್ಟಕ್ಕೆ ನಿಷೇಧಿಸಬೇಕು. ದ್ವಿಚಕ್ರ ವಾಹನ ಸವಾರರು ಅರಣ್ಯ ಇಲಾಖೆಯ ಚೆಕ್‌ಪೋಸ್ಟ್ ಬಳಿ ನಿಲುಗಡೆ ಮಾಡಿ, ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಬೆಟ್ಟಕ್ಕೆ ತೆರಳುವಂತೆ ಸಭೆಯಲ್ಲಿ ನಿರ್ಧರಿಸಲಾಯಿತು.

ನಗರದಲ್ಲಿ ರಾಮನವಮಿ ಆಚರಣೆ



ಚಾ.ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಮುದುಕು ಮಾರಮ್ಮ ದೇವಸ್ಥಾನ ಮುಂಭಾಗ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ರಾಮನವಮಿ ಆಚರಿಸಲಾಯಿತು.

ಚಾಮರಾಜನಗರ, ಏ.17–ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಶ್ರೀ ಮುದುಕು ಮಾರಮ್ಮ ದೇವಸ್ಥಾನ ಮುಂಭಾಗ ಹಿಂದು ಮುಖಂಡರಾದ ಶ್ರೀಕಂಠಸ್ವಾಮಿ, ಕೃಷ್ಣಕುಮಾರ್ ನೇತೃತ್ವದಲ್ಲಿ ಶ್ರೀರಾಮನ ಭಾವಚಿತ್ರಕ್ಕೆ ಪೂಜೆ ಸಲ್ಲಿಸುವ ಮೂಲಕ ಬುಧವಾರ ರಾಮನವಮಿ ಆಚರಿಸಲಾಯಿತು.

ಹಿಂದು ಮುಖಂಡ ಶ್ರೀಕಂಠಸ್ವಾಮಿ ಮಾತನಾಡಿ, ಮರ್ಯಾದ ಪುರುಷೋತ್ತಮ ಶ್ರೀರಾಮನ ಹುಟ್ಟುಹಬ್ಬವೇ ರಾಮನವಮಿಯಾಗಿದ್ದು ಇಂದು ದೇಶಾದ್ಯಂತ ರಾಮನವಮಿಯನ್ನು ಸಡಗರ ಸಂಭ್ರಮದಿಂದ ಆಚರಣೆ ಮಾಡಲಾಗಿದೆ. ಸಕಲ ಗುಣಗಳ ಆದರ್ಶ ಪುರುಷ ಶ್ರೀರಾಮನ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಇದೇ ವೇಳೆ ಚಾ.ನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು, ನಗರಸಭಾ ಮಾಜಿ ಸದಸ್ಯ ಗಣೇಶ್ ದೀಕ್ಷಿತ್, ಶಿವು ವಿರಾಟ್, ಸುದರ್ಶನಗೌಡ, ಮಂಜುನಾಥಗೌಡ, ಬಾಲಸುಬ್ರಹ್ಮಣ್ಯ, ನಾಗು ರಮೇಶ್, ಶಿವಣ್ಣ, ಚಂದ್ರಶೇಖರ್, ವರದನಾಯಕ, ಮೂಡ್ಲುಪುರ ನಂದೀಶ್, ಜಯಕುಮಾರ್, ಪಿ.ರಂಗಸ್ವಾಮಿ ಇತರರು ಹಾಜರಿದ್ದರು.

ಚಾ.ನಗರದ ವಿವಿಧ ಬಡಾವಣೆಯಲ್ಲಿ ಬಿಜೆಪಿ ಮತಯಾಚನೆ

ಚಾಮರಾಜನಗರ, ಏ.17–ನಗರದ ವಿವಿಧ ಬಡಾವಣೆಗಳಲ್ಲಿ ಬಿಜೆಪಿ ನಗರ ಮಂಡಲ ಮುಖಂಡರು, ನಗರಸಭಾ ಸದಸ್ಯರು ಹಾಗೂ ಕಾರ್ಯಕರ್ತರು ಮನೆ ಮನೆಗೆ ತೆರಳಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪರ ಮತಯಾಚಿಸಿದರು.

ನಗರದ 17,18 ಹಾಗೂ 19ನೇ ವಾರ್ಡ್‌ಗಳ ವಿವಿಧ ಬಡಾವಣೆಗಳಿಗೆ ಬಿಜೆಪಿ ಮುಖಂಡರಾದ ನಿಜಗುಣರಾಜು, ಜಿ.ನಾಗಶ್ರೀ ಪ್ರತಾಪ್, ನಗರಸಭಾ ಮಾಜಿ ಅಧ್ಯಕ್ಷೆ ಆಶಾ ನಟರಾಜು, ನಗರ ಮಂಡಲ ಅಧ್ಯಕ್ಷ ಶಿವರಾಜ್ ನೇತೃತ್ವದಲ್ಲಿ ಭೇಟಿ ನೀಡಿ, ಮತಯಾಚಿಸಲಾಯಿತು. ಇದಕ್ಕೂ ಮೊದಲು ಸಂತೇಮರಹಳ್ಳಿ ರಸ್ತೆಯ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗ ಪ್ರಚಾರಕ್ಕೆ ಚಾಲನೆ ನೀಡಲಾಯಿತು. ಬಳಿಕ ರೈಲ್ವೆ ಬಡಾವಣೆ, ನಾಯಕರ ಬೀದಿ, ಉಪ್ಪಾರರ ಬೀದಿ ಸೇರಿದಂತೆ ಅನೇಕ ಬಡಾವಣೆಗಳಲ್ಲಿ ಪ್ರಚಾರ ನಡೆಸಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಮಾಜಿ ಉಪಾಧ್ಯಕ್ಷೆ ಸುಧಾ, ಸದಸ್ಯರಾದ ಲೋಕೇಶ್ವರಿ, ರಾಘವೇಂದ್ರ, ಕುಮುದಾ ಕೇಶವಮೂರ್ತಿ, ಜಿಲ್ಲಾ ಕಾರ್ಯದರ್ಶಿ ನಟರಾಜು, ಯುವ ಮೋರ್ಚಾ ಅಧ್ಯಕ್ಷ ಸೂರ್ಯ ಬಾಲರಾಜು, ಎಸ್ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಜಯಸುಂದರ್, ಎಸ್ಸಿ ಮೋರ್ಚಾ ಅಧ್ಯಕ್ಷ ಚಂದ್ರಶೇಖರ್, ಜಿಲ್ಲಾ ಉಪಾಧ್ಯಕ್ಷ ವಿರಾಟ್ ಶಿವು, ನಗರಸಭಾ ಮಾಜಿ ಸದಸ್ಯೆ ವನಾಜಾಕ್ಷಿ, ರಾಜೇಶ್ವರಿ, ಮುಖಂಡರಾದ ಕಿಲಗೆರೆ ಬಸವರಾಜು, ಕೂಸಣ್ಣ, ಫೋಟೋ ಕೃಷ್ಣ, ಬುಲೆಟ್ ಚಂದ್ರು, ಮಾಧ್ಯಮ ಸಹ ವಕ್ತಾರ ಎನ್.ಮಂಜುನಾಥ್, ಶಿವು ರಾಮಸಮುದ್ರ, ಎಸ್ಸಿ ಮೋರ್ಚಾ ಅಧ್ಯಕ್ಷ ರಾಮಸಮುದ್ರ ಪರಶಿವಯ್ಯ, ಕೇಬಲ್ ರಂಗಸ್ವಾಮಿ, ಮಹೇಶ್, ಸಹ ಪ್ರಮುಖ್ ಆಶ್ವಿನ್, ಮೊದಲಾದವರು ಇದ್ದರು.



ಚಾಮರಾಜನಗರದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪರ ಪಕ್ಷದ ಮುಖಂಡರಾದ ನಿಜಗುಣರಾಜು, ಜಿ.ನಾಗಶ್ರೀ ಪ್ರತಾಪ್, ನಗರಸಭಾ ಮಾಜಿ ಅಧ್ಯಕ್ಷೆ ಆಶಾನಟರಾಜು, ನಗರ ಮಂಡಲ ಅಧ್ಯಕ್ಷ ಶಿವರಾಜ್ ನೇತೃತ್ವದಲ್ಲಿ ಮತಯಾಚಿಸಲಾಯಿತು.

ಇಂದು ಮತದಾನ ಕಾಲ್ನಡಿಗೆ ಜಾಥಾ

ಚಾಮರಾಜನಗರ: ಏ.18ರಂದು ಬೆಳಗ್ಗೆ 10 ಗಂಟೆಗೆ ನಗರದ ಚಾಮರಾಜೇಶ್ವರ ದೇವಸ್ಥಾನ ಮುಂಭಾಗ ಕಾಲ್ನಡಿಗೆ ಜಾಥಾ ಮೂಲಕ ಮತದಾನ ಜಾಗೃತಿ ಮೂಡಿಸಲಾಗುವುದು. ಜಾಥಾಗೆ ಜಿಲ್ಲಾ ಸ್ವೀಪ್ ಸಮಿತಿ ಅಧ್ಯಕ್ಷರಾದ ಜಿಪಂ ಸಿಇಓ ಆನಂದ್ ಪ್ರಕಾಶ್ ಮೀನಾ ಚಾಲನೆ ನೀಡಲಿದ್ದಾರೆ. ಜಾಥಾ ಚಾಮರಾಜೇಶ್ವರ ದೇವಸ್ಥಾನದಿಂದ ಸಂತೇಮರಹಳ್ಳಿ ವೃತ್ತ, ಪಚ್ಚಪ್ಪ ವೃತ್ತ, ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ ಮಾರ್ಗವಾಗಿ ಚಾಮರಾಜೇಶ್ವರ ದೇವಸ್ಥಾನದಲ್ಲಿ ಅಂತ್ಯಗೊಳ್ಳಲಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕಾಧಿಕಾರಿ ವಿ.ಕೃಷ್ಣಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾದಯಾತ್ರೆ ಮೂಲಕ ಬಾಲರಾಜು ಪ್ರಚಾರ

ಕೊಳ್ಳೇಗಾಲ, ಏ.17–ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪಾದಯಾತ್ರೆ ಮೂಲಕ ತೆರಳಿ ಮತಯಾಚಿಸಿದರು.

ಪಟ್ಟಣದ ಎಂಜಿಎಸಿ ಮೈದಾನ, ಎಪಿಎಂಸಿ ಆವರಣ, ಬಸ್ ನಿಲ್ದಾಣ ಹಾಗೂ ಹೋಟೆಲ್‌ಗಳ ಬಳಿ ತೆರಳಿ ಮತಯಾಚನೆ ಮಾಡಿದರು. ಇದೇ ವೇಳೆ ಮಾತನಾಡಿದ ಬಾಲರಾಜು, ದೇಶದಲ್ಲಿ ಎಲ್ಲಾ ಮತದಾರರು ಬಿಜೆಪಿ ಸರ್ಕಾರದ ಕಾರ್ಯಕ್ರಮಗಳನ್ನು ಮೆಚ್ಚಿಕೊಂಡಿದ್ದಾರೆ. ಮತ್ತೊಮ್ಮೆ ನರೇಂದ್ರ ಮೋದಿ ಅವರನ್ನು ಪ್ರಧಾನಿ ಮಾಡುವ ಸಲುವಾಗಿ ಚಾ.ನಗರ ಲೋಕಸಭೆ ಕ್ಷೇತ್ರದ ಜನ ನನಗೆ ಮತ ಹಾಕುವ ಮೂಲಕ ಬೆಂಬಲಿಸಲಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಬಿಜೆಪಿ ನಗರ ಮಂಡಲ ಅಧ್ಯಕ್ಷ ಪರಮೇಶ್ವರಯ್ಯ, ಬೂದಿತಿಟ್ಟು ಶಿವಕುಮಾರ್, ಎಸ್ಸಿ ಮೋರ್ಚಾ ಅಧ್ಯಕ್ಷ ಸಿದ್ದಪ್ಪಾಜಿ, ನಗರಸಭೆ ಸದಸ್ಯರಾದ ಚಿಂತು ಪರಮೇಶ್, ರಾಮಕೃಷ್ಣ, ಮಾಜಿ ಸದಸ್ಯ ಮಧುಚಂದ್ರ ಇತರರು ಇದ್ದರು.



ಕೊಳ್ಳೇಗಾಲದಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಪಾದಯಾತ್ರೆ ಮೂಲಕ ತೆರಳಿ ಮತಯಾಚಿಸಿದರು.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821– 2496522/23

AFFOTDABL HOME LOAN
ಮುಡಾ, ರೆವಿನ್ಯೂ, ಎ ಖಾತೆ, ನಗರ ಸಭಾ, ಪಂಚಾಯಿತಿ ಖಾತೆ 9 & 11ಎ, 11ಬಿ ಖಾತೆ
ಮನೆ ತೆಗೆದುಕೊಳ್ಳುವುದಕ್ಕೆ, ಕಟ್ಟುವುದಕ್ಕೆ, ಬ್ಯಾಲೆನ್ಸ್ ಟ್ರಾನ್ಸ್‌ಫರ್, ಪ್ಲಾಟ್ ಪರ್ಚೆಸ್, ವ್ಯಾಪಾರ ಮಾಡುತ್ತಿದ್ದಲ್ಲಿ ಮತ್ತು ಪರ್ಸನಲ್ ಲೋನ್‌ಗಳು ಸಿಗುತ್ತದೆ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ * ಎಲ್ಲಾ ಷರತ್ತುಗಳು ಅನ್ವಯಿಸುತ್ತವೆ.
Ph:8296967769

ಬಾಡಿಗೆಗೆ ಎಲ್ಲಾ ಸೌಕರ್ಯಗಳಿರುವ ಮಳಿಗೆಗಳು ದೊರೆಯುತ್ತವೆ. ಗೋಕುಲಂ, 3ನೇ ಹಂತದ ಶ್ರೀ ಕೃಷ್ಣನ ದೇವಸ್ಥಾನದ ಆವರಣದಲ್ಲಿ. ಸಂಪರ್ಕಿಸಿ
9880707190

ನಿವೇಶನ ಮಾರಾಟಕ್ಕಿದೆ
30x40 ಭೈರವ ಎನ್‌ಕ್ಲೇವ್ ಗಣಗರ ಹುಂಡಿ ಗದ್ದಿಗೆ ಮೈನ್ ರೋಡ್, ಬೋಗಾದಿ ರಿಂಗ್ ರೋಡ್ 3 ಕಿ.ಮೀ (ಮಧ್ಯವರ್ತಿಗಳು ಕ್ಷಮಿಸಿ)
8660726140

ವೃದ್ಧಾಶ್ರಮ
ಹಿರಿಯ ಜೀವಗಳಿಗೆ, ಹಾಸಿಗೆ ಹಿಡಿದ ವೃದ್ಧರನ್ನು, ಪಾರ್ಶ್ವವಾಯು ಪೀಡಿತರು, ಹಾಗೂ ಕೈಲಾಗದ ವಯೋ ವೃದ್ಧರನ್ನು ಮನೆಯಂತೆಯೇ ನೋಡಿ ಕೊಳ್ಳುತ್ತಿರುವ ಸಂಸ್ಥೆ ನಮ್ಮ ಮೈಸೂರಿನಲ್ಲಿ ಊಟ, ವಸತಿ, ವೈದ್ಯಕೀಯ ಸೌಲಭ್ಯದೊಂದಿಗೆ ಇಚ್ಛೆಯುಳ್ಳವರು ಸಂಪರ್ಕಿಸಿ
9110455297 | 9591557126

ಮನೆ ಮಾರಾಟಕ್ಕಿದೆ
55x45 ಅಳತೆಯ ಕಟ್ಟಡದ ಅರ್ಧಭಾಗ 21x45 ಅಳತೆಯ 2 ಅಂತಸ್ತಿನ ಮನೆ ತ್ಯಾಗರಾಜ ರಸ್ತೆ, 8ನೇ ಕ್ರಾಸ್, ಅಗ್ರಹಾರ, ಮೈಸೂರು
9448442226
6361637505

WANTED
A reputed ladge in the heart of the city is looking for a receptionist role. only experience person
9663747452
9739742344

ಮನೆಯನ್ನು ಕಟ್ಟಿಕೊಡಲಾಗುತ್ತದೆ
ಮೈಸೂರು, ಕೆ.ಆರ್.ಪೇಟೆ, ಕೆ.ಆರ್.ನಗರ, ಹಾಸನ, ಚಾಮರಾಜನಗರ, ಮಂಡ್ಯ ಎಲ್ಲಾ ಸಿಟಿ ಹಾಗೂ ಹಳ್ಳಿಗಳಲ್ಲಿ ಕಟ್ಟಡವನ್ನು ಕಟ್ಟಿ ಕೊಡಲಾಗುತ್ತದೆ. ಒಂದು ಚದರಕ್ಕೆ 1,75000/–
9620377533

ಸಂಧ್ಯಾ ಸುರಕ್ಷಾ ಟ್ರಸ್ಟ್, ಜಿಲ್ಲಾ ಬ್ರಾಹ್ಮಣ ಮಹಾಸಭಾ (ರಿ)
ತ್ರಿಮತಸ್ಥ ಬ್ರಾಹ್ಮಣ ದಂಪತಿಗಳಿಗೆ ಸಾಮೂಹಿಕ ಷಷ್ಠ್ಯಬ್ದಿ ಪೂರ್ತಿ ಶಾಂತಿ ಕಾರ್ಯಕ್ರಮ ದಿನಾಂಕ: 11–05–2024 ಹಾಗೂ 12–05–2024 ರಂದು ಆಸಕ್ತ ದಂಪತಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಲು ಕರೆಮಾಡಿ
8088799540
8861998817

ಹೌಸ್ ಕೀಪಿಂಗ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ.
ಊಟ ಮತ್ತು ವಸತಿ ಉಚಿತ
7411252095
9148631242

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
6361056646, 7676844160

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲ್ಯಾನ್ ನಿಮ್ಮದು. ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50–50 ಅಥವಾ ಬಂಡವಾಳ ನಿಮ್ಮದು, ಬ್ಯುಸಿನೆಸ್ ಪ್ಲ್ಯಾನ್ ನಮ್ಮದು. ಸಂಪರ್ಕಿಸಿ:
Mob: 9901080314



ಸ್ಕೂಲ್ ಯೂನಿಫಾರಂ ಹೋಲ್‌ಸೇಲ್ ಬೆಲೆಯಲ್ಲಿ
ಸದ್ವಿದ್ಯ, ಅಮೃತಮಯಿ, ನಟರಾಜ ಕಾನ್ವೆಂಟ್, ನಳಂದ, ಮರಿಮಲ್ಲಪ್ಪ, ಅವಿಲ, ರೋಟರಿವೆಸ್ಟ್, ಆದರ್ಶ, ಸೆಂಟ್‌ಮೇರೀಸ್, ಸೆಂಟ್ ರೋಸೆಲೋ
ಭಾವಸಾರ್ ಶ್ರೀಗಣೇಶ್
ಅಗ್ರಹಾರ, ಬಸವೇಶ್ವರ ರಸ್ತೆ 5ನೇ ಕ್ರಾಸ್, ಮೈಸೂರು

ಆನಂದ ಮಾರ್ಗ ಶಾಲೆ (ಕರ್ನಾಟಕ ಸರ್ಕಾರದಿಂದ ಮಾನ್ಯತೆ ಪಡೆದಿದೆ)
#7, 2ನೇ ಮುಖ್ಯರಸ್ತೆ, 8ನೇ ಅಡ್ಡರಸ್ತೆ, ಕಾಮಾಕ್ಷಿ ಆಸ್ಪತ್ರೆ ರಸ್ತೆ, ಸರಸ್ವತಿಪುರಂ, ಮೈಸೂರು–09
ಪ್ರವೇಶಾತಿ ಆರಂಭವಾಗಿದೆ ಡೇ ಕೇರ್, ನರ್ಸರಿ, ಎಲ್ ಕೆ ಜಿ, ಯುಕೆಜಿ, ತರಗತಿಗಳಿಗೆ ಸಂಪರ್ಕಿಸಿ: ಬೆ.9.30 ರಿಂದ 3 ರವರೆಗೆ
9036955964, 9620648627

ಸುಗ್ಗಿ ರಿಯಲ್ ಎಸ್ಟೇಟ್
ಸೈಟು ಮಾರಾಟಕ್ಕಿದೆ 40x60 ದಕ್ಷಿಣ ದಿಕ್ಕು, ಬಾಪೂಜಿನಗರ, ಪಾರ್ಕ್ ಎದುರು, 40 ಅಡಿ ರಸ್ತೆ 30x40 ದಕ್ಷಿಣ ದಿಕ್ಕು, ಆನಂದನಗರ, ರಸ್ತೆ ಕೊನೆಗೆ
9945148025

SITES for SALE
JP Nagar Ring Road
20 x 30 - 17 Lakhs, 30 x 40 - 33 Lakhs, Near Gurur Bus Stop, Ramabainagar,Mysore.
DTCP approved (Corporation limits) 1.5 Kms from JP Nagar Ring Road
8660105902

40x60
Vijayanagar 4th Stage
West Facing, MUDA,3690, Price - 1.20 Cr
40 Feet Road
8660105902

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9108566022

ಬೋಳು ತಲೆಯ ಸಮಸ್ಯೆಯೇ?



ಕೂದಲಿಗೆ ನೈಸರ್ಗಿಕವಾಗಿ ಪರಿಹಾರ ಕಡಿಮೆ ಬೆಲೆಯಲ್ಲಿ ಹೇರ್ ಪ್ಯಾಚ್‌ಗಳು ದೊರೆಯುತ್ತವೆ.
SMART HAIR FIXING
574, 9th Cross, Aniketana Road, kuvempunagar, Mysuru
MYSURU 9611028523 MANGALORE 9343142258

Aquaguard & Kent Sales and Service
Service Charge: 300/-
9901200444

REQUIRED
For a Reputed Firm in Hebbal Industrial Estate, Mysore.
1. MARKETING EXECUTIVE(MALE) - 3 Nos
Qualification:ITI/Diploma/Any Degree
Experience: Minimum 1-2years/ Fresher also Can apply. Excellent Communication in Kannada/English/Hindi.
Salary :- Rs.20,000 - Rs.25,000/-
99720 29007

REQUIRED
For a Reputed Firm in Hebbal Industrial Estate, Mysore.
1. OFFICE ASSISTANT(Female) - 1No
Qualification : B.Com., B.Sc, M.Com
Experience : Minimum 1-2years
Excellent Communication in Kannada English, Hindi. Salary - Rs. 15,000/-
99720 29007

ಪಾರ್ಟ್‌ಟೈಮ್ ಕೆಲಸ
ರೆಡಿಮೇಡ್ ಅಂಗಡಿ ಹೆಲ್ಪರ್ 30 ವರ್ಷ ಒಳಗೆ ಲೇಡಿಸ್ ಮಾತ್ರ
3 pm to 8 pm 1 post
4 pm to 8.30 pm 1 post
ಅನುಭವ ಬೇಕಿಲ್ಲ. ಅಗ್ರಹಾರ 101 ಗಣಪತಿ ದೇವಸ್ಥಾನ ಹಿಂಭಾಗ, ಬಸವೇಶ್ವರ ರಸ್ತೆ, 5ನೇ ಕ್ರಾಸ್, ಮೈಸೂರು
7975893679

ಬೇಕಾಗಿದ್ದಾರೆ
ಮೈಸೂರು ಒಂಟಿಕೊಪ್ಪಲ್‌ನಲ್ಲಿರುವ ಮನೆಗೆ 45 ವರ್ಷದೊಳಗಿನ ಹೆಂಗಸರು ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಬೆಳಿಗ್ಗೆ 8 ರಿಂದ 3 ಗಂಟೆಯವರೆಗೆ
9916623340

TEACHER WANTED (Only Female)
GAYATHRI VIDYALAYA, Hosa Undavadi, K.R. Sagara, S.R. Patna Taluk, Mandya Dist.,
Ph : 88929 27318 / 81830 54747
- B.Sc., B.Ed., - 2 Nos.
- D.Ed., any subject - 2 Nos.
- M.A., B.Ed., in Social - 2 Nos.
- Montessori Teachers - 3 Nos.
- Female P.E. Teacher - 1 No.
- Clerk - 1 No.

ತಕ್ಷಣ ಬೇಕಾಗಿದ್ದಾರೆ
Part Time / Full Time
SOLAR SERVICE CENTER & GAS-SAFE
Customer Service Officer

EDUCATION	Duty Hours	Salary
SSLC,PUC,ITI, DIP,DEGREE	4 HOURS 8 hOURS	8000/- to 16000/-

Receptionist & Team Leader
Android ಮೊಬೈಲ್ ಹೊಂದಿರಬೇಕು
9986621226

ಬೇಕಾಗಿದ್ದಾರೆ
ವಾಹನಗಳ ವಾಟರ್ ಸರ್ವೀಸ್ ಸ್ಟೇಷನಗೆ ನುರಿತ ಕೆಲಸಗಾರರು ಬೇಕಾಗಿದ್ದಾರೆ ವಸತಿ ಸೌಲಭ್ಯ ಲಭ್ಯವಿದೆ
ಕೂಡಲೇ ಸಂಪರ್ಕಿಸಿ:
94495 14889
83108 14289

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಿವಾಹ ಭಾಗ್ಯ
MRJ ಮ್ಯಾಟ್ರಿಮೋನಿ
ಎಲ್ಲಾ ಜಾತಿಯ ವಧು / ವರರಿಗಾಗಿ ಸಂಪರ್ಕಿಸಿ:
1) ಮೊದಲನೆ ಮದುವೆ
2) ಎರಡನೆ ಮದುವೆ
3) ವಿಧವೆ / ವಿದುರರು
FREE REGISTRATION
8904890413

SITE FOR SALE
30x40
Bhavani Enclave Adjucent to KNS Calisto Somanatha Nagara
9844395913

ಮನೆ ಸಾಲ
ಜನಮಿತ್ರ ಫಿನ್ ಸರ್ವ್ ಪ್ರೈ.ಲಿ.
2921/ಎ, ಸರಸ್ವತಿಪುರಂ, ಮೈಸೂರು
ನಾವು ನ್ಯಾಷನಲೈಸ್ಡ್ ಮತ್ತು ಎನ್.ಬಿ.ಎಫ್.ಸಿ ಬ್ಯಾಂಕ್‌ಗಳೊಂದಿಗೆ ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಯಾರಿಗಾದರು ಮನೆ ಕಟ್ಟಲು, ಸೈಟ್ ಖರೀದಿಸಲು, ಮನೆ ಖರೀದಿಸಲು ಹಾಗೂ ಮನೆಯ ಮೇಲೆ ಸಾಲ ಸೌಲಭ್ಯ ಕೊಡಿಸಲಾಗುತ್ತದೆ. 11B, 9 & 11 A ಮುಡಾ ಮತ್ತು ಕಾರ್ಪೋರೇಷನ್ ಮತ್ತು ರೆವಿನ್ಯೂ ಖಾತೆಗಳಿಗೆ ಲೋನ್ ಮಾಡಿ ಕೊಡಲಾಗುವುದು
8088647887

WANTED
Teaching staff for Reputed Institution (Experience Preferred) for all subjects. Transport facilities available. Drop your resume through Whatsapp or Contact
8971577685, 9980631121

ಸುವರ್ಣ ಯಾತ್ರ
1. ನೇಪಾಳ ಪಶುಪತಿನಾಥ ಅಯೋಧ್ಯ ಮುಕ್ತಿನಾಥ ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 29–4–24 (9 ದಿನಗಳು)
2. ಚಾರ್ ಧಾಮ್ ಯಾತ್ರ ಕೇದಾರ್‌ನಾಥ್, ಬದ್ರಿನಾಥ್, ಗಂಗೋತ್ರಿ ಯಮುನೋತ್ರಿ, ಹರಿದ್ವಾರ್, ದೇಹಲಿ 13 ದಿನಗಳು 22–5–24 ಹಾಗೂ 12–6–24
6360146483
8660233673

ಕೆಲಸಕ್ಕೆ ಬೇಕಾಗಿದ್ದಾರೆ
ಕಲೆಕ್ಷನ್ ಎಕ್ಸಿಕ್ಯೂಟಿವ್ (ರಿಕವರಿ ಏಜೆನ್ಸಿ) ನಾಗಮಂಗಲ, ಮಂಡ್ಯ, ಮಳವಳ್ಳಿ
9972044442

ಕೃಷಿ ಭೂಮಿ ಬೇಕಾಗಿದೆ
ಹಂಪಾಪುರ ಮತ್ತು ಅಂತರಸಂತೆ ನಡುವೆ 1 ರಿಂದ 2 ಎಕರೆ ಬೇಕಾಗಿದೆ. ತಕ್ಷಣ ಸೆಟ್ಲಮೆಂಟ್‌ಗೆ ಸಂಪರ್ಕಿಸಿ: ಬೈರೇಗೌಡ
9379633981

DTCP SITES FOR SALE
DTCP Sites
Rs. 699 per sq.ft., Near Jayapura, H.D. Kote Road, Mysore.
9590491194,9606783264

HOUSE SALE near Vijayanagar 4th stg
3 BHK Duplex 3yrs Old House,E/F Door,
Price - 1.10 Cr
Near SVEI School, Panchacharya Layout
8660105902

40x66 Judicial Layout
West Facing, MUDA, Dattagalli
Price - 1.19 Cr
Near Christ Public School
8660105902

ಬೇಕಾಗಿದ್ದಾರೆ
ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡಲು ಯುವಕ / ಯುವತಿಯರು ಬೇಕಾಗಿದ್ದಾರೆ. ಆಕರ್ಷಕ ಸಂಬಳ ಮತ್ತು ESI, PF ನೊಂದಿಗೆ ಉಚಿತ ವಸತಿ ಸೌಲಭ್ಯವಿರುತ್ತದೆ. ಸ್ಥಳ: ಬಂಡಿಪಾಳ್ಯ, ಮೈಸೂರು.
9739294107, 8951715624

WANTED
B.Com. Graduates with Tally knowledge to work in Auditor Office at Mysore. Share your resume to:
hrmsurya21@gmail.com

ಕೆಲಸಕ್ಕೆ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ (ಪುರುಷರು): ತಾಂಡ್ಯ ಇಂಡಸ್ಟ್ರಿಯಲ್ ಏರಿಯಾ, ಕಡಕೊಳ ಇಂಡಸ್ಟ್ರಿಯಲ್ ಏರಿಯಾ, ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ, ಡಿ. ಅರಸು ರಸ್ತೆ, ಬಂಡಿಪಾಳ್ಯ (ಆರ್.ಎಂ.ಸಿ) ಬಂಬೂಬಜಾರ್, ಚಾಮುಂಡಿಪುರಂ, ಹೆಬ್ಬಾಳ್, ವಾಟರ್ ಟ್ಯಾಂಕ್, ಸೂರ್ಯ ಬೇಕರಿ, ಲಕ್ಷ್ಮೀಕಾಂತ ನಗರ, ಶ್ರೀರಂಗಪಟ್ಟಣ, ಪಾಂಡವಪುರ ಹತ್ತಿರ, ಬಸವನ ಗುಡಿ ಸರ್ಕಲ್ (ESI) ಕೊಡಲಾಗುವುದು. ಆಸಕ್ತಿ ಇದ್ದವರು ಸಂಪರ್ಕಿಸಿ:
Mob: 8310098788

ಡ್ರೈವರ್ಸ್ ಬೇಕಾಗಿದ್ದಾರೆ
ಪ್ರಸಿದ್ಧ ವಿದ್ಯಾಸಂಸ್ಥೆಗೆ ಬಸ್ ಡ್ರೈವರ್ಸ್ ಬೇಕಾಗಿದ್ದಾರೆ. ನಿವೃತ್ತ ಕೆ.ಎಸ್.ಆರ್.ಟಿ.ಸಿ. ಡ್ರೈವರ್‌ಗೆ ಮೊದಲ ಆದ್ಯತೆ. ಸಂಪರ್ಕಿಸಿ:
Mob: 9986002207

We are hiring
Sales Boys and Girls
Bolero Driver
Contact: Century Mattress DISTRIBUTOR
Vijayanagar 2nd Stage, Mysore.
Ph: 0821-4286890, 8217411158

SITE FOR SALE
MUDA APPROVED RT NAGAR, MYSORE
30X30 EAST FACE
BROKER EXCUSE
9945215789

SITE FOR SALE
30X40 WEST FACE NEAR SATHAGALLI SATALITE BUS STOP
BROKER EXCUSE
8970537475

We are hiring
Retired officials & housewives in esteemed company. Minimum qualification: 10+ PUC or Diploma. Age between 45 to 65. Earning opportuniteis 20,000 to upto 50,000 PM. Plus incentives & other perks. Type: Part time. Location: Mysore. Contact:
9036076331, 9845210772

Wanted Teachers / Ayah
Little Star ABC Montessori
Any Degree, freshers can apply. English Mandatory, female candidates only, near to Vijayanagar, Mysore. Contact:
8884970282, 0821-2955499

Teachers Required
For Tuition Centre @ Saraswathiuram, Jayanagar, Hootagalli.
PUC - Science & Commerce
High School all subjects.
Mob: 9916777925

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 7204494854



Solar Water Heater SALES & SERVICE
BAJAJ FINSERV
SUNZONE SOLAR SYSTEM
VM Double Road, Kuvempunagar, Mysuru
9845175443

JC Constructions
ನಿಮ್ಮ ಕನಸಿನ ಮನೆ ಅತಿ ಕಡಿಮೆ ಬೆಲೆಗೆ ಕಟ್ಟಬೇಕೇ...? ನಿಮಗೆ ಇದು ಒಂದು ಸುವರ್ಣ ಅವಕಾಶ Architect Designer ಇಂದ ಬಿಲ್ಡಿಂಗ್ ಡಿಸೈನ್ಸ್ ಜೊತೆಗೆ ಮನೆ ನಿರ್ಮಿಸಿ ಕೊಡುತ್ತೇವೆ. ಕೇವಲ ರೂ.1,700/– ರೂ.1,900/– ರೂ.2,200/– ಇಂದ Constructions Start ಮಾಡುತ್ತೇವೆ ಮತ್ತು ಬ್ಯಾಂಕ್ ಲೋನ್ಸ್ ಕೂಡ ನಾವೇ ಮಾಡಿಸಿಕೊಡುತ್ತೇವೆ.
9538632078

ಹನ್ಸಿಕ ಗೌಡ ಪ್ರಾಪರ್ಟೀಸ್
1) ಪ್ಲಾಟಿನಂ ಲೇಔಟ್ 30x60 S/F, 24 ಲಕ್ಷ
2) ಸ್ಟೈಟಾಪ್ ಲೇಔಟ್ 60x60 N/E Corner, 47 ಲಕ್ಷ
3) 34x74 N/F, ಕೂರ್ಗಳ್ಳಿ ಗ್ರಾಮ, 60 ಲಕ್ಷ
4) 30x40 N/E Corner, ಚಾಮುಂಡೇಶ್ವರಿ ಬಡಾವಣೆ ಬೆಳವಾಡಿ, 42 ಲಕ್ಷ
8553540950

WANTED
1) Receptionist - M/F (Qualification: PUC). 2) Marketing - Male 3) Typist - Female
Mysore Diagnostic Centre Pvt. Ltd.
#1869, SS Complex, 1st Floor, Opp. Sathya Narayana Temple, near RMC Bus Stand, New Sayyaji Rao Road, Mysore-570 021
9739400641, 9845272844

WANTED
1) Accounts Executive - 2 Nos.
Qualification: B.Com / BBM
Exp: 0-5 years. Skill: well versedin Tally ERP 9, Microsoft Office and Email communication. 2) Mechanical Fitter: 1 Nos. (Fitter). Exp: 2-5 years. Skill: Welding, Drilling and Mechanical Maintenance of Machine etc. Whatsaap your resume
7204959799

ಹೆಲ್ತ್ ಕೇರ್ ತರಬೇತಿ
SSLC / PUC ಆದವರಿಗೆ ಡಿಪ್ಲೋಮೊ ಇನ್ ಹೆಲ್ತ್ ಕೇರ್ ತರಬೇತಿ ಕೊಡಲಾಗುತ್ತದೆ. ತರಬೇತಿ ಪಡೆದವರು ಉತ್ತಮ ಆಸ್ಪತ್ರೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಸೆಂಟ್ ಮೇರೀಸ್ ಆಸ್ಪತ್ರೆ, ಸಿಲ್ಕ್ ಫ್ಯಾಕ್ಟರಿ ಸರ್ಕಲ್ NIE ಕಾಲೇಜ್ ಪಕ್ಕ, ಮೈಸೂರು.
Mob: 9916908454

ಬೇಕಾಗಿದ್ದಾರೆ
1) ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ – 2 ಹುದ್ದೆ
2) ವೈಟರ್ – 2 ಹುದ್ದೆ.
ಆಕರ್ಷಕ ವೇತನ
ಹೋಟೆಲ್ ಪ್ಯಾಲೇಸ್ ಪ್ಲಾಜಾ 2716, ಶ್ರೀ ಹರ್ಷ ರಸ್ತೆ, ಲಷ್ಕರ್ ಮೊಹಲ್ಲಾ, ಮಂಡಿ ಮೊಹಲ್ಲಾ, ಮೈಸೂರು–1
9886577795, 9886166044

ಬೇಕಾಗಿದ್ದಾರೆ
ಮೈಸೂರಿನ ಇನ್ಫೋಸಿಸ್‌ಗೆ ಪುರುಷರು ಅಭ್ಯರ್ಥಿಗಳು
ಸೆಕ್ಯೂರಿಟಿ ಗಾರ್ಡ್ಸ್
ಆಕರ್ಷಕ ಸಂಬಳ : 21,000/–
ವಿದ್ಯಾರ್ಹತೆ: 10ನೇ ತರಗತಿ & ಪಿಯುಸಿ ತೇರ್ಗಡೆ
ವಯಸ್ಸು : 22 ರಿಂದ 40 ವರ್ಷ
78296 48007

ಪಾರ್ಟ್ ಟೈಂ ಜಾಬ್
ಮನೆಯಿಂದಲೇ ಕುಳಿತು ಗೃಹಿಣಿಯರು, ವಿದ್ಯಾರ್ಥಿಗಳು, ನಿವೃತ್ತಿ ಹೊಂದಿದವರು ವಯಸ್ಸಿನ ಮಿತಿ ಇಲ್ಲಾ. ಬುಕ್ ರೈಟಿಂಗ್, ಫಾರಂ ಫಿಲ್ಲಿಂಗ್, ಡಾಟಾ ಎಂಟ್ರಿ ಮತ್ತು ವಾಟ್ಸಾಪ್ ಟೈಪಿಂಗ್, ಪ್ಯಾಕಿಂಗ್ ಕೆಲಸಗಳು ಲಭ್ಯವಿದೆ. ಗಳಿಸಿ ತಿಂಗಳಿಗೆ 15000/– ದಿಂದ 20000ವರೆಗೆ
8970168796

ಮನೆ ಭೋಗ್ಯಕ್ಕೆ ಇದೆ
30x40 ಅಳತೆಯ ಹಾಲ್ ಮತ್ತು 2 ಬೆಡ್ ರೂಂ Duplex ಹೊಂದಿರುವ ಮನೆ ನಂ. #69, 'ಬಿ' ಬ್ಲಾಕ್, ಶಿಕ್ಷಕರ ಬಡಾವಣೆ ಹಳೆ ಕೆಸರೆ, ಮೈಸೂರು
9243548288
8762772429

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 8880558064

ಬೇಕಾಗಿದ್ದಾರೆ
ಸೈನ್ ಬೋರ್ಡ್ ವರ್ಕ್ಸ್ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ
ಅನುಭವ ಇರುವವರಿಗೆ ಆದ್ಯತೆ
20–30 ಸಾವಿರ ಸಂಬಳ
ಅಶೋಕ ರೋಡ್, ಮೈಸೂರು
0821 - 4267800
Call: 95382 22384

SITE FOR SALE
MUDA APPROVED
Available in all Dimensions & all Facing
Starting from Rs.1800 Sqft
in and around Mysuru with Free Construction Consultation
Contact
98800 65122 / 98459 84587

COMMERCIAL SPACE FOR RENT
1350 sq.ft with Parking space at Sarswathipuram
Call: 98808 28999

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ಬೇಕಾಗಿದ್ದಾರೆ
1) ಸೆಕ್ಯೂರಿಟಿ ಗಾರ್ಡುಗಳು ಸ್ಥಳ: ಸಿಟಿ ಸುತ್ತಮುತ್ತ, ದಟ್ಟಗಳ್ಳಿ, ಹೆಬ್ಬಾಳ್, ವಸತಿ ವ್ಯವಸ್ಥೆಯಿದೆ ESI / PF ಸೌಲಭ್ಯವಿದೆ. ಸಂಬಳ: 11000/– ರಿಂದ 15000/–ವರೆಗೆ :ಸುರಕ್ಷವೆಲ್:
9686566261, 9611236261

WANTED
ACCOUNTS ASSISTANT WITH COMPUTER AND TALLY KNOWLEDGE
CONDIATE ONLY
OFFICE BOY
7259016514
7259016520

neem BOND PLATINUM
PLYWOOD DOORS
10 YEARS WARRANTY
@ FACTORY DEPOT RATES
9731591267, 9901291267

ಮನೆಯ ಸ್ವಾಧೀನ ಪತ್ರ ಕಳೆದಿದೆ
ಚೇತನ್ ಹೆಚ್.ಜೆ. ರವರಿಗೆ ಸೇರಿದ ನಿವೇಶನ ಸಂಖ್ಯೆ 33, ಬೋಗಾದಿ, ಬಾಪೂಜಿ ನಗರ, ಇದರ ಸ್ವಾಧೀನ ಪತ್ರ ಕಳೆದಿರುತ್ತದೆ. ಇದರ ಜೊತೆಗೆ ಕಂದಾಯ ಪತ್ರ, ಪ್ರಾರಂಭಿಕ ಪ್ರಮಾಣ ಪತ್ರ, ಸೇಲ್ ಅಗ್ರಿಮೆಂಟ್ ಕಾಪಿ ಕಳೆದುಹೋಗಿದೆ. ಸಿಕ್ಕಿದವರು ಸಂಪರ್ಕಿಸಿ:
Mob: 9980130308

ಕೆಲಸಕ್ಕೆ ಬೇಕಾಗಿದ್ದಾರೆ
ಯಡಹಳ್ಳಿ–ದಾಸೇಗೌಡನ ಕೊಪ್ಪಲು, ಟಿ. ನರಸೀಪುರ ತಾ. ಮೈಸೂರು ಶ್ರೀ ಯಡಹಳ್ಳಿ ಸಿದ್ದೇಶ್ವರ ಸಮುದಾಯ ಭವನದಲ್ಲಿ ಕೆಲಸ ಮಾಡಲು ಮ್ಯಾನೇಜರ್ ಬೇಕಾಗಿದ್ದಾರೆ (ಪುರುಷರು ಮಾತ್ರ) ಅರ್ಹತೆಯುಳ್ಳವರು ತಮ್ಮ ಸ್ವಯಂ ವಿವರದೊಂದಿಗೆ ಅರ್ಜಿಯನ್ನು ಶ್ರೀ ಸಿದ್ದೇಶ್ವರ ಸಮುದಾಯ ಭವನ ಕಛೇರಿಗೆ 20–5–2024 ದಿನಾಂಕದೊಳಗೆ ಅರ್ಜಿಯನ್ನು ಸಲ್ಲಿಸುವುದು (ಸಂಜೆ 5 ಗಂಟೆ). ವಿದ್ಯಾರ್ಹತೆ SSLC ಅಥವಾ ತತ್ಸಮಾನ. ಸಂಬಳ: ರೂ. 12,000. ಪದವಿ ಅಥವಾ ತತ್ಸಮಾನ. ಸಂಬಳ: ರೂ. 15,000. ಸಂಪರ್ಕಿಸಿ:
Mob: 9902241684

2 BHK HOME INTERIORS
Starting @ ₹2.5 Lacs*
Home Space Mart ™
TALK TO OUR DESIGN TEAM
9108923123

ಅನುಬಂಧ ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು, ವಿಧುರರು, ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ. ಶೀಘ್ರ ವಿವಾಹಕ್ಕಾಗಿ ಕೂಡಲೇ ಸಂಪರ್ಕಿಸಿ:
Mob: 6361740552

ಬೇಕಾಗಿದ್ದಾರೆ
ಮೈಸೂರಿನ ಪ್ರತಿಷ್ಠಿತ ಕಂಪನಿಯೊಂದರಲ್ಲಿ Hepler ಕೆಲಸಕ್ಕೆ SSLC/ITI ಮಾಡಿರುವ ಯುವಕರು ಬೇಕಾಗಿದ್ದಾರೆ. ESI, PF ಊಟದ ಸೌಲಭ್ಯವಿದೆ.
7204642920
9035341514

TEACHER WANTED
SBP SCHOOL Belagola KRS Main Road
Qualification
* Any Degree
* B.Sc & M.Sc
Teachers Needed for Kannada, English, Hindi, Maths, Science, Social
Interview on: 22nd April (10 AM)
8747011791
8546938423

WANTED
Pharmacist
Front Office / Insurance Executive, OT Staff, Typist, Electrician.
Mob: 9972982665
BHANAVI HOSPITAL

ಆಲ್ಟ್ರೇಷನ್ ಕೆಲಸ
ನಲ್ಲಿ & ಸ್ಯಾನಿಟರಿ ಕೆಲಸ ಗಾರೆ, ಕೆಲಸ ಆಲ್ಟ್ರೇಷನ್ ವರ್ಕ್ಸ್, ಕನ್‌ಸ್ಟ್ರಕ್ಷನ್ ಮಾಡಿಕೊಡಲಾಗುತ್ತದೆ. ಕಡಿಮೆ ದರದಲ್ಲಿ
ಕುಮಾರ್: 7090832865
70090832865
ಸಿದ್ದರಾಜು: 8310338551

ಅಡುಗೆ ಕೆಲಸದವರು ಬೇಕಾಗಿದ್ದಾರೆ
ಸಸ್ಯಾಹಾರಿ, ಸ್ಥಳ: ಬೆಂಗಳೂರು ರೂಮ್ ವ್ಯವಸ್ಥೆ ನೀಡಲಾಗುವುದು ಮನೆ ಡ್ಯೂಟಿ
9606791121

ಮೈಸೂರು ಮಿತ್ರ – ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 10 ರಲ್ಲಿ

ಸಂಗೀತದ ಘಮಲಿನಲ್ಲಿ ಹೊಮ್ಮಿದ ಶ್ರೀರಾಮನ ಗುಣಗಾನ

● ಕನ್ನುಕುಡಿ ಎಂ.ಬಾಲಮುರಳಿಕೃಷ್ಣರ ಶಾಸ್ತ್ರೀಯ ಗಾಯನದಲ್ಲಿ ಶ್ರೀರಾಮನ ಸ್ಮರಣೆ; ಭಕ್ತಿಭಾವದಲ್ಲಿ ತೇಲಿದ ಶ್ರೋತೃ ವರ್ಗ ● ಸಂಗೀತೋತ್ಸವಕ್ಕೆ ಚಾಲನೆ




ಮೈಸೂರಿನ ಶ್ರೀಮತಿ ಆಲಮ್ಮನವರ ಛತ್ರದ ಆವರಣದಲ್ಲಿ ಹಮ್ಮಿಕೊಂಡಿರುವ ಸಂಗೀತೋತ್ಸವ 2024ಕ್ಕೆ ಖ್ಯಾತ ಭರತನಾಟ್ಯ ಹಿರಿಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಚಾಲನೆ ನೀಡಿದರು. ಮತ್ತೊಂದು ಚಿತ್ರದಲ್ಲಿ ವಿದ್ವಾನ್ ಕನ್ನುಕುಡಿ ಎಂ.ಬಾಲಮುರಳಿಕೃಷ್ಣ ಅವರು ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ ನೀಡುತ್ತಿರುವುದನ್ನು ಕಾಣಬಹುದು.

ಮೈಸೂರು,ಏ.17(ಪಿಎಂ)–ಸಂಗೀತದ ಘಮಲಿನಲ್ಲಿ ಹೊಮ್ಮಿದ ಶ್ರೀರಾಮನ ಗುಣಗಾನವು ಶ್ರೋತೃ ವರ್ಗದಲ್ಲಿ ಭಕ್ತಿಭಾವ ಮೂಡಿಸುವ ಜೊತೆಗೆ ಮಧುರ ಮಾಧುರ್ಯದಲ್ಲಿ ತೇಲುವಂತೆ ಮಾಡಿತು. ವಿದ್ವಾನ್ ಕನ್ನುಕುಡಿ ಎಂ.ಬಾಲಮುರಳಿ ಕೃಷ್ಣ ಅವರ ಕರ್ನಾಟಕ ಶಾಸ್ತ್ರೀಯ ಗಾಯನದಲ್ಲಿ ಶ್ರೀರಾಮನ ಸ್ಮರಣೆ ಹೀಗೆ ಅನಾವರಣಗೊಂಡಿತು.

ಆ ಮೂಲಕ ಈ ಸಂಗೀತ ಕಛೇರಿ ಆಯೋಜಿಸಿದ್ದ ಮೈಸೂರಿನ ಶಿವರಾಮಪೇಟೆಯ ಕುಂಚಿಟಿಗರ ಸಂಘದ ಶ್ರೀಮತಿ ಆಲಮ್ಮನವರ ಛತ್ರದ ಆವರಣವು ರಾಮಮಯವಾಗಿ ಪರಿಣಮಿಸಿತ್ತು. ಶಿವರಾಮ ಪೇಟೆಯ ಶ್ರೀ ರಾಮ ಮಂದಿರದ ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಶ್ರೀರಾಮನವಮಿ ಪ್ರಯುಕ್ತ ಇದೇ ಆವರಣದಲ್ಲಿ ಏ.26ರವರೆಗೆ ಶಾಸ್ತ್ರೀಯ ಸಂಗೀತ ಕಾರ್ಯಕ್ರಮಗಳನ್ನು (ಸಂಗೀತೋತ್ಸವ – 2024) ಆಯೋಜಿಸಿದ್ದು, ಅದರ ಮೊದಲ ದಿನದ ಕಾರ್ಯಕ್ರಮದಲ್ಲಿ ಬುಧವಾರ ಕನ್ನುಕುಡಿ ಎಂ.ಬಾಲಮುರಳಿಕೃಷ್ಣ ಸಾದರಪಡಿಸಿದ ಗಾಯನವು ಸಭಾಸದರನ್ನು ಸಂಗೀತದ ಇಂಪಿನಲ್ಲಿ ತೇಲಿಸಿತು.

ತ್ಯಾಗರಾಜರ ರಚನೆಯ 'ಕನುಗೊಂಟಿನಿ ಶ್ರೀ ರಾಮುನಿ ನೇಡು' ತೆಲುಗು ಕೃತಿಯನ್ನು 'ಬಿಲ್ಹರಿ' ರಾಗ, 'ದೇಶಾದಿ' ತಾಳದಲ್ಲಿ ಪ್ರಸ್ತುತಪಡಿಸುವ ಮೂಲಕ ಕಛೇರಿ ಆರಂಭಿಸಿದ ಎಂ.ಬಾಲಮುರಳಿ ಕೃಷ್ಣ, ಸ್ವರದ ಏರಿಳಿತದೊಂದಿಗೆ ಗಾನ ಮೋಡಿ ಮಾಡಿ ಸಂಗೀತಾಸಕ್ತರು ತಲೆದೂಗುವಂತೆ ಮಾಡಿದರು. ದೇವಮನೋಹರಿ ರಾಗದ ತ್ಯಾಗರಾಜರ ಕೃತಿ 'ಎವರಿಕೈ ಅವತಾರಂ' ಅನ್ನು ಹಾಡಿ ಸಭಿಕರನ್ನು ಸಂಭ್ರಮಿಸುವಂತೆ ಮಾಡಿದರು. 'ವರಾಳಿ' ರಾಗದ ಮತ್ತೊಂದು ಕೃತಿ 'ಕರುಣಾ ಎಲಗಂಟೆ' ಹಾಡಿ ರಂಜಿಸಿದರು. ಅಕ್ಕರೈ ಶುಭಲಕ್ಷ್ಮಿ (ಪಿಟೀಲು), ಡೆಲ್ಲಿ ಸಾಯಿರಾಂ (ಮೃದಂಗ), ಗುರುಪ್ರಸನ್ನ (ಕಂಜಿರಾ) ಪಕ್ಕವಾದ್ಯದಲ್ಲಿ ಸಹಕಾರ ನೀಡಿ ಗಾಯನಕ್ಕೆ ಸಂಗೀತ ಮೆರಗು ನೀಡಿದರು. ಇನ್ನು ಹತ್ತು ಹಲವು ಗಾಯನಗಳನ್ನು ಎಂ.ಬಾಲಮುರಳಿಕೃಷ್ಣ ಸಾದರಪಡಿಸಿದರು. ಶ್ರೀರಾಮನ ಸ್ಮರಣೆ, ಆರಾಧಿಸುವ ಕೃತಿಗಳೇ ಇಡೀ ಕಛೇರಿಯ ಪ್ರಧಾನ ಸ್ಥಾನ ಪಡೆದಿತ್ತು.

ಚಾಲನೆ: ಇದಕ್ಕೂ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಗೀತೋತ್ಸವ–2024ಕ್ಕೆ ದೀಪ ಬೆಳಗುವ ಮೂಲಕ ವಸುಂಧರ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್‌ನ ಸಂಸ್ಥಾಪಕರೂ ಆದ ಖ್ಯಾತ ಭರತನಾಟ್ಯ ಹಿರಿಯ ಕಲಾವಿದೆ ಡಾ.ವಸುಂಧರ ದೊರೆಸ್ವಾಮಿ ಚಾಲನೆ ನೀಡಿದರು. ಬಳಿಕ ಮಾತನಾಡಿದ ಅವರು, ನಿಜವಾಗಲೂ 134ನೇ ವರ್ಷದ ಸಂಗೀತೋತ್ಸವ ನಡೆಸುತ್ತಿರುವುದು ಸಾಮಾನ್ಯ ಸಂಗತಿಯಲ್ಲ. ಜೊತೆಗೆ ಕಳೆದ 10 ವರ್ಷಗಳಿಂದ ಬೃಹತ್ ಮಟ್ಟದಲ್ಲಿ ಸಂಗೀತೋತ್ಸವ ನಡೆಸಲಾಗುತ್ತಿದೆ. ಆ ಮೂಲಕ ನಮ್ಮ ಕಲೆ–ಸಂಸ್ಕೃತಿಗೆ ಶ್ರೀರಾಮ ನವಮಿ ಸಂದರ್ಭದಲ್ಲಿ ಉತ್ತೇಜನ ನೀಡಲಾಗುತ್ತಿದೆ. ಇದು ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

'ಮೈಸೂರು' ಸಾಂಸ್ಕೃತಿಕ ನಗರ ಆಗಿರುವ ಹಿನ್ನೆಲೆಯಲ್ಲಿ ಶ್ರೀರಾಮನವಮಿ ಸಂದರ್ಭದಲ್ಲಿ ನಗರದ ಹಲವೆಡೆ ಸಂಗೀತೋತ್ಸವ ನಡೆಯುತ್ತಿದೆ. ದೊಡ್ಡ ದೊಡ್ಡ ಕಲಾವಿದರು ಮೈಸೂರಿಗೆ ಬಂದ ಕಾರ್ಯಕ್ರಮ ನೀಡುವ ಮೂಲಕ ಸಂಗೀತದ ರಸದೌತಣ ಉಣಬಡಿಸುತ್ತಿದ್ದಾರೆ. ಮೈಸೂರಿಗೆ ಬಂದ ತಮ್ಮ ಕಲೆಯನ್ನು ಪ್ರಸ್ತುತಪಡಿಸಲು ಹೊರಗಿನ ಕಲಾವಿದರಿಗೆ ಅತ್ಯಂತ ಅಭಿಮಾನವಿದೆ. ಮೈಸೂರು ಎಂದರೆ ಎಷ್ಟೋ ಬಾರಿ ಕಲಾವಿದರು ಯಾವುದೇ ಅಪೇಕ್ಷೆ ಇಲ್ಲದೇ ಕಾರ್ಯಕ್ರಮ ಕೊಡುವುದಿದೆ. ನಮ್ಮ ಸಂಸ್ಕೃತಿ ಉಳಿದು ಬೆಳೆಯಲು ಈ ರೀತಿಯ ಉತ್ತೇಜನ ಅಗತ್ಯ ಎಂದು ಹೇಳಿದರು. ಶ್ರೀ ರಾಮಾಭ್ಯುದಯ ಸಭಾದ ಅಧ್ಯಕ್ಷ ಡಾ.ಎನ್.ಶ್ರೀರಾವ್ ಮಾತನಾಡಿ, 125ನೇ ವರ್ಷದ ರಾಮೋತ್ಸವ ನಮ್ಮ ರಾಮಮಂದಿರ ಇತಿಹಾಸದಲ್ಲಿ ಒಂದು ಮೈಲಿಗಲ್ಲು. ಕಳೆದ 20 ವರ್ಷಗಳಿಂದ ನಾವು ಎಲ್ಲಾ ಧಾರ್ಮಿಕ ಕಾರ್ಯಗಳ ಜೊತೆಯಲ್ಲಿ ಸಂಗೀತ ಕಾರ್ಯಕ್ರಮಕ್ಕೆ ಹೆಚ್ಚು ಒತ್ತು ನೀಡಿದ್ದೇವೆ. ಆ ಮೂಲಕ ನಮ್ಮ ರಾಜ್ಯದ ಹಾಗೂ ಬೇರೆ ರಾಜ್ಯಗಳ ಅಂತಾರಾಷ್ಟ್ರೀಯ ಕಲಾವಿದರನ್ನು ಆಹ್ವಾನಿಸಿ ರಾಮನಿಗೆ ಸಂಗೀತ ಸೇವೆಯನ್ನು ಅರ್ಪಿಸುತ್ತಿದ್ದೇವೆ. ಹೀಗೆ ಸಂಗೀತ ಪ್ರಿಯರಿಗೆ ಸಂಗೀತ ಆಸ್ವಾದಿಸುವ ಅವಕಾಶ ಮಾಡುತ್ತಿದ್ದೇವೆ. 2015ರಿಂದ ಸಂಗೀತ ಕಾರ್ಯಕ್ರಮಗಳನ್ನು ಶ್ರೀಮತಿ ಆಲಮ್ಮನವರ ಛತ್ರದ ಆವರಣಕ್ಕೆ ಸ್ಥಳಾಂತರಿಸಿದ್ದು, ಆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಸಂಗೀತಾಭಿಮಾನಿಗಳು ಸಂಗೀತ ಆಸ್ವಾದಿಸಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದರು.

ಇಂದಿನಿಂದ 10 ದಿನಗಳ ಕಾಲ 134ನೇ ವರ್ಷದ ಸಂಗೀತೋತ್ಸವ ನಡೆಯಲಿದ್ದು, ಪ್ರತಿವರ್ಷದಂತೆ ಸಕಲ ಧಾರ್ಮಿಕ ಕಾರ್ಯಗಳು ಹಾಗೂ ಪ್ರಸಾದ ವಿನಿಯೋಗವು ರಾಮ ಮಂದಿರದಲ್ಲಿ ಮೇ 1ರವರೆಗೆ ನಡೆಯಲಿದೆ. ಕಳೆದ 10 ವರ್ಷಗಳಿಂದ ಸಂಗೀತ ಪೂಜಾ ಕೈಂಕರ್ಯಗಳ ಜೊತೆಗೆ ಸಾಮಾಜಿಕ ಸೇವಾ ಚಟುವಟಿಕೆ ನಡೆಸುತ್ತಾ ಬಂದಿದ್ದೇವೆ. ಅಯೋಧ್ಯೆ ಶ್ರೀರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ದಿನದಂದು ನಮ್ಮ ರಾಮಮಂದಿರದಲ್ಲಿ ಧಾರ್ಮಿಕ ವಿಧಿವಿಧಾನಗಳನ್ನು ವಿಜೃಂಭಣೆಯಿಂದ ನಡೆಸಲಾಯಿತು. ಪ್ರಾಣ ಪ್ರತಿಷ್ಠಾಪನೆ ಸಮಯಕ್ಕೆ ಸರಿಯಾಗಿ ನಮ್ಮ ರಾಮಂದಿರದಲ್ಲೂ ಮಹಾಮಂಗಳಾರತಿ ನೆರವೇರಿಸಲಾಯಿತು ಎಂದು ಸಂತಸ ವ್ಯಕ್ತಪಡಿಸಿದರು. ಮೈಸೂರು ಶಂಕರ ಮಠದ ಧರ್ಮಾಧಿಕಾರಿ ರಾಮಚಂದ್ರ, ಸಭಾದ ಕಾರ್ಯದರ್ಶಿ ಫಣೀಂದ್ರ, ಖಜಾಂಚಿ ಪದ್ಮ ಅನಂತ್, ಟ್ರಸ್ಟಿ ಕೆ.ಆರ್.ಗುರುಪ್ರಸಾದ್, ಕುಂಚಿಟಿಗರ ಸಂಘದ ಸಿ.ಕೆ.ಗಣೇಶ್, ಸತೀಶ್ ಮತ್ತಿತರರು ಹಾಜರಿದ್ದರು.



ಮೈಸೂರು ತಾಲೂಕು ಇಲವಾಲ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾಗಿ ಶ್ರೀಮತಿ ಸಾವಿತ್ರಮ್ಮ ಮತ್ತು ಉಪಾಧ್ಯಕ್ಷರಾಗಿ ವೆಂಕಟಾಚಲ ಅವಿರೋಧವಾಗಿ ಆಯ್ಕೆಯಾದರು. ಇವರನ್ನು ಸಂಘದ ಸದಸ್ಯರು ಹಾಗೂ ಗ್ರಾಮದ ಮುಖಂಡರು ಅಭಿನಂದಿಸಿದರು.

ಅಯೋಧ್ಯೆ ಬಾಲರಾಮನ ಹಣೆ ಬೆಳಗಿದ 'ಸೂರ್ಯ ತಿಲಕ'



ಅಯೋಧ್ಯೆ, ಏ.17– ಅಯೋಧ್ಯೆ ರಾಮಮಂದಿರ ಇಂದು ರಾಮ ನವಮಿ ದಿನ ಐತಿಹಾಸಿಕ ಕ್ಷಣಕ್ಕೆ ಸಾಕ್ಷಿಯಾಗಿದೆ. ರಾಮಮಂದಿರ ನಿರ್ಮಾಣವಾದ ನಂತರ ಇದೇ ಮೊದಲ ಬಾರಿ ಅಯೋಧ್ಯೆಯಲ್ಲಿ ರಾಮ ನವಮಿ ಆಚರಣೆ ನೆರವೇರಿದ್ದು, ಈ ಸಂದರ್ಭದಲ್ಲಿ ಬಾಲರಾಮನ ವಿಗ್ರಹ ರಾಮಲಲ್ಲಾನ ಹಣೆಯ ಮೇಲೆ ಸೂರ್ಯರಶ್ಮಿ ನೇರವಾಗಿ ಸ್ಪರ್ಶಿಸಿದೆ. ಕಳೆದ ಜನವರಿ 22ರಂದು ಮಂದಿರ ನಿರ್ಮಾಣವಾಗಿ ಬಾಲರಾಮನ ಪ್ರತಿಷ್ಠೆ ಅದ್ದೂರಿಯಾಗಿ ಸಂಪ್ರದಾಯಗಳೊಂದಿಗೆ ನೆರವೇರಿತ್ತು. ರಾಮಲಲ್ಲಾ ಪ್ರತಿಷ್ಠಾಪನೆ ಹಾಗೂ ಉದ್ಘಾಟನೆ ನಂತರ ಮೊದಲ ರಾಮನವಮಿ ಆಚರಣೆ ಇಂದು ನೆರವೇರಿತು. ಈ ಸಮಯದಲ್ಲಿ ಬಾಲ ರಾಮನ ಮೇಲೆ ಸೂರ್ಯರಶ್ಮಿಯ ಸ್ಪರ್ಶವಾಗಿದೆ. ಸೂರ್ಯರಶ್ಮಿ ನೇರವಾಗಿ ಬಾಲರಾಮನ ಹಣೆಗೆ ಬೀಳುವಂತೆ ಮಾಡಲು ಈ ಹಿಂದೆ ವಿಜ್ಞಾನಿಗಳು ಒಂದು ಪ್ರಯೋಗವನ್ನು ನಡೆಸಿದ್ದು ಅದು ಯಶಸ್ವಿಯಾಗಿದೆ. ಸೂರ್ಯರಶ್ಮಿ ರಾಮನನ್ನು ಸ್ಪರ್ಶ ಮಾಡುವ ಸಮಯದಲ್ಲಿ ರಾಮ ಭಕ್ತರಿಗೆ ಮಂದಿರದೊಳಗೆ ಅವಕಾಶ ನೀಡಲಾಗಿದೆ. ದೇವಾಲಯದ ಟ್ರಸ್ಟ್‌ನಿಂದ ಸುಮಾರು 100 ಎಲ್‌ಇಡಿ ಸ್ಕ್ರೀನ್‌ಗಳನ್ನು ಅಳವಡಿಸಲಾಗಿದ್ದು, ಸರ್ಕಾರದಿಂದ 50 ರಾಮನವಮಿ ಆಚರಣೆ ಲೈವ್ ಸ್ಕ್ರೀನ್ ನೋಡಲು ವ್ಯವಸ್ಥೆ ಮಾಡಲಾಗಿತ್ತು ಎಂದು ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯ ಅನಿಲ್ ಮಿಶ್ರಾ ಹೇಳಿದ್ದಾರೆ.

ಉನ್ನತ ಶ್ರೇಣಿಯಲ್ಲಿ ತೇರ್ಗಡೆ



ಮೈಸೂರು, ಏ. 17– ಮೈಸೂರಿನ ಸದ್ವಿದ್ಯಾ ಪಿಯು ಕಾಲೇಜಿನ ವಿದ್ಯಾರ್ಥಿ ಎಂ.ಎ.ಉಲ್ಲಾಸ್ ದಿತೀಯ ಪಿಯುಸಿಯಲ್ಲಿ 600ಕ್ಕೆ 580 ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ. ಈತ ಎಂ.ಎಲ್.ಅನಂತರಾಮು ಮತ್ತು ಪುಷ್ಪಾವತಿ ದಂಪತಿ ಪುತ್ರ

ಶ್ರೀ ವಿವೇಕಾನಂದ ಪಿಯು ಕಾಲೇಜಿಗೆ ಶೇ.97ರಷ್ಟು ಫಲಿತಾಂಶ



ಸಿಂಚನ (577)


ಆದರ್ಶ (576)


ಬಾಲು (567)

ಮೈಸೂರು,ಏ17–ಮೈಸೂರಿನ ಜಯಲಕ್ಷ್ಮಿಪುರಂನಲ್ಲಿರುವ ಕುವೆಂಪು ವಿದ್ಯಾವರ್ಧಕ ಟ್ರಸ್ಟ್ ವತಿಯಿಂದ ನಡೆಯುತ್ತಿರುವ ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜಿಗೆ ದ್ವಿತೀಯ ಪಿಯುಸಿಯಲ್ಲಿ ಶೇ.97ರಷ್ಟು ಫಲಿತಾಶ ಬಂದಿದೆ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಭಾಗದಲ್ಲಿ ಒಟ್ಟು 40 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ವಿಜ್ಞಾನ ವಿಭಾಗದಲ್ಲಿ ಬಾಲು 567, ವಾಣಿಜ್ಯ ವಿಭಾಗದಲಿ ಆರ್.ಸಿಂಚನ 577 ಮತ್ತು ಕಲಾ ವಿಭಾಗದಲ್ಲಿ ಆದರ್ಶ್ 576 ಅಂಕ ಪಡೆದು ಕಾಲೇಜಿಗೆ ಕೀರ್ತಿ ತಂದಿದ್ದು, ಇವರನ್ನು ಕಾಲೇಜು ಆಡಳಿತ ಮಂಡಳಿ ಅಭಿನಂದಿಸಿದೆ.

ನಟ ದ್ವಾರಕೀಶ್ ಪಂಚಭೂತಗಳಲ್ಲಿ ಲೀನ



ಬೆಂಗಳೂರು, ಏ.17– ನಿನ್ನೆ ಹೃದಯಾಘಾತದಿಂದ ನಿಧನರಾದ ನಟ ದ್ವಾರಕೀಶ್ ಅವರ ಅಂತ್ಯಸಂಸ್ಕಾರ ಇಂದು ನೆರವೇರಿತು. ದ್ವಾರಕೀಶ್ ಅವರ ಹಿರಿಯ ಮಗ ಯೋಗೇಶ್ ಅವರು ಚಿತೆಗೆ ಅಗ್ನಿಸ್ಪರ್ಶ ಮಾಡಿದರು.

ಚಾಮರಾಜಪೇಟೆಯ TR Mill ಹಿಂದೂ ರುದ್ರಭೂಮಿಯಲ್ಲಿ ಬ್ರಾಹ್ಮಣ ಸಂಪ್ರದಾಯದಂತೆ ದ್ವಾರಕೀಶ್ ಅವರ ಅಂತ್ಯಕ್ರಿಯೆಯನ್ನು ಸಕಲ ಸರ್ಕಾರಿ ಗೌರವಗಳೊಂದಿಗೆ ನೆರವೇರಿಸಲಾಯಿತು.

ದ್ವಾರಕೀಶ್ ಅವರ ಹಿರಿಯ ಮಗ ಚಿತೆಗೆ ಅಗ್ನಿಸ್ಪರ್ಶ ಮಾಡಿದರು. ಈ ವೇಳೆ ಕುಟುಂಬದವರು ಹಾಗೂ ಆಪ್ತರು ಹಾಜರಿದ್ದರು. ಅಂತಿಮ ಸಂಸ್ಕಾರಕ್ಕೂ ಮೊದಲು ಪೊಲೀಸರು ಮೂರು ಸುತ್ತು ಕುಶಾಲತೋಪು ಸಿಡಿಸಿ ಗೌರವವಂದನೆ ನೀಡಲಾಗಿದೆ. ಸಿಎಂ ಸಿದ್ದರಾಮಯ್ಯ ಅವರು ದ್ವಾರಕೀಶ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದು ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಈ ವೇಳೆ ಮಾತನಾಡಿದ ಅವರು, 'ನಾನು, ದ್ವಾರಕೀಶ್ ಬೆಂಗಳೂರಿನಿಂದ ಮೈಸೂರಿಗೆ ಹೆಲಿಕಾಪ್ಟರ್‌ನಲ್ಲಿ ಹೋಗಿದ್ವಿ, ಆ ಸಮಯದಲ್ಲಿ ಅನೇಕ ವಿಚಾರಗಳನ್ನು ಚರ್ಚೆ ಮಾಡಿದ್ವಿ ಎಂದು ಸಿಎಂ ಸಿದ್ದರಾಮಯ್ಯ, ದ್ವಾರಕೀಶ್ ನೆನೆದು ಭಾವುಕರಾದರು.

ಚಿತ್ರರಂಗದಲ್ಲಿ ದೊಡ್ಡ ಮಟ್ಟದಲ್ಲಿ ಹೆಸರು ಮಾಡಿದ್ದ ದ್ವಾರಕೀಶ್ ಅವರು ನಟನಾಗಿ, ನಿರ್ಮಾಪಕನಾಗಿ ಹಾಗೂ ನಿರ್ದೇಶಕನಾಗಿ ಹೆಸರು ಮಾಡಿದ್ದರು. ಸಾಕಷ್ಟು ಜನರನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯಿಸಿದ ಖ್ಯಾತಿ ಅವರಿಗೆ ಇದೆ. ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಅಭಿಮಾನಿಗಳು ಹಾರೈಸಿದ್ದಾರೆ.




ಮೈಸೂರು ತಾಲೂಕಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಮಾದಹಳ್ಳಿ ದಾಖಲೆ ಕಣೆಯನಹುಂಡಿ ಗೇಟ್ ಬಳಿ ಇರುವ ಶ್ರೀ ಆರ್ಕಧಾಮ ಆಶ್ರಮದ ಆವರಣದಲ್ಲಿ ಆರ್ಕಧಾಮದ ಶ್ರೀ ಶ್ರೀನಿವಾಸ್ ಮಹಾಯೋಗಿಗಳ ಸಂಕಲ್ಪದಂತೆ, ಅವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಆರ್ಕ ಮಹಾಗಣಪತಿ ದೇವಸ್ಥಾನದ ಮುಂದೆ ಸುಮಾರು 20 ಅಡಿಯ ಗರುಡಗಂಬ ನಿಲ್ಲಿಸಲು ಶ್ರೀ ರಾಮನವಮಿ ಪುಣ್ಯದಿನದಂದು ವಿಶೇಷ ಪೂಜೆ ಸಲ್ಲಿಸಿ, ಕರ್ನಾಟಕ ಪ್ರಜಾ ಪಾರ್ಟಿಯ (ರೈತ ಪರ್ವ) ರಾಜ್ಯಾಧ್ಯಕ್ಷ ಡಾ. ಬಿ. ಶಿವಣ್ಣ ಗುದ್ದಲಿ ಪೂಜೆ ನೆರವೇರಿಸಿದರು. ಸ್ಥಳೀಯರು ಉಪಸ್ಥಿತರಿದ್ದರು

ಹತ್ತು ವರ್ಷದ ಅಧಿಕಾರಾವಧಿ ಸಾಧನೆ ಬರೀ ಟ್ರೇಲರ್

ಮತ್ತೊಮ್ಮೆ ಅಧಿಕಾರಕ್ಕೆ ಬಂದರೆ ಪೂರ್ಣ ಅಭಿವೃದ್ಧಿ ಪರ್ವ

● ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಭರವಸೆ ● ಚಾರ್ಟರ್ಡ್ ಅಕೌಂಟೆಂಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್ಸ್‌ರೊಂದಿಗೆ ಸಂವಾದ



ಮೈಸೂರಿನ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಬುಧವಾರ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಚಾರ್ಟರ್ಡ್ ಅಕೌಂಟೆಂಟ್ಸ್ ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್ಸ್ ವತಿಯಿಂದ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಅವರನ್ನು ಅಭಿನಂದಿಸಲಾಯಿತು.

ಅರಮನೆಯಿಂದ ಹೊರಗೆ ಬರಲ್ಲ, ದಂತ ಗೋಪುರದಲ್ಲಿ ವಾಸವಾಗಿರುವ ವ್ಯಕ್ತಿ ಜನರ ಸಂಕಷ್ಟಗಳಿಗೆ ಸ್ಪಂದಿಸುವರೇ ಎಂಬ ಪ್ರಶ್ನೆಗಳು, ಅಪಪ್ರಚಾರಗಳು ನಡೆದಿವೆ. ನಮ್ಮ ಪೂರ್ವಜರು ಅರಮನೆಯಲ್ಲಿಯೇ ಹುಟ್ಟಿ ಬೆಳೆದಿದ್ದರೂ ಜನರ ಮಧ್ಯೆಯೇ ಇದ್ದು ಕೆಲಸ ಮಾಡಿದ್ದಾರೆ. ಅದೇ ರೀತಿ ಪ್ರಜಾಪ್ರಭುತ್ವವಿರಲಿ... ರಾಜ ಪ್ರಭುತ್ವವಿರಲಿ...ಯಾವುದೇ ಕೆಲಸ ಯಶಸ್ವಿಯಾಗಬೇಕಾದರೂ ಜನರೊಂದಿಗೆ, ಜನರ ಮಧ್ಯೆ ಕೆಲಸ ಮಾಡಲೇಬೇಕು. ಅಂದಿನ ಕಾಲದಲ್ಲಿಯೂ ನಮ್ಮ ಪೂರ್ವಜರು ಅದೇ ತತ್ವದಲ್ಲಿ ಕೆಲಸ ಮಾಡಿದರು. ನಾವು ಸಹ ಅದೇ ತತ್ವದಲ್ಲಿ ಕೆಲಸ ಮಾಡುತ್ತೇವೆ. ಯಾವುದೇ ಆತಂಕವಿಲ್ಲದೆ ನಮ್ಮನ್ನು ಪ್ರೋತ್ಸಾಹಿಸಿ, ನಿಮ್ಮ ಸೇವೆಗೆ ಸದಾ ಸಿದ್ಧರಾಗಿರುತ್ತೇವೆ.

– ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್,
ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ

ಮೈಸೂರು, ಏ.17(ಎಂಕೆ)– ಟ್ರೇಲರ್ ಚೆನ್ನಾಗಿದ್ದರೆ, ಸಿನಿಮಾ ಕೂಡ ಚೆನ್ನಾಗಿರುತ್ತೆ ಎಂಬ ಮಾತಿನಂತೆ ಹತ್ತು ವರ್ಷದ ಕೇಂದ್ರ ಸರ್ಕಾರದ ಸಾಧನೆಯನ್ನು ಬರೀ ಟ್ರೇಲರ್ ಎಂದಿರುವ ಪ್ರಧಾನಿ ಮೋದಿಯವರ ಅಭಿವೃದ್ಧಿ ಕಾರ್ಯ ಯೋಜನೆಗಳು ಮುಂದುವರೆಯುವುದಕ್ಕಾಗಿ ಬಿಜೆಪಿ ಬೆಂಬಲಿಸಿ ಎಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರಿನ ಲಲಿತಮಹಲ್ ರಸ್ತೆಯಲ್ಲಿರುವ ಕಂಠೀರವ ನರಸಿಂಹರಾಜ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ಚಾರ್ಟರ್ಡ್ ಅಕೌಂಟೆಂಟ್ಸ್(ಸನ್ನದು ಲೆಕ್ಕಿಗರು) ಅಂಡ್ ಟ್ಯಾಕ್ಸ್ ಕನ್ಸಲ್ಟೆಂಟ್ಸ್(ಲೆಕ್ಕ ಪರಿಶೋಧಕರು) ವತಿಯಿಂದ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ಕಳೆದ ಹತ್ತು ವರ್ಷ ದೇಶದ ಸರ್ವತೋಮುಖ ಅಭಿವೃದ್ಧಿಯಾಗಿದೆ. 2014ರಲ್ಲಿ ಅಸಮತೋಲನ ಆರ್ಥಿಕತೆ ಪಟ್ಟಿಯಲ್ಲಿದ್ದ ಭಾರತವಿಂದು ವಿಶ್ವದ ಐದು ಬಲಿಷ್ಠ ರಾಷ್ಟ್ರಗಳಲ್ಲಿ ಒಂದಾಗಿದೆ ಎಂದರು. 2014ರಲ್ಲಿದ್ದ 96 ಸಾವಿರ ಕಿ.ಮೀ ಇದ್ದ ರಾಷ್ಟ್ರೀಯ ಹೆದ್ದಾರಿ ಈಗ ಒಂದೂವರೆ ಲಕ್ಷ ಕಿ.ಮೀ ಆಗಿದೆ. 2014ರಲ್ಲಿ 20 ಸಾವಿರ ಕಿ.ಮೀ ಇದ್ದ ರೈಲ್ವೆ ಟ್ರ್ಯಾಕ್ ವಿದ್ಯುದೀಕರಣ ಇಂದು ಶೇ.100ರಷ್ಟಾಗಿದೆ. ಗ್ರಾಮೀಣ ರಸ್ತೆಯನ್ನು 65 ವರ್ಷದಲ್ಲಿ ಬರೀ 3.25 ಲಕ್ಷ ಅಭಿವೃದ್ಧಿ ಮಾಡಿದ್ದರು. ಕಳೆದ ಹತ್ತು ವರ್ಷದಲ್ಲೇ 3.75 ಲಕ್ಷ ಕಿ.ಮೀ ಗ್ರಾಮೀಣ ರಸ್ತೆ ಅಭಿವೃದ್ಧಿಯಾಗಿದೆ. ಮೆಡಿಕಲ್ ಕಾಲೇಜುಗಳ ಸಂಖ್ಯೆ 400ರಿಂದ ಸಾವಿರಕ್ಕೂ ಹೆಚ್ಚಾಗಿದೆ. ಕೇವಲ 7 ನಗರದಲ್ಲಿದ್ದ ಮೆಟ್ರೋ ಇವತ್ತು 22 ನಗರದಲ್ಲಿದೆ ಎಂದು ಕೇಂದ್ರ ಸರ್ಕಾರದ ಹತ್ತು ವರ್ಷದ ಸಾಧನೆಯನ್ನು ವಿವರಿಸಿದರು. ಮೈಸೂರಿನಲ್ಲಿಯೇ ಪ್ರಧಾನ ಮೈತ್ರಿ ಆವಾಸ್ ಯೋಜನೆ ಮೂಲಕ 25 ಸಾವಿರ ಮನೆಗಳನ್ನು ನಿರ್ಮಿಸಲಾಗಿದೆ. ಜಲಜೀವನ್ ಮಿಷನ್‌ನಲ್ಲಿ ಮೈಸೂರಿನಲ್ಲಿಯೇ 2 ಲಕ್ಷಕ್ಕೂ ಅಧಿಕ ಮನೆಗಳಿಗೆ ನಲ್ಲಿ ಸಂಪರ್ಕ ಮಾಡಲಾಗಿದೆ. ಇದೆಲ್ಲವೂ ತಮ್ಮೆಲ್ಲರ ಮತದಾನದ ಮೂಲಕವೇ ಆಗಿರುವುದು. ದೇಶದ ಪರಂಪರೆ ರಕ್ಷಣೆ ಜೊತೆಗೆ ಯೋಗವನ್ನು ವಿಶ್ವಕ್ಕೆ ಪರಿಚಯಿಸುವ ಕೆಲಸ ಮಾಡಿದ್ದಾರೆ. ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದರೂ ಮೋದಿಯವರು ಹೇಳಿರುವುದು ಇದು ನಮ್ಮ ಅಭಿವೃದ್ಧಿ ಟ್ರೇಲರ್ ಅಷ್ಟೇ ಎಂದು. ಟ್ರೇಲರ್ ಚೆನ್ನಾಗಿದೆ ಎಂದರೆ ಮೂವಿ ನೋಡಬೇಕು. ಮೂವಿ ನೋಡುವುದು ಬಹಳ ಸುಲಭ. ಏ.26 ರಂದು ಮತಗಟ್ಟೆಗೆ ಹೋಗಿ ಕಮಲದ ಗುರ್ತಿಗೆ ಮತ ನೀಡಿದರೆ ಸಾಕು. ಶ್ರೇಷ್ಠ ಭಾರತ ನಿರ್ಮಾಣಕ್ಕೆ ಬೆಂಬಲಿಸಿ ಎಂದು ಮನವಿ ಮಾಡಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮಾಜಿ ಅಧ್ಯಕ್ಷ ಹಾಗೂ ಅಭ್ಯರ್ಥಿ ಪ್ರಚಾರ ಪ್ರಮುಖ್ ಹೇಮಂತ್‌ಕುಮಾರ್‌ಗೌಡ, ಸಂವಾದ ಕಾರ್ಯಕ್ರಮ ಸಂಚಾಲಕರಾದ ಚಾರ್ಟರ್ಡ್ ಅಕೌಂಟೆಂಟ್‌ಗಳಾದ ಎಸ್. ಅಚ್ಯುತ, ಉತ್ತಮ್ ಪಡಿವಾಲ್, ತೆರಿಗೆ ಸಲಹೆಗಾರರಾದ ಎಸ್.ಪ್ರಸಾದ್, ಎ.ಎಂ. ಅನಂತ ಪದ್ಮನಾಭ ಲೆಕ್ಕ ಪರಿಶೋಧಕರಾದ ಟಿ.ಸುದರ್ಶನ್, ವಿ.ವಿನೋದ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಗುರುವಾರ 18 ಏಪ್ರಿಲ್ 2024

ಯದುವೀರ್ ಪರ ಮಾಜಿ ಸಿಎಂ ಕುಮಾರಸ್ವಾಮಿ ರೋಡ್ ಶೋ

ಬೆಟ್ಟದಪುರ, ಏ.17– ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಪರ ರೋಡ್ ಶೋ ನಡೆಸುವ ಮೂಲಕ ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಪಿರಿಯಾಪಟ್ಟಣದಲ್ಲಿ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಅವರು, ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಲೆಲ್ಲ ಬರಗಾಲ ಬರುತ್ತಿದೆ. ಕಳೆದ ಏಳು ತಿಂಗಳಿಂದ ವಿವಿಧ ಯೋಜನೆಯ ಫಲಾನುಭವಿಗಳಿಗೆ ಹಣ ಹಾಕದೆ ಸತಾಯಿಸುತ್ತಿರುವ ಕಾಂಗ್ರೆಸ್ಸಿನದು ಪಿಕ್ ಪಾಕೆಟ್ ಸರ್ಕಾರ ಎಂದು ಟೀಕಿಸಿದರು.

ಮಹಿಳೆಯರಿಗೆ 2,000 ಹಣ ನೀಡುವ ನೆಪದಲ್ಲಿ ಮದ್ಯದ ಬೆಲೆಯನ್ನು ಏರಿಕೆ ಮಾಡಿ ಪಿಕ್ ಪಾಕೆಟ್ ಮಾಡುವ ಕೆಲಸದಲ್ಲಿ ತೊಡಗಿದೆ ಎಂದು ಟೀಕಿಸಿದ ಅವರು, ಜನವಿರೋಧಿ ನೀತಿ ಅನುಸರಿ ಸುತ್ತಿರುವ ಈ ಸರ್ಕಾರಕ್ಕೆ ಪಾಠ ಕಲಿಸುವ ಸಲುವಾಗಿ ಬಿಜೆಪಿ ಅಭ್ಯರ್ಥಿಯನ್ನು ಗೆಲ್ಲಿಸುವ ಕೆಲಸ ಮಾಡಿ ಎಂದು ಕರೆ ನೀಡಿದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ. ವೈ. ವಿಜಯೇಂದ್ರ ಮಾತನಾಡಿ, ಮತ್ತೊಮ್ಮೆ ಮೋದಿ ಪ್ರಧಾನಮಂತ್ರಿಯಾಗಬೇಕು, ಅವರ ಕೈ ಬಲಪಡಿಸಲು ಯದುವೀರ್ ಆಯ್ಕೆ ಮಾಡಬೇಕು ಎಂದು ಮನವಿ ಮಾಡಿದರು. ಶಾಸಕ ಜಿ.ಡಿ. ಹರೀಶ್ ಗೌಡ, ಮಾಜಿ ಶಾಸಕ ಕೆ. ಮಹದೇವ್, ಮೈಮುಲ್ ಅಧ್ಯಕ್ಷ ಪಿ.ಎಂ. ಪ್ರಸನ್ನ ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಸಚಿವ ಎಸ್.ಎ.ರಾಮದಾಸ್, ಮಾಜಿ ಶಾಸಕ ಎಚ್. ಸಿ.ಬಸವರಾಜು, ತಾಲೂಕು ಬಿಜೆಪಿ ಘಟಕದ ಅಧ್ಯಕ್ಷ ವಿ.ರಾಜೇಂದ್ರ, ತಾಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಅಣ್ಣಯ್ಯ ಶೆಟ್ಟಿ, ಮುಖಂಡರಾದ ಕೆ.ಎನ್. ಸೋಮಶೇಖರ್, ಆರ್. ಟಿ. ಸತೀಶ್, ದೇವರಾಜ್ ಒಡೆಯರ್ ಸೇರಿದಂತೆ ಹಲವು ಮುಖಂಡರು ಭಾಗವಹಿಸಿದ್ದರು.



ಪಿರಿಯಾಪಟ್ಟಣದಲ್ಲಿ ರೋಡ್‌ಶೋ ನಡೆಸುತ್ತಿರುವ ಕುಮಾರಸ್ವಾಮಿ.

ಹೆಚ್.ಡಿ.ಕೋಟೆ ಅಭಿವೃದ್ಧಿಗೆ ನನ್ನನ್ನು ಬೆಂಬಲಿಸಿ

ಹೆಚ್.ಡಿ.ಕೋಟೆ, ಏ.17– ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಇನ್ನು ಹೆಚ್ಚಿನ ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ನಾನು ಸ್ಪರ್ಧಿಸಿದ್ದು ಕ್ಷೇತ್ರದ ಮತದಾರ ಬಂಧುಗಳು ಸಹಕಾರ ನೀಡಬೇಕು ಎಂದು ಜೆ.ಡಿ. ರಾಜಗೋಪಾಲ್ ಮನವಿ ಮಾಡಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಯಲ್ಲಿ ಸರ್ಕಾರಿ ಆಶ್ರಮ ಶಾಲೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಡಿ ಗ್ರೂಪ್ ನೌಕರರು ಹೊರಗುತ್ತಿಗೆಯನ್ನು ರದ್ದು ಮಾಡಿ ಖಾಯಂ ಮಾಡಲು, ತಾಲೂಕಿನಲ್ಲಿ ಹದಗೆಟ್ಟಿರುವ ರಸ್ತೆ ಅಭಿವೃದ್ಧಿ ಮಾಡಲು, ತಾಲೂಕಿನಲ್ಲಿ ಡಿಪ್ಲೊಮಾ ಕಾಲೇಜ್ ನಿರ್ಮಾಣ ಮಾಡಲು, ಕೂಲಿ ಕಾರ್ಮಿಕರಿಗೆ ಕಾರ್ಖಾನೆ, ಕಬಿನಿ ಜಲಾಶಯದ ಬಳಿ ಬೃಂದಾವನ ಕಲಾಭವನ, ಇನ್ನು ಹಲವಾರು ಅಭಿವೃದ್ಧಿ ಮಾಡುವ ನಿಟ್ಟಿನಲ್ಲಿ ನಾನು ಈ ಬಾರಿ ಲೋಕಸಭಾ ಕ್ಷೇತ್ರಕ್ಕೆ ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದು, ಕ್ಷೇತ್ರದ ಜನತೆ ನನ್ನನ್ನು ಆಶೀರ್ವದಿಸಬೇಕು ಎಂದು ಮನವಿ ಮಾಡಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಬಡೇ ಮಿಯಾನ್ ಚೋಟೆ ಮಿಯಾನ್ (ಕ)	2 ಪ್ರದರ್ಶನಗಳು
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮುಕ್ತ ಮನಸ್ಸು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.15ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.25ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 2	ಅಪ್ಪ ಐ ಲವ್‌ಯು (ಕ): ಬೆ.10.20ಕ್ಕೆ, ಮುಕ್ತ ಮನಸ್ಸು (ಕ): ಮ.1.10ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ಸಂ.4.20ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7.10ಕ್ಕೆ, ಆವೇಶಂ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.55ಕ್ಕೆ, ರೊಮಿಯೋ (ತ): ಮ.1.25ಕ್ಕೆ, ಡಿಯರ್ (ತ): ಸಂ.4.15ಕ್ಕೆ, ಮೈದಾನ್ (ಹಿಂ): ಸಂ.6.55ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ವರ್ಷನ್‌ಗಲ್ಕು ಶೇಷಂ (ಮ): ಬೆ.10.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ಯುವ (ಕ): ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.50ಕ್ಕೆ, ಮ.3ಕ್ಕೆ, ರಾ.10ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (3ಡಿ) (ಹಿಂ): ಸಂ.6.30ಕ್ಕೆ.
ಸ್ಕ್ರೀನ್ 2	ಮೈದಾನ್ (ಹಿಂ): ಬೆ.9.50ಕ್ಕೆ, ಮ.1.40ಕ್ಕೆ, ಸಂ.5.30ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.9.40ಕ್ಕೆ, ಅಪ್ಪ ಐ ಲವ್‌ಯು (ಕ): ಮ.1.10ಕ್ಕೆ, ಅವತಾರ ಪುರುಷ 2 (ಕ): ಸಂ.4.15ಕ್ಕೆ, ಯುವ (ಕ): ಸಂ.6.55ಕ್ಕೆ, ಮೈದಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.40ಕ್ಕೆ, ಸಂ.4ಕ್ಕೆ, ರೋಮಿಯೋ (ತ): ಮ.12.55ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ರಾ.7.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.10.20ಕ್ಕೆ

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಸಂವಿಧಾನ ಆಶಯಗಳ ಜಾರಿಗೆ ಕಾಂಗ್ರೆಸ್ ಬೆಂಬಲಿಸಿ: ಶಾಸಕ ದರ್ಶನ್



ಮಲ್ಕುಂಡಿ, ಏ.17– ದೇಶದ ಜನರ ಜೀವನದ ಸುಧಾರಣೆಗೆ, ಅಭಿವೃದ್ಧಿ ಹಾಗೂ ಸರ್ವರಿಗೂ ಸಮಪಾಲು ದೊರೆಯಬೇಕಾದರೆ ಸಂವಿಧಾನಕ್ಕೆ ಬದ್ಧವಾಗಿರುವ ಕಾಂಗ್ರೆಸ್ ಪಕ್ಷವನ್ನು ಮತದಾರರು ಈ ಬಾರಿ ಬೆಂಬಲಿಸಬೇಕು ಎಂದು ಶಾಸಕ ದರ್ಶನ್ ಕರೆ ನೀಡಿದರು.

ನಂಜನಗೂಡು ವಿಧಾನಸಭಾ ಕ್ಷೇತ್ರದ ದುಗ್ಗಹಳ್ಳಿ, ಕುರಿಹುಂಡಿ, ಗ್ರಾಪಂ ವ್ಯಾಪ್ತಿಯಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚನೆ ಮಾಡಿ ಮಾತನಾಡಿದ ಅವರು, ಸಿಎಂ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಕಾಂಗ್ರೆಸ್ ಸರ್ಕಾರ 5 ಗ್ಯಾರಂಟಿಗಳ ಜಾರಿ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಮುಂದಾಗಿದೆ ಎಂದರು. ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಶ್ರೀಕಂಠೇಶ್ವರ ದೇವಸ್ಥಾನದ ಮಾಜಿ ಅಧ್ಯಕ್ಷ ಇಂಧನಬಾಬು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ತಾಲೂಕು ಯುವ ಘಟಕದ ಅಧ್ಯಕ್ಷ ಅಶೋಕ್, ಗ್ರಾಪಂ ಅಧ್ಯಕ್ಷ ಶಿವನಾಗಪ್ಪ, ಗ್ರಾಪಂ ಸದಸ್ಯ ತರಗನಹಳ್ಳಿ ನಂಜುಂಡಸ್ವಾಮಿ, ವೀರಶೈವ ತಾಲೂಕು ಅಧ್ಯಕ್ಷ ಬುಲೆಟ್ ಮಹದೇವಪ್ಪ ಮುಖಂಡರುಗಳಾದ ಆನಂದ, ಪ್ರಭುಸ್ವಾಮಿ, ಸೂರ್ಯಕುಮಾರ್, ಶಿವಣ್ಣ, ವೇದ ಇನ್ನಿತರರಿದ್ದರು.

ದೇಶದ ರಕ್ಷಣೆ, ಅಭಿವೃದ್ಧಿಗಾಗಿ ಬಿಜೆಪಿಗೆ ಮತ ನೀಡಿ

ನಂಜನಗೂಡು, ಏ.17– ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ 10 ವರ್ಷಗಳ ಆಡಳಿತದ ಅವಧಿಯಲ್ಲಿ ದೇಶ ಹಿಂದೆಂದೂ ಕಾಣದ ಅಭಿವೃದ್ಧಿ ಸಾಧಿಸಿದೆ. ದೇಶವನ್ನು ಪ್ರಗತಿ ಪಥದತ್ತ ಮುನ್ನಡೆಸಲು ಮತ್ತೊಮ್ಮೆ ಮೋದಿ ಪ್ರಧಾನಿಯಾಗಬೇಕಿದೆ. ಹೀಗಾಗಿ ಬಿಜೆಪಿ ಅಭ್ಯರ್ಥಿ ಬಾಲರಾಜ್ ಅವರಿಗೆ ಹೆಚ್ಚಿನ ಮತ ನೀಡಿ ಗೆಲ್ಲಿಸಬೇಕು ಎಂದು ಮಾಜಿ ಶಾಸಕ ಬಿ.ಹರ್ಷವರ್ಧನ್ ಮನವಿ ಮಾಡಿದರು.

ಬುಧವಾರ ತಾಲೂಕಿನ ಸಂಗಮ ಕ್ಷೇತ್ರದಲ್ಲಿ ಮಹದೇವ ತಾತಾ ಅವರ ಗದ್ದುಗೆಗೆ ಪೂಜೆ ಸಲ್ಲಿಸಿದ ನಂತರ ಹರದನಹಳ್ಳಿ, ಕುರಿಹುಂಡಿ, ನಲ್ಲಿತಾಳಪುರ, ಗ್ರಾಪಂ ವ್ಯಾಪ್ತಿಯಲ್ಲಿ ಬಿಜೆಪಿ ಅಭ್ಯರ್ಥಿ ಬಾಲರಾಜು ಪರವಾಗಿ ಮತಯಾಚನೆ ನಡೆಸಿ ಮಾತನಾಡಿದರು.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸ್ವಚ್ಛ ಭಾರತ್ ಅಭಿಯಾನ, ಚಂದ್ರಯಾನ, ರಾಮಮಂದಿರ ನಿರ್ಮಾಣ, ಜನೌಷಧಿ ಕೇಂದ್ರ ಹಾಗೂ ಪ್ರತಿಹಳ್ಳಿಗೆ ಶುದ್ಧ ನೀರು ಒದಗಿಸುವ ಯೋಜನೆಗಳನ್ನು ಯಶಸ್ವಿಯಾಗಿ ನಿರ್ವಹಿಸಿ ದೇಶದ ಜನರ ಗೌರವಕ್ಕೆ ಪಾತ್ರರಾಗಿದ್ದಾರೆ, 60 ವರ್ಷಗಳ ಕಾಂಗ್ರೆಸ್ ಆಡಳಿತ ಹಾಗೂ 10 ವರ್ಷಗಳ ಬಿಜೆಪಿ ಆಡಳಿತವನ್ನು ಜನ ತುಲನೆ ಮಾಡಿ ನೋಡುತ್ತಿದ್ದಾರೆ, ಕೋವಿಡ್ ಸಂಕಷ್ಟ ಪರಿಸ್ಥಿತಿಯಲ್ಲಿ ಉಚಿತ ಲಸಿಕೆ ನೀಡಿ ದೇಶದ ಜನರ ಆರೋಗ್ಯ ಕಾಪಾಡಿದ, ದೇಶದ 80 ಕೋಟಿ ಜನರಿಗೆ ಉಚಿತ ಪಡಿತರ ವ್ಯವಸ್ಥೆ, ವಿದ್ಯುತ್ ಕಾಣದ ಗ್ರಾಮೀಣ ಪ್ರದೇಶಗಳಿಗೆ ಬೆಳಕು ಹರಿಸಿದ ಮೋದಿ ಸರ್ಕಾರದ ಜನಪರ ಯೋಜನೆಗಳನ್ನು ಜನ ಮೆಚ್ಚಿ ಕೊಂಡಾಡುತ್ತಿದ್ದಾರೆ ಎಂದು ಹೇಳಿದರು.


ಬಿಜೆಪಿ ಮುಖಂಡ ಬಿ.ಹರ್ಷವರ್ಧನ್ ಹುಲ್ಲಹಳ್ಳಿ ಗ್ರಾಪಂ ವ್ಯಾಪ್ತಿಯ ಮುಖಂಡರ ಸಭೆಯನ್ನು ಉದ್ಘಾಟಿಸಿ, ಮಾತನಾಡಿದರು.

ಕಾರ್ಯಕ್ರಮದಲ್ಲಿ ತಾಲೂಕು ಬಿಜೆಪಿ ಅಧ್ಯಕ್ಷ ಕೆಂಡಗಣ್ಣಪ್ಪ, ಚುನಾವಣಾ ಉಸ್ತುವಾರಿ ಸಿ.ಚಿಕ್ಕರಂಗನಾಯಕ, ಮುಖಂಡರಾದ ಮಂಜು ಪಟೇಲ್, ಹೊರಳವಾಡಿ ಮಹೇಶ್, ವಳಗೆರೆ ಪುಟ್ಟಸ್ವಾಮಿ, ಹುಲ್ಲಹಳ್ಳಿ ಮಹಾಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವ ಮೂರ್ತಿ, ಸೋಮಪ್ಪ, ಸುಂದರಪ್ಪ, ಮಹೇಶ್, ಚಿಕ್ಕನಾಯ್ಕ, ಗಂಗಾಧರ್, ಉದಯರವಿ, ಯಾಲಳ್ಳಿ ಗುರು, ಪ್ರಶಾಂತ್, ಸಿದ್ದರಾಜು, ಬಸಪ್ಪ, ಸಂಗರಾಜು, ಚೆನ್ನಮ್ಮ ಉಪಸ್ಥಿತರಿದ್ದರು.

ಮನೆ ಮನೆಗೆ ತಲುಪಿದ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್

ತಿ.ನರಸೀಪುರ, ಏ.17– ಚಾಮರಾಜ ನಗರ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್ ಅತ್ಯಧಿಕ ಬಹುಮತದಿಂದ ಗೆಲುವು ಸಾಧಿಸ ಲಿದ್ದಾರೆ ಎಂದು ಜಿಲ್ಲಾ ಗ್ರಾಮಾಂತರ ಪದವೀಧರ ಘಟಕದ ಅಧ್ಯಕ್ಷ ಎಂ. ರಮೇಶ್ ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜನಗರ ಮೀಸಲು ಲೋಕ ಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್ ಪರ ಕಾಂಗ್ರೆಸ್ ಪಕ್ಷದ ಕಾರ್ಯಕರ್ತರೊಡಗೂಡಿ ಕಿರಗಸೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹುಣಸೂರು, ಬಿಲಿಗೆರೆಹುಂಡಿ, ಕಿರಗಸೂರು, ಮನ್ನೇಹುಂಡಿ ಹಾಗೂ ಕೂಡ್ಲೂರು ಗ್ರಾಮಗಳಲ್ಲಿ ಮನೆ ಮನೆಗೆ ತೆರಳಿ ಕೇಂದ್ರದ ಗ್ಯಾರಂಟಿ ಕಾರ್ಡ್ ವಿತರಿಸಿ, ಮತಯಾಚನೆ ಮಾಡಿ ಅವರು ಮಾತನಾಡಿದರು.


ರಾಜ್ಯದಲ್ಲಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಳೆದ ವಿಧಾನಸಭೆ ಚುನಾವಣೆಯಲ್ಲಿ ನೀಡಿದ್ದ ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದುಕೊಂಡಿದೆ.ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಕೋಟ್ಯಂತರ ಮಹಿಳೆಯರ ಬದುಕು ಹಸನುಗೊಂಡಿದೆ. ಕಾಂಗ್ರೆಸ್ ಪಕ್ಷದ ಗ್ಯಾರಂಟಿಯಿಂದ ಎಷ್ಟೋ ಬಡ ಕುಟುಂಬಗಳು ಸ್ವಾವಲಂಬಿ ಜೀವನ ನಡೆಸುತ್ತಿದ್ದರೆ, ಅದೆಷ್ಟೋ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯೋಜನೆ ಹಣ ಸಹಕಾರಿ ಯಾಗಿದೆ. ಹಾಗಾಗಿ ಗ್ಯಾರಂಟಿ ಯೋಜನೆ ಗಳಿಂದ ಸಂತುಷ್ಟರಾಗಿರುವ ಕ್ಷೇತ್ರದ ಜನತೆ ಈ ಬಾರಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗೆ ಮತ ನೀಡಲು ನಿರ್ಧರಿಸಿದ್ದಾರೆ ಎಂದರು.

ತಾಲೂಕು ಕುರುಬ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಪ್ರಶಾಂತ್ ಬಾಬು ಮಾತ ನಾಡಿ, ವರುಣ ಕ್ಷೇತ್ರ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಪಕ್ಷದ ಪರವಾದ ಅಲೆಯಿದೆ. ಮಾಜಿ ಶಾಸಕ ಯತೀಂದ್ರ ಅವರು ಕ್ಷೇತ್ರ ವ್ಯಾಪಿ ಪ್ರವಾಸ ಕೈಗೊಂಡು ಮತ ಯಾಚನೆ ಮಾಡಿದ್ದು, ಸುನೀಲ್ ಬೋಸ್ ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಲಿದ್ದಾರೆ ಎಂದರು.

ಮೈಸೂರು ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಸಮಿತಿ ವಕ್ತಾರ ಹುಣಸೂರು ಬಸವಣ್ಣ ಮಾತನಾಡಿ, ಚುನಾವಣಾ ಪೂರ್ವದಲ್ಲಿ ಪಕ್ಷ ನೀಡಿದ್ದ 5 ಗ್ಯಾರಂಟಿ ಗಳಂತೆ ಕೇಂದ್ರ ಸಹ 5 ಉಪಯುಕ್ತ ಗ್ಯಾರಂಟಿಗಳನ್ನು ಘೋಷಣೆ ಮಾಡಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತಿದ್ದಂತೆ ಯುವ ನ್ಯಾಯ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾವಂತ ಯುವಕ ನಿಗೆ ಮೊದಲ ಉದ್ಯೋಗದ ಗ್ಯಾರಂಟಿ 1 ಲಕ್ಷ ರೂ ನೀಡುವುದು. ಪ್ರತಿ ಕುಟುಂಬದ ಒಬ್ಬ ಮಹಿಳೆಗೆ ಪ್ರತಿ ವರ್ಷ1 ಲಕ್ಷ ನೀಡುವ ಮಹಿಳಾ ನ್ಯಾಯ, ರೈತ ನ್ಯಾಯ, ಶ್ರಮಿಕ ನ್ಯಾಯ ಹಾಗೂ ಪಾಲುದಾರಿಕೆ ನ್ಯಾಯವನ್ನು ಜಾರಿಗೆ ತರಲಿದ್ದು, ಮತದಾರರು ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್‌ರವರಿಗೆ ಮತ ನೀಡುವ ಮೂಲಕ ಸಿದ್ದರಾಮಯ್ಯರವರ ಕೈ ಬಲಪಡಿಸ ಬೇಕೆಂದು ಮನವಿ ಮಾಡಿದರು.

ಕಿರಗಸೂರು ಗ್ರಾಪಂ ಅಧ್ಯಕ್ಷೆ ಚಂದ್ರಮ್ಮ, ಮಾಜಿ ಉಪಾಧ್ಯಕ್ಷರಾದ ನಾಗರಾಜು, ಕಿರಗಸೂರು ಮಹಾದೇವ್, ತಾಲೂಕು ಕುರುಬರ ಸಂಘದ ಅಧ್ಯಕ್ಷ ಮನ್ನೆಹುಂಡಿ ಮಹೇಶ್, ಎಪಿಎಂಸಿ ಮಾಜಿ ಅಧ್ಯಕ್ಷ ಎನ್. ಅನಿಲ್ ಕುಮಾರ್, ಮಾಜಿ ಜಿ.ಪಂ ಸದಸ್ಯ ಮಹದೇವ್, ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ಮಹದೇವಣ್ಣ ಮಾಜಿ ಪ್ರಧಾನ ಡಿ.ಆರ್. ಮೂರ್ತಿ, ಸೋಮಣ್ಣ, ರಾಜಶೇಖರ್, ಚಿನ್ನಬುದ್ದಿ, ಫೈನಾನ್ಸ್ ಕಾಂತರಾಜು, ಗಾಂಧಿ, ಗುತ್ತಿಗೆದಾರ ಬಸವ ರಾಜು, ದೇವರಾಜ್, ವೆಂಕಿ ಮತ್ತಿತರರಿದ್ದರು.

ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಭರ್ಜರಿ ಚುನಾವಣಾ ಪ್ರಚಾರ


ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರವಾಗಿ ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು,ಮುಖಂಡರು ಮನೆ ಮನೆಗೆ ತೆರಳಿ ಮತಯಾಚಿಸಿದರು.

ಶ್ರೀ ಒಲೆ ಮಸಣಮ್ಮನವರ ದೇವಸ್ಥಾನ ಲೋಕಾರ್ಪಣೆ

ನಂಜನಗೂಡು, ಏ.17– ನಂಜನಗೂಡು ತಾಲೂಕು, ದೊಡ್ಡಕವಲಂದೆ ಹೋಬಳಿ, ಹಂಪಾಪುರ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀ ಒಲೆ ಮಸಣಮ್ಮನವರ ದೇವಸ್ಥಾನದ ಕಳಸ ಪ್ರತಿಷ್ಠಾಪನೆ ಮತ್ತು ಲೋಕಾರ್ಪಣೆ ಕಾರ್ಯಕ್ರಮ ಏ.28ರಿಂದ 30ರವರೆಗೆ ನಡೆಯಲಿದೆ.

ಏ.28ರಂದು ಸಂಜೆ 4 ಗಂಟೆಗೆ ಅಗ್ರೋದಕ ಹೋಮ ಪೂಜೆ, ವೀರಗಾಸೆ ನತ್ತು ಸತ್ತಿಗೆ ಬಿರುದುಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮತ್ತು ಯಾಗಶಾಲೆ ಪ್ರವೇಶ ನಂತರ ಶ್ರೀ ಗಣಪತಿ ಪೂಜೆ, ವರುಣ ಹೋಮ, ರಕ್ಷಾ ಬಂಧನ, ಶಯನ ವಾಸ ಬಲಿ ಕಾರ್ಯಕ್ರಮ ನಡೆಯಲಿದೆ.

ಏ.30ರಂದು ಎಲ್ಲಾ ದೇವರುಗಳ ಭವ್ಯ ಉತ್ಸವ

ಏ.29ರಂದು ಮುಂಜಾನೆ ಒಲೆ ಮಸಣಮ್ಮನವರ ಪ್ರಾಣ ಪ್ರತಿಷ್ಠಾಪನೆ, ವಿಮಾನ ಗೋಪುರ ಕಳಸ ಸ್ಥಾಪನೆ ನಂತರ ಪ್ರಧಾನ ಕುಂಭಗಳ ಆರಾಧನೆ, ಹೋಮ, ಪೂರ್ಣಾಹುತಿ ನಂತರ ಕುಂಭಾಭಿಷೇಕ, ಕದಳಿ ಚೇತನ, ಮಹಾಮಂಗಳಾರತಿ ಕಾರ್ಯಕ್ರಮ ಜರುಗಲಿದೆ.

ಏ.30ರಂದು ಬೆಳಗ್ಗೆ 9.30ಕ್ಕೆ ಹಂಪಾಪುರ ಗ್ರಾಮದಲ್ಲಿರುವ ಶ್ರೀ ಬೇಗೂರು ಮಾಲರಸಮ್ಮ, ಶ್ರೀ ಒಲೆ ಮಸಣಮ್ಮ, ಶ್ರೀ ಚಿಕ್ಕಮಾಲರಸಮ್ಮ, ಶ್ರೀ ಪವಾಡ ಮಾಲರಸಮ್ಮ, ಶ್ರೀ ಕಾರ್ನಾಡು ಮಾಲಮ್ಮ ಮತ್ತು ಶ್ರೀ ಸಿದ್ದರಾಮೇಶ್ವರ ಹಾಗೂ ಚಿಕ್ಕಮ್ಮ ಚಿಕ್ಕದೇವಿ ಅವರ ಭವ್ಯ ಉತ್ಸವ ನಡೆಯಲಿದ್ದು, ಕಾಗಿನೆಲೆ ಕೆ.ಆರ್.ನಗರದ ಶಾಖಾ ಮಠದ ಶ್ರೀ ಶ್ರೀ ಶಿವಾನಂದಪುರಿ ಮಹಾಸ್ವಾಮಿಗಳು ಈ ಕಾರ್ಯಕ್ರಮದ ಸಾನ್ನಿಧ್ಯ ವಹಿಸುವರು.


ಸರಗೂರು ತಾಲೂಕಿನ ಕಂದೇಗಾಲ ಶ್ರೀಮಹದೇಶ್ವರ ಸ್ವಾಮಿ ದೇವಸ್ಥಾನದ ಜಾತ್ರೆ ಆವರಣದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಬಹಿರಂಗ ಸಭೆಯ ಕಾರ್ಯಕ್ರಮವನ್ನು ಶಾಸಕ ಅನಿಲ್ ಚಿಕ್ಕಮಾದು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಸುನೀಲ್ ಬೋಸ್, ಪಕ್ಷದ ಕಾರ್ಯಕರ್ತರು ಉದ್ಘಾಟಿಸಿದರು

ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಕುರುಬರ ಸಂಘದಿಂದ ಅಭಿನಂದನೆ



ಹೆಚ್.ಡಿ.ಕೋಟೆ, ಏ.17– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಮೈಸೂರು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ ಅಭಿನಂದಿಸಿ, ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲುವು ಸಾಧಿಸಲಿ ಎಂದು ಶುಭ ಹಾರೈಸಿದರು.

ಶ್ರೀ ಕೋಟೆ ಪಟ್ಟಣದ ಸಂತೆ ಮೈದಾನದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಸಭೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಚಿವರುಗಳಾದ ಎಚ್.ಸಿ.ಮಹದೇವಪ್ಪ, ವೆಂಕಟೇಶ್, ಮೈಮುಲ್ ನಿರ್ದೇಶಕ ಹಿರೇಗೌಡ, ಜಿಪಂ ಸದಸ್ಯ ರವಿ, ಪುರಸಭಾ ಸದಸ್ಯ ಎಚ್.ಸಿ. ನರಸಿಂಹಮೂರ್ತಿ, ಮುಖಂಡರುಗಳಾದ ಶ್ರೀನಿವಾಸ್, ಹೋಂಡಾ ನಯಾಜ್, ವೀರೇಗೌಡ, ಬೀರವಾಳು ಚಿಕ್ಕಣ್ಣ, ಮಾದೇಗೌಡ, ನಟರಾಜ್, ಗಂಡುಗಣ್ಣೇಗೌಡ, ಪುಟ್ಟೇಗೌಡ, ಚಿಕ್ಕಣ್ಣ, ಮುಂತಾದವರು ಹಾಜರಿದ್ದರು.

ನಾವು ಕಾಂಗ್ರೆಸ್ ಪರ; ವೀರಶೈವ ಮುಖಂಡರ ಘೋಷಣೆ

ತಿ.ನರಸೀಪುರ, ಏ.17– ರಾಜ್ಯದಲ್ಲಿ ವೀರಶೈವ ಲಿಂಗಾಯತ ಸಮಾಜ ಬಿಜೆಪಿ ಪಕ್ಷದ ಪರವಾಗಿದೆ, ಕಾಂಗ್ರೆಸ್‌ಗೆ ಸಮಾಜದ ಬೆಂಬಲ ಇಲ್ಲ ಎಂದು ಹಬ್ಬಿರುವ ಸುದ್ದಿ ಸುಳ್ಳಾಗಿದ್ದು ವೀರಶೈವ ಲಿಂಗಾಯತ ಸಮಾಜ ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡಲಿದೆ ಎಂದು ಕಾಂಗ್ರೆಸ್ ಪದವೀಧರ ಘಟಕದ ತಾಲೂಕು ಅಧ್ಯಕ್ಷ ಪರಮೇಶ್ ಪಟೇಲ್ ಸ್ಪಷ್ಟಪಡಿಸಿದ್ದಾರೆ.

ಪಟ್ಟಣದ ಕಾಂಗ್ರೆಸ್ ಪಕ್ಷದ ಕಚೇರಿಯಲ್ಲಿ ವೀರಶೈವ ಮುಖಂಡರೊಡಗೂಡಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವೀರಶೈವ ಸಮಾಜವು ಮೊದಲಿನಿಂದಲೂ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುತ್ತಾ ಬಂದಿದೆ.ವೀರೇಂದ್ರ ಪಾಟೀಲ್, ನಿಜಲಿಂಗಪ್ಪರ ಕಾಲದಿಂದಲೂ ವೀರಶೈವ ಸಮಾಜದ ಕಾಂಗ್ರೆಸ್ ಪಕ್ಷದ ಜೊತೆಗಿದೆ.ಹೀಗಿರುವಾಗ ಕೆಲವರು ವೀರಶೈವ ಸಮಾಜ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ಮಾತ್ರವೇ ಬೆಂಬಲಿಸುತ್ತದೆ ಎಂದು ಸುಳ್ಳು ಸುದ್ದಿಯನ್ನು ಹರಡಿಸುತ್ತಿದ್ದು,ಇದಕ್ಕೆ ಯಾವುದೇ ಮನ್ನಣೆ ನೀಡಬೇಕಾದ ಅಗತ್ಯವಿಲ್ಲ ಎಂದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ವೀರಶೈವ ಸಮಾಜ ಕಾಂಗ್ರೆಸ್ ಪಕ್ಷಕ್ಕೆ 35 ಶಾಸಕರನ್ನು ಕೊಟ್ಟಿದೆ.ಹಾಗಾಗಿ ಸಮಾಜವು ಕಾಂಗ್ರೆಸ್ ಪಕ್ಷದ ಬೆಂಬಲಕ್ಕಿದೆ ಎಂಬ ಬಗ್ಗೆ ಯಾವುದೇ ಗೊಂದಲವಿಲ್ಲ, ವಿಧಾನಸಭೆ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಪರವಾಗಿ ಕೆಲಸ ಮಾಡಿದಂತೆ ಲೋಕಸಭೆ ಚುನಾವಣೆಯಲ್ಲೂ ಸಮಾಜ ಪಕ್ಷದೊಂದಿಗಿರುತ್ತದೆ ಎಂದು ತಿಳಿಸಿದರು. ತಾಲೂಕು ಕೃಷಿಕ ಸಮಾಜದ ಅಧ್ಯಕ್ಷ ಶಿವಮಲ್ಲಪ್ಪ ಮಾತನಾಡಿ, ಲಿಂಗಾಯಿತರು ಎಂದರೆ ಬಿಜೆಪಿಗೆ ಮತ ನೀಡುತ್ತಾರೆ ಎಂಬ ತಿಳುವಳಿಕೆ ತಪ್ಪು, ಎಲ್ಲಾ ಜಾತಿ ಜನಾಂಗದವರು ಎಲ್ಲ ಪಕ್ಷಗಳಲ್ಲಿಯೂ ಗುರುತಿಸಿಕೊಂಡಿದ್ದಾರೆ.ಅದೇ ರೀತಿ ಕೆಲ ಲಿಂಗಾಯತರು ಬಿಜೆಪಿ ಜೊತೆ ಗುರುತಿಸಿಕೊಂಡಿರಬಹುದು.ಹಾಗೆಂದ ಮಾತ್ರಕ್ಕೆ ಲಿಂಗಾಯತರು ಕಾಂಗ್ರೆಸ್ ಪಕ್ಷದ ವಿರೋಧವಾಗಿದ್ದಾರೆ ಎಂಬುದು ಸತ್ಯಕ್ಕೆ ದೂರವಾದ ವಿಷಯವಾಗಿದೆ ಎಂದರು. ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ನಾವೆಲ್ಲಾ ಲಿಂಗಾಯತರು ಇಡೀ ಕ್ಷೇತ್ರ ಸುತ್ತಿ ಮಹದೇವಪ್ಪನವರ ಪರ ಮತ ಯಾಚಿಸಿದ್ದೇವೆ ಹಾಗೂ ಹೆಚ್ಚಿನ ಮತ ನೀಡಿದ್ದೇವೆ. ಅದೇ ರೀತಿ ಲೋಕಸಭೆಗೆ ಸ್ಪರ್ಧಿಸಿರುವ ಅವರ ಪುತ್ರ ಸುನೀಲ್ ಬೋಸ್‌ರವರಿಗೂ ಹೆಚ್ಚಿನಮತ ಕೊಡಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ತಿಳಿಸಿದರು.

ಬಸವಣ್ಣನವರ ತತ್ವದ ಆಧಾರದ ಮೇಲೆ ಕಾಂಗ್ರೆಸ್ ಪಕ್ಷ ಅವರ ಆದರ್ಶಗಳನ್ನಿಟ್ಟುಕೊಂಡು ಸಮತೋಲನ ಸಮಾಜ ಕಟ್ಟಲು ಪ್ರಯತ್ನ ಮಾಡುತ್ತಿದೆ.ಅವರ ಪ್ರಯತ್ನಕ್ಕೆ ಸಮಾಜ ಬೆಂಬಲವಾಗಿ ನಿಲ್ಲಬೇಕು ಎಂದು ತಿಳಿಸಿದರು. ತಾಪಂ ಮಾಜಿ ಸದಸ್ಯ ಬೆ.ಗು.ಶಿವಸ್ವಾಮಿ, ಕಿಸಾನ್ ಘಟಕದ ಅಧ್ಯಕ್ಷ ಚಂದ್ರಧರ ಮಾತನಾಡಿದರು. ಜಾಗತಿಕ ಲಿಂಗಾಯತ ಮಹಾಸಭಾದ ಅಧ್ಯಕ್ಷ ತೊಟ್ಟವಾಡಿ ರವಿ, ಕಾಂಗ್ರೆಸ್ ಮುಖಂಡ ದೊಡ್ಡನಹುಂಡಿ ನಂಜುಂಡಸ್ವಾಮಿ, ಕಲಿಯೂರು ಪರಪ್ಪ ಪತ್ರಿಕಾಗೋಷ್ಠಿಯಲ್ಲಿ ಹಾಜರಿದ್ದರು.


ತಿ.ನರಸೀಪುರ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬುಧವಾರ ಕರೆಯಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಪದವೀಧರ ಘಟಕದ ತಾಲೂಕು ಅಧ್ಯಕ್ಷ ಪರಮೇಶ್ ಪಟೇಲ್ ಮಾತನಾಡಿದರು.

ಪ್ರಾಮಾಣಿಕತೆ ಮೆರೆದ ಪೊಲೀಸ್ ಪೇದೆ

ಹುಣಸೂರು, ಏ.17– ಮದ್ದೂರು ಬಳಿ ಸಿಕ್ಕಿದ ಪರ್ಸ್‌ನ್ನು ಪೊಲೀಸ್ ಪೇದೆಯೊಬ್ಬರು ಪೊಲೀಸ್ ಠಾಣೆಗೆ ಒಪ್ಪಿಸುವ ಮೂಲಕ ಪ್ರಾಮಾಣಿಕತೆ ಮೆರೆದ ಘಟನೆ ಮದ್ದೂರು ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಸಂಭವಿಸಿದೆ.

ಹುಣಸೂರು ತಾಲೂಕು ಹನಗೂಡು ಹೋಬಳಿ ಟಿಆರ್‌ಎಲ್ ಸಟ್ಲ್ಮೆಂಟ್ ಗುರುಪುರ ಗ್ರಾಮದ ಲಮಾ ಎಂಬುವರು ಕಳೆದ ಹತ್ತು ದಿನಗಳ ಹಿಂದೆ ಪರ್ಸ್ ಕಳೆದುಕೊಂಡಿದ್ದರು. ಪರ್ಸ್‌ನಲ್ಲಿ 6,250 ನಗದು, ಆಧಾರ್ ಕಾರ್ಡ್, ಐಡಿ ಕಾರ್ಡ್, ಜರ್ಮನಿ ಸೇರಾವೆ ಯೂನಿವರ್ಸಿಟಿ ಕಾರ್ಡ್ ಸೇರಿದಂತೆ ಇತರ ಪ್ರಮುಖ ದಾಖಲಾತಿಗಳಿದ್ದವು. ಮದ್ದೂರು ಪೊಲೀಸ್ ಠಾಣೆಯ ಕಾನ್‌ಸ್ಟೇಬಲ್ ಚಂದ್ರಪ್ಪ ಅವರಿಗೆ ಪರ್ಸ್ ಸಿಕ್ಕಿದ್ದು, ಅವರು ಮದ್ದೂರು ಪೊಲೀಸ್ ಠಾಣೆಯ ಸರ್ಕಲ್ ಇನ್ಸ್‌ಪೆಕ್ಟರ್‌ಗೆ ನೀಡಿರುತ್ತಾರೆ. ಸರ್ಕಲ್ ಇನ್ಸ್‌ಪೆಕ್ಟರ್ ವಿಳಾಸವನ್ನು ಪತ್ತೆ ಹಚ್ಚಿ ವಾರಸುದಾರರಿಗೆ ಪರ್ಸ್ ಹಸ್ತಾಂತರಿಸಿದರು.


ಮಂಡ್ಯ ಲೋಕಸಭಾ ಚುನಾವಣಾ ಪ್ರಚಾರಕ್ಕೆ ಆಗಮಿಸುತ್ತಿರುವ
ಶ್ರೀ ಹೆಚ್.ಡಿ.ಕುಮಾರಸ್ವಾಮಿರವರು
ಮತ್ತು
ಶ್ರೀ ಬಿ.ಎಸ್.ಯಡಿಯೂರಪ್ಪರವರು
ಹಾಗೂ ಎಲ್ಲಾ ಎರಡು ಪಕ್ಷದ
ನಾಯಕರುಗಳಿಗೆ , ಮುಖಂಡರುಗಳಿಗೆ
ಸುಸ್ವಾಗತ
ದಿನಾಂಕ : 18-04-2024 ಮಧ್ಯಾಹ್ನ 3.30ಕ್ಕೆ
ಸ್ಥಳ: ಕೆ.ಆರ್.ನಗರದ ರೇಡಿಯೋ ಮೈದಾನ ಮೈಸೂರು
ಕ್ರಮ ಸಂ.
ಅಭ್ಯರ್ಥಿಯ ಹೆಸರು
ಅಭ್ಯರ್ಥಿಯ ಭಾವಚಿತ್ರ
ಚಿಹ್ನೆ
ಗುಂಡಿ ಒತ್ತಿ
1
ಶ್ರೀ ಹೆಚ್.ಡಿ.ಕುಮಾರಸ್ವಾಮಿ
ಎಲ್ಲಾ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಮತ್ತು ನಾಗರೀಕ ಬಂಧುಗಳು
ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ
VISMAYA
8050302424